ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 24 ಮಂಗಳವಾರ 2022

ಸಂಪುಟ: 43 | ಸಂಚಿಕೆ: 38 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಒಂದು ಇಲ್ಲವೆ ಎರಡನೇ ತರಗತಿ ಪಠ್ಯದಲ್ಲಿ
ನೈತಿಕ ಶಿಕ್ಷಣ ಅಳವಡಿಕೆ

ರಾಷ್ಟ್ರೀಯವಾದಿ ಶಿಕ್ಷಣ ವ್ಯವಸ್ಥೆಯಿಂದ ಹಿಂದೆ ಸರಿಯಲ್ಲ: ಶಿಕ್ಷಣ ಸಚಿವ ಬಿ.ಸಿ.ನಾಗೇಶ್

ಬೆಂಗಳೂರು,ಮೇ 23– ಶಿಕ್ಷಣ ವ್ಯವಸ್ಥೆಯಲ್ಲಿ ನೈತಿಕ ಅಂಶಗಳನ್ನು ಅಳವಡಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ, ಎಷ್ಟೇ ಸಮಸ್ಯೆ ಎದುರಾದರೂ ರಾಷ್ಟ್ರೀಯವಾದಿ ಶಿಕ್ಷಣ ನೀಡುವ ಸರ್ಕಾರ ನಿಲುವಿನಿಂದ ವಿಮುಖವಾಗುವುದಿಲ್ಲ. ಪ್ರಸಕ್ತ ವರ್ಷ ಒಂದು ಪಠ್ಯವಾಗಿ ನೈತಿಕ ಶಿಕ್ಷಣವನ್ನು ಜಾರಿಗೊಳಿಸುತ್ತೇವೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

ಚಾಮರಾಜಪೇಟೆಯ ಉದಯ ಭಾನು ಪಬ್ಲಿಕ್ ಶಾಲೆಯ ಆಟದ ಮೈದಾನದಲ್ಲಿ ಆಚಾರ್ಯ ನರರತ್ನ ಸುರಿಜಿ ಮಹಾರಾಜ್ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡದಾದ ಒಂದೇ ಬಾರಿಗೆ 11 ಮಂದಿ ಬಾಲಕರು ಮತ್ತು ಬಾಲಕಿಯರಿಗೆ ಸನ್ಯಾಸ ಧೀಕ್ಷೆ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಕೇಂದ್ರ ಸರ್ಕಾರ ಶಿಕ್ಷಣದಲ್ಲಿ ಸಮಗ್ರ ಬದಲಾವಣೆ ▶ 8ನೇ ಪುಟಕ್ಕೆ

ರಾಷ್ಟ್ರಕವಿ ಕುವೆಂಪುಗೆ ಅಪಮಾನ ಮಾಡಿಲ್ಲ

ಬೆಂಗಳೂರು: 4ನೇ ತರಗತಿ ಪಠ್ಯ ಪರಿಷ್ಕರಣೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರಿಗೆ ಶಿಕ್ಷಣ ಇಲಾಖೆ ಅಪಮಾನ ಮಾಡಿದ ಎಂಬ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಈ ಕುರಿತು ಸಚಿವ ಬಿ.ಸಿ.ನಾಗೇಶ್ ಪ್ರತಿಕ್ರಿಯಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ 4ನೇ ತರಗತಿ ಪರಿಸರ ಅಧ್ಯಯನ ಪಠ್ಯ ಪರಿಷ್ಕರಣೆ ಮಾಡಿಲ್ಲ. ಆದರೆ ಈ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ. ಕುವೆಂಪು ಬಗ್ಗೆ ಎಷ್ಟು ಪಠ್ಯ ಸೇರಿಸಿದ್ದೇವೆ ನೋಡಲಿ. ನಾವು ಕುವೆಂಪು ಬಗ್ಗೆ ಹೆಚ್ಚು ಪಠ್ಯ ಸೇರಿಸಿದ್ದೇವೆ. ಶಿಕ್ಷಣ ಇಲಾಖೆ ಕುವೆಂಪು ಅವರಿಗೆ ಅಪಮಾನ ಮಾಡಿಲ್ಲ ಎಂದು ಸ್ಪಷ್ಟನೆ ನೀಡಿದರು.

ವಿವಾದದ ಮೂಲಕ ರಾಜಕೀಯ ಲಾಭಕ್ಕೆ ಕಾಂಗ್ರೆಸ್ ಯತ್ನ



ಬೆಂಗಳೂರು,ಮೇ 23 (ಕೆಎಂಶಿ)–ಪಠ್ಯಪುಸ್ತಕದಲ್ಲಿ ಜಾತಿ ರಾಜಕೀಯ ಮಾಡಿ, ಆ ಮೂಲಕ ರಾಜಕೀಯ ಲಾಭ ಪಡೆಯಲು ಕಾಂಗ್ರೆಸ್ ನಾಯಕರು ಹೊರಟಿದ್ದಾರೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಕಿಡಿಕಾರಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಒಂದು ಪುಟವಿದ್ದ ಟಿಪ್ಪು ಪಠ್ಯವನ್ನು ಆರು ಪುಟಕ್ಕೆ ವಿಸ್ತರಿಸುತ್ತಾರೆ. ಅದೇ ಸಮಯದಲ್ಲಿ ಮೈಸೂರು ರಾಜವಂಶಸ್ಥ ಒಡೆಯರ್ ಪಾಠವನ್ನು ಕಡಿತ ಮಾಡುತ್ತಾರೆ. ಪ್ರತಿಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಇದೆಲ್ಲವನ್ನು ಏಕೆ ಪ್ರಶ್ನಿಸಿರಲಿಲ್ಲ? ಸ್ವಾತಂತ್ರ್ಯ ಹೋರಾಟಗಾರರು, ಕ್ರಾಂತಿಕಾರರ ಬಗ್ಗೆ ನಾವು ಪಠ್ಯದಲ್ಲಿ ಮತ್ತಷ್ಟು ಸೇರಿಸಿದ್ದೇವೆಯೇ ಹೊರತು ಯಾವುದನ್ನೂ ತೆಗೆದಿಲ್ಲ ಎಂದು ನಾಗೇಶ್ ಸ್ಪಷ್ಟಪಡಿಸಿದರು.

ಬೆಂಗಳೂರು ನಿರ್ಮಾತೃ ಕೆಂಪೇಗೌಡರು ಎಂಬುದು ಎಲ್ಲರಿಗೂ ತಿಳಿದಿದೆ. ಆದರೆ ಬೆಂಗಳೂರು ಆರಂಭಿಸುವ ಸಂದರ್ಭದಲ್ಲಿ ಕೆಂಪೇಗೌಡರ ಬಗ್ಗೆ ವಿವರಣೆ ನೀಡಲು ಇವರು ಮುಂದಾಗಲಿಲ್ಲ. ಬರಗೂರು ರಾಮಚಂದ್ರಪ್ಪ ಅವರು ತುಂಬಾ ಒಳ್ಳೆಯವರು, ಅವರು ಒತ್ತಡಕ್ಕೆ ಮಣಿದು ಈ ರೀತಿ ಮಾಡಿದ್ದಾರೆಯೇ ಎಂದು ಪ್ರಶ್ನಿಸಿದ್ದಾರೆ. ನಾರಾಯಣಗುರು, ಭಗತ್‌ಸಿಂಗ್, ಇವರ ಜೊತೆಗೆ ಕ್ರಾಂತಿಕಾರಿಗಳಾದ ರಾಜದೇವ್, ಸುಖ್‌ದೇವ್ ಅವರ ಪಠ್ಯವನ್ನೂ ಅಳವಡಿಸಿದ್ದೇವೆ. ಕ್ರಾಂತಿಕಾರಿಗಳ ಬಗ್ಗೆ ವಿಪಕ್ಷ ನಾಯಕರು ಈಗ ಮಾತನಾಡುತ್ತಿರುವುದು ಸಂತೋಷ. ಬರಗೂರು ರಾಮಚಂದ್ರಪ್ಪ ಅವರು ಇದ್ದಾಗ ಸಿದ್ದರಾಮಯ್ಯ ಪ್ರಶ್ನೆ ಮಾಡಲೇ ಇಲ್ಲ. ಕುವೆಂಪು ಬಗ್ಗೆ ಒಂದೇ ಒಂದು ಸಾಲು ಬದಲಾವಣೆ ಮಾಡಿದ್ದೀರಾ? ಇಲ್ಲ ಸಲ್ಲದ್ದನ್ನು ಹೇಳಿ ಜಾತಿ ಮಧ್ಯೆ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ಅವರ ಪಠ್ಯ ಕೈಬಿಟ್ಟು, ಇವರ ಪಠ್ಯ ಕೈಬಿಟ್ಟು ಅನ್ನುವುದೇ ದೊಡ್ಡ ವಿಷಯವಾಗಿದೆ. ರಾಮಚಂದ್ರಪ್ಪ ಇರುವ ಸಂದರ್ಭದಲ್ಲಿ ಪಠ್ಯಗಳನ್ನು ಬಿಟ್ಟು ವಿಚಾರಗಳ ಬಗ್ಗೆ ▶ 8ನೇ ಪುಟಕ್ಕೆ



ನನಗೆ ಆಗ ತೋಚಲೇ ಇಲ್ಲ ನೋಡ್ರೀ ..!!!

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ
ಆರು ಮಂದಿ ನಾಮಪತ್ರ ಸಲ್ಲಿಕೆ

ಮೈಸೂರು, ಮೇ 23(ಆರ್‌ಕೆ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಲು ಈವರೆಗೆ 6 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ಎಸ್‌ಡಿಪಿಐನಿಂದ ಮೈಸೂರಿನ ರಫತ್ ಉಲ್ಲಾ ಖಾನ್, ಮದ್ದೂರು ತಾಲೂಕಿನ ಛತ್ರದ ಹೊಸಹಳ್ಳಿ ಗ್ರಾಮದ ಸಿ.ಕಾವ್ಯಶ್ರೀ (ಪಕ್ಷೇತರ), ಯಳಂದೂರು ತಾಲೂಕಿನ ಆವಲ್ ಕಂದಹಳ್ಳಿ ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್ ಬಡಾವಣೆಯ ಎಂ.ಮಹೇಶ್ (ಪಕ್ಷೇತರ) ಹಾಗೂ ಬಿಜೆಪಿಯ ಎಂ.ವಿ.ರವಿಶಂಕರ್ (3ನೇ ಪ್ರತಿ) ಇಂದು ನಾಮಪತ್ರ ಸಲ್ಲಿಸಿದರು. ಆರಂಭದ ದಿನ ಮೇ 19ರಂದು ಬಿಜೆಪಿಯ ಎಂ.ವಿ.ರವಿಶಂಕರ್ 2 ನಾಮಪತ್ರ ಸಲ್ಲಿಸಿದ್ದರು. ಮೇ 20ರಂದು ಪಕ್ಷೇತರ ಅಭ್ಯರ್ಥಿಯಾಗಿ ಎನ್.ಎಸ್.ವಿನಯ್ ಹಾಗೂ ಜೆಡಿಎಸ್‌ನಿಂದ ಹೆಚ್.ಕೆ.ರಾಮು ಉಮೇದುವಾರಿಕೆ ಬಯಸಿ ನಾಮಪತ್ರ ಸಲ್ಲಿಸಿದ್ದರು. ಒಟ್ಟಾರೆ ಇದುವರೆಗೆ ಬಿಜೆಪಿ, ಜೆಡಿಎಸ್ ಸೇರಿದಂತೆ ಒಟ್ಟು 6 ಮಂದಿ ನಾಮಪತ್ರ ಸಲ್ಲಿಸಿದಂತಾಗಿದೆ. ಮೇ 26 ಉಮೇದುವಾರಿಕೆ ಸಲ್ಲಿಸಲು ಕಡೇ ದಿನವಾಗಿದೆ.

ಪ್ರಿಯಕರನ ಸೇರಲು ಹೆತ್ತ ಕಂದನ ‘ಅನಾಥ’ ಮಾಡಿದ ಮಹಾ ಪ್ರೇಯಸಿ!

ಮೈಸೂರು, ಮೇ 23– ರಾಯಚೂರು ಬಸ್ ನಿಲ್ದಾಣದಲ್ಲಿ ಅಪರಿಚಿತ ಮಹಿಳೆ, ಯುವಕನ ಕೈಗೆ ಮಗು ಕೊಟ್ಟು ನಾಪತ್ತೆ ಯಾಗಿದ್ದ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದೆ. ಪ್ರೀತಿಗೆ ಅಡ್ಡಿಯಾಗಿದ್ದ ಮಗುವನ್ನು ಅನಾಥ ಎಂದು ಬಿಂಬಿಸುವ ಸಲುವಾಗಿ ಮೈಸೂರಿಗೆ ಮಗುವನ್ನು ತಂದ ಯುವಕ ಮತ್ತು ಆತನ ಪ್ರೇಯಸಿಯ ನಾಟಕ ಬಯಲಾಗಿದೆ.

ಯಾದಗಿರಿ ತಾಲೂಕು ಠಾಣಾ ಗುಂದಿ ಗ್ರಾಮದ ಪೈಂಟರ್ ಯೇಸುರಾಜ್ ಎಂಬುವರ ಪತ್ನಿ ರೇಣುಕಾ ಅಲಿಯಾಸ್



ಮಗುವಿನೊಂದಿಗೆ ಮೇ 9ರಂದು ರಾಯಚೂರಿನಿಂದ ಮೈಸೂರಿನ ಲಷ್ಕರ್ ಠಾಣೆಗೆ ಬಂದಿದ್ದ ರಘು

ಮಮತಾ (21) ಮತ್ತು ಹೆಚ್.ಡಿ.ಕೋಟೆ ತಾಲೂಕು ನೂರಲಕುಪ್ಪೆ ಗ್ರಾಮದ ಬಿ.ರಘು (21) ಸುಮಾರು ಒಂದೂವರೆ ವರ್ಷದ ಹಿಂದೆ ಇನ್ಸ್ಟಾಗ್ರಾಮ್‌ನಲ್ಲಿ ಪರಿಚಯವಾಗಿ ಒಬ್ಬರಿಗೊಬ್ಬರು ಪ್ರೀತಿಸಲಾರಂಭಿಸಿದ್ದಾರೆ ಎಂದು ಹೇಳಲಾಗಿದೆ. ಕಳೆದ 8 ತಿಂಗಳ ಹಿಂದೆ ರೇಣುಕಾಗೆ ಗಂಡು ಮಗು ಜನಿಸಿದ್ದು, ಈ ಮಗುವನ್ನು ತ್ಯಜಿಸಿ ತಾವಿಬ್ಬರೂ ಪ್ರತ್ಯೇಕವಾಗಿ ಜೀವಿಸಬೇಕೆಂಬ ಉದ್ದೇಶದಿಂದ ಮಗುವನ್ನು ಅನಾಥ ಮಾಡಲು ಈ ಪ್ರೇಮಿಗಳು ನಿರ್ಧರಿಸಿದ್ದರು ▶ 8ನೇ ಪುಟಕ್ಕೆ

ವಿಧಾನಸಭೆಯಿಂದ ಪರಿಷತ್‌ಗೆ ಚುನಾವಣೆ
ನಾಗರಾಜ್ ಯಾದವ್, ಅಬ್ದುಲ್ ಜಬ್ಬಾರ್ ಕಾಂಗ್ರೆಸ್ ಅಭ್ಯರ್ಥಿಗಳು



ನಾಗರಾಜ್ ಯಾದವ್



ಅಬ್ದುಲ್ ಜಬ್ಬಾರ್

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಕೊನೆಗೂ ಅಭ್ಯರ್ಥಿಗಳ ಆಯ್ಕೆ ಮಾಡಿದ್ದು, ಕಾಂಗ್ರೆಸ್ ವಕ್ತಾರ ನಾಗರಾಜ್ ಯಾದವ್ ಹಾಗೂ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿರುವ ಅಬ್ದುಲ್ ಜಬ್ಬಾರ್ ▶ 8ನೇ ಪುಟಕ್ಕೆ

ನಾಮಪತ್ರ ಸಲ್ಲಿಕೆಗೆ ಕೆಲವೇ ಗಂಟೆಗಳು ಬಾಕಿ ಇದ್ದು, ಅಭ್ಯರ್ಥಿಗಳ ಆಯ್ಕೆ ಮಾಡುವಲ್ಲಿ ಬಿಜೆಪಿ ಮತ್ತು ಜೆಡಿಎಸ್ ತಿಣುಕಾಡುತ್ತಿವೆ.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ವಿಶ್ವಕೋಶದ ಎರಡು ಸಂಪುಟ ಶೀಘ್ರ ಬಿಡುಗಡೆ

● ವಿವಿ ಕುಲಪತಿ ಪ್ರೊ.ಹೇಮಂತ್‌ಕುಮಾರ್ ● ಸಂಸ್ಥೆಯ ಹಸ್ತಪ್ರತಿ ವಿಭಾಗದಿಂದ ಪರಿಷ್ಕರಿಸಿರುವ ನಾಲ್ಕು ಪುಸ್ತಕಗಳ ಬಿಡುಗಡೆ

ಮೈಸೂರು,ಮೇ 23(ಪಿಎಂ)– ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ವಿಶ್ವ ಕೋಶ ಯೋಜನೆಗೆ ಸಂಬಂಧಿಸಿದ ಎರಡು ಸಂಪುಟ ಗಳು ಸಿದ್ಧಗೊಂಡಿದ್ದು, ಅವುಗಳನ್ನು ಶೀಘ್ರದಲ್ಲಿ ಬಿಡು ಗಡೆ ಮಾಡಲಾಗುವುದು ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ತಿಳಿಸಿದರು.


ಮೈಸೂರಿನ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಸಮಾ ರಂಭದಲ್ಲಿ ಸಂಸ್ಥೆಯಿಂದ ಹೊರತಂದಿರುವ 'ವೈದ್ಯ ಸಂಪುಟ', 'ಚಂದ್ರಸಾಗರವರ್ಣಿಯ ಮೂರು ಕೃತಿಗಳು', 'ಗಣಿತ ವಿಳಾಸಂ' ಮತ್ತು 'ವಿರಾಟ ಪರ್ವ ಸಂಪುಟ' ಸೇರಿದಂತೆ ನಾಲ್ಕು ಪುಸ್ತಕಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕನ್ನಡ ವಿಶ್ವಕೋಶದ 8 ಮತ್ತು 9ನೇ ಸಂಪುಟಗಳು (ಪರಿಷ್ಕೃತ ಆವೃತ್ತಿ) ಈಗಾಗಲೇ ಸಿದ್ಧಗೊಂಡಿವೆ. ದಕ್ಷಿಣ ಪದವೀಧರ ಕ್ಷೇತ್ರದ ಪರಿಷತ್ ಚುನಾವಣೆ ಬಳಿಕ ಅವುಗಳ ಬಿಡುಗಡೆ ಸಮಾರಂಭ ಹಮ್ಮಿ ಕೊಳ್ಳಲಾಗುವುದು ಎಂದು ಹೇಳಿದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ವಿಭಾಗದಿಂದ ಪರಿಷ್ಕರಣೆಗೊಂಡು ಪ್ರಕಟವಾಗಿರುವ ನಾಲ್ಕು ಪುಸ್ತಕಗಳನ್ನು ಸಂತಸದಿಂದ ಬಿಡುಗಡೆ ಮಾಡಿ ದ್ದೇನೆ. ಈ ಪೈಕಿ 'ಗಣಿತ ವಿಳಾಸಂ' ಪುಸ್ತಕವು ಪ್ರಾಚೀನ ಕಾಲಘಟ್ಟದ ಗಣಿತ ಶಾಸ್ತ್ರದ ಮೇಲೆ ಬೆಳಕು ಚೆಲ್ಲಿದೆ. ಅಂತೆಯೇ 'ವೈದ್ಯ ಸಂಪುಟ' ಕೃತಿಯು ಹಾವಿನ ಕಡಿತ, ಕುಷ್ಠರೋಗ, ಹಲವು ರೀತಿಯ ಕೆಮ್ಮು, ಜ್ವರ ಸೇರಿದಂತೆ ನೂರಾರು ರೋಗಗಳ ಚಿಕಿತ್ಸಾ ವಿಧಾನದ ಬಗ್ಗೆ ವಿವರಿಸಿರುವ ಪ್ರಾಚೀನ ಶಾಸ್ತ್ರ ಗಂಥವಾಗಿದೆ. ಹಾಗೆಯೇ 'ಚಂದ್ರಸಾಗರವರ್ಣಿಯ' ಪುಸ್ತಕವು ಮೂರು ಬೇರೆ ಬೇರೆ ಕೃತಿಗಳಲ್ಲಿನ ಮಹತ್ವದ ಅಂಶಗಳನ್ನು ಒಳಗೊಂಡಿದೆ ಎಂದು ತಿಳಿಸಿದರು.

ಅದೇ ರೀತಿ ಭೀಮಸೇನ ವಿಲಾಸ, ವಿರಾಟಪರ್ವ ಯಕ್ಷಗಾನ ಮತ್ತು ವಿರಾಟ ಪರ್ವ ಸಂಗೀತ ನಾಟಕ ಎಂಬ ಮೂರು ಪ್ರತ್ಯೇಕ ಕೃತಿಗಳಿಂದ 'ವಿರಾಟ ಪರ್ವ' ಪುಸ್ತಕ ಸಂಪಾದಿಸಲಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ ಪ್ರಾಚೀನ ತಾಳೆ ಓಲೆಗರಿ ಗಳಲ್ಲಿ ಬರೆಯಲ್ಪಟ್ಟಿದ್ದ ಮಹತ್ವದ ವಿಷಯಗಳನ್ನು ಪ್ರತಿ ಮಾಡಿಕೊಂಡು ವಿದ್ವತ್ ಪೂರ್ಣವಾಗಿ ಪರಿಷ್ಕರಿಸಿ, ಈ 4 ಪುಸ್ತಕಗಳನ್ನು ಹೊರತರಲಾಗಿದೆ. ಇವುಗಳ ಸಂಪಾದಕರಿಗೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಅತಿಥಿಗಳಾಗಿ ಪಾಲ್ಗೊಂಡಿದ್ದ ಹಿರಿಯ ವಿದ್ವಾಂಸ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ ಮಾತನಾಡಿ, ಕನ್ನಡ ಅಧ್ಯಯನ ಸಂಸ್ಥೆ ತನ್ನ ಧ್ಯೇಯ, ಗಟ್ಟಿತನ ಮತ್ತು ಪರಂ ಪರೆ ಬಿಟ್ಟುಕೊಡದೇ ನಿರಂತರವಾಗಿ ಮುನ್ನಡೆ ಯುತ್ತಿದೆ. 1948ರಲ್ಲಿ ಮೈಸೂರು ವಿವಿಗೆ ನಾನು ವಿದ್ಯಾರ್ಥಿಯಾಗಿ ಬಂದಾಗ ವಿವಿಯ ಓಆರ್‌ಐ ಮತ್ತು ಗುರು ವರ್ಗದಿಂದ ನನ್ನಲ್ಲಿ ಭಾಷಾ ಸಾಹಿತ್ಯದ ಕುತೂ ಹಲ ಬೆಳೆಯಿತು. ಆಯುರ್ವೇದ ಔಷಧಕ್ಕೆ ಇತ್ತೀಚೆಗೆ ಸಾಂಸ್ಕೃತಿಕ ಬಲ ಬರುತ್ತಿದೆ. ಈ ನಿಟ್ಟಿನಲ್ಲಿ ಇಂದು ಬಿಡು ಗಡೆಯಾದ 'ವೈದ್ಯ ಸಂಪುಟ'ದ ಪ್ರಯೋಜನವನ್ನು ಆಯುರ್ವೇದ ಕ್ಷೇತ್ರ ಪಡೆದುಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು. 'ವೈದ್ಯ ಸಂಪುಟ', 'ಚಂದ್ರಸಾಗರ ವರ್ಣಿಯ ಮೂರು ಕೃತಿಗಳು' ಪುಸ್ತಕದ ಸಂಪಾದಕಿ ಡಾ.ವೈ.ಸಿ.ಭಾನುಮತಿ, 'ವಿರಾಟ ಪರ್ವ ಸಂಪುಟ' ಪುಸ್ತಕದ ಸಂಪಾದಕ ಜಿ.ಜಿ.ಮಂಜುನಾಥ್, 'ಗಣಿತ ವಿಳಾಸಂ' ಪುಸ್ತಕದ ಸಹ ಸಂಪಾದಕ ವೆಂಕಟದಾಸಪ್ಪ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ಎಂ.ಜಿ.ಮಂಜುನಾಥ್ ಮತ್ತಿತರರು ಹಾಜರಿದ್ದರು.



ಮೈಸೂರು ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ತಾಳೆಗರಿ ಹಸ್ತಪ್ರತಿಗಳಿಂದ ಸಂಪಾದಿಸಿದ ನಾಲ್ಕು ಪುಸ್ತಕಗಳನ್ನು ಮೈಸೂರು ವಿವಿ ಕುಲಪತಿ ಪ್ರೊ. ಜಿ.ಹೇಮಂತ್‌ಕುಮಾರ್ ಬಿಡುಗಡೆಗೊಳಿಸಿದರು.

ಹಸ್ತಪ್ರತಿಗಳನ್ನು ಗಣಕೀಕೃತಗೊಳಿಸುವ ಬಗ್ಗೆ ಚಿಂತನೆ

"ದಿ ಮಿಥಿಕ್ ಸೊಸೈಟಿ ಮೂಲಕ ವಿವಿಯ ಪ್ರಾಚ್ಯವಿದ್ಯಾ ಸಂಶೋಧನಾಲಯದ (ಓಆರ್‌ಐ) ಎಲ್ಲಾ ಹಸ್ತಪ್ರತಿಗಳನ್ನು ಗಣಕೀಕೃತಗೊಳಿಸಲಾಗುತ್ತಿದೆ. ಅದೇ ರೀತಿಯಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಗಳನ್ನೂ ಇದರೊಂದಿಗೆ ಸೇರ್ಪಡೆ ಮಾಡಬಹುದೇ? ಎಂಬ ಬಗ್ಗೆ ಚಿಂತಿಸಲಾಗುವುದು. **–ಪ್ರೊ.ಜಿ.ಹೇಮಂತ್‌ಕುಮಾರ್, ಮೈಸೂರು ವಿವಿ ಕುಲಪತಿ.**

ತಾಳೆಗರಿ ಕಟ್ಟುಗಳಿದ್ದ ಕಾವ್ಯಗಳ ಸಂಪಾದಿತ ಪುಸ್ತಕಗಳು

ತಾಳೆಗರಿ ಕಟ್ಟುಗಳಲ್ಲಿದ್ದ ಕಾವ್ಯಗಳನ್ನು ಸಂಪಾ ದಿಸಿ ಹೊರತಂದಿರುವ ನಾಲ್ಕು ಪುಸ್ತಕಗಳು ಇಂದು ಬಿಡುಗಡೆಗೊಂಡಿವೆ. ಕುವೆಂಪು ಕನ್ನಡ ಅಧ್ಯ ಯನ ಸಂಸ್ಥೆ ಮೊದಲಿನಿಂದಲೂ ಸಂಶೋಧನಾ ಗ್ರಂಥಗಳ ಪ್ರಕಟಣೆಗೆ ಹೆಸರುವಾಸಿಯಾಗಿದೆ. ನಮ್ಮ ವಿವಿಯ ಒಟ್ಟು ಪ್ರಕಟಣೆಗಳಲ್ಲಿ ನಮ್ಮ ಸಂಸ್ಥೆ ಸಿಂಹಪಾಲು ಹೊಂದಿದೆ.

–ಪ್ರೊ.ಎಂ.ಜಿ.ಮಂಜುನಾಥ್, ನಿರ್ದೇಶಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಗಣಪತಿ ಸಚ್ಚಿದಾನಂದ ಶ್ರೀಗಳ ಸಾನಿಧ್ಯದಲ್ಲಿ 'ಮಿತ್ರ'



ಭಾನುವಾರ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ ವರ್ಧಂತಿ ಕುರಿತು ನಂ. ಶ್ರೀಕಂಠಕುಮಾರ್ ಅವರ ವಿಶೇಷ ಲೇಖನ 'ಮೈಸೂರು ಮಿತ್ರ'ದಲ್ಲಿ ಪ್ರಕಟವಾಗಿತ್ತು. ಅಂದಿನ 'ಮಿತ್ರ' ಸಂಚಿಕೆಯನ್ನು ಸ್ವಾಮೀಜಿಗಳು ತೀವ್ರಾಸಕ್ತಿಯಿಂದ ಓದುತ್ತಿರುವುದು.

ವಿವಿಧ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನ

ಮೈಸೂರು,ಮೇ 23–ಹೂಟಗಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ವಾಸವಾಗಿರುವ ಸಾರ್ವ ಜನಿಕರು ನಗರಸಭೆ ಸಾಮಾನ್ಯ ನಿಧಿಯ 2022–23ನೇ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಶೇ.24.10ರ, ಇತರೆ ಬಡ ಜನರ ಶೇ.7.25ರಷ್ಟು ಹಾಗೂ ವಿಕಲ ಚೇತನರ ಕಲ್ಯಾಣ ನಿಧಿಯ ಶೇ.5 ಯೋಜನೆಯಡಿ ವಿವಿಧ ಸೌಲಭ್ಯಗಳನ್ನು ಪಡೆದು ಕೊಳ್ಳಲು ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಅರ್ಹ ಖಾಯಂ ನಿವಾಸಿ, ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪೂರಕ ದಾಖಲಾತಿಗಳೊಂದಿಗೆ ಮೇ 31ರೊಳಗಾಗಿ ಸಂಜೆ 5.30ರೊಳಗೆ ಹೂಟಗಳ್ಳಿ ನಗರಸಭೆ ಪೌರಾಯುಕ್ತರ ಕಚೇರಿಗೆ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ನಗರಸಭೆ ಕಚೇರಿ ಪೌರಾಯುಕ್ತರನ್ನು ಸಂಪರ್ಕಿಸಲು ಕೋರಿದೆ.

ಮೇ 26, ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು,ಮೇ 23–ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮೇ 26ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿ ಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಲು ಕೋರಲಾಗಿದೆ.

ಮೊದಲು ಮಾನವರಾಗಿ ಬದುಕೋಣ

● ಶ್ರೀ ವಿದ್ಯೇಶ ತೀರ್ಥ ಶ್ರೀಪಾದರ ಆಶಯ ● ವೆಂಕಟಾಚಲಧಾಮದಲ್ಲಿ ಏಕಾದಶ ಸಂವತ್ಸರೋತ್ಸವ

ಮೈಸೂರು, ಮೇ 23– ಕಷ್ಟಗಳ ನಿವಾರಣೆಗಾಗಿಯೇ ದೇವರ ಪ್ರಾರ್ಥನೆ ಸಲ್ಲಿಸುವುದರಿಂದ ಕೊಂಚ ಹೊರಬಂದು ನಾವು ಮೊದಲು ಮಾನವರಾಗಿ ಬದುಕುವಂತೆ ಜ್ಞಾನವನ್ನು ದಯಪಾಲಿಸು ಎಂದು ಬೇಡಿಕೊಳ್ಳಬೇಕು ಎಂದು ಉಡುಪಿ ಮೂಲದ ಶ್ರೀ ಭಂಡಾರಕೇರಿ ಮಠದ ಪೀಠಾಧಿಪತಿ ಶ್ರೀ ವಿದ್ಯೇಶ ತೀರ್ಥ ಶ್ರೀಪಾದರು ಹೇಳಿದರು.

ಚಾಮರಾಜ ಜೋಡಿರಸ್ತೆಯ ಶ್ರೀ ವೆಂಕಟಾಚಲಧಾಮದ 11ನೇ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಏಕಾದಶ ಸಂವತ್ಸರೋತ್ಸವ– ಪಂಚಾಶತ್ ಕಲಶಾರಾಧನೆ, ಅಧಿವಾಸ ಹೋಮಕ್ಕೆ ಚಾಲನೆ ನೀಡಿ ಅವರು ಆಶೀರ್ವಚನ ನೀಡಿದರು.

ದಾನವ ಪ್ರವೃತ್ತಿ ಇಂದು ಅತಿಯಾಗುತ್ತಿದೆ. ಪರಸ್ಪರ ವಿಶ್ವಾಸ, ಅಭಿಮಾನ ಮುಂತಾದ ಮಾನವೀಯ ಮೌಲ್ಯಗಳು ಕಡಿಮೆ ಯಾಗುತ್ತಿವೆ. ಇಂತಹ ಕಾಲಘಟ್ಟದಲ್ಲಿ ದೈವಿಕ ಚಿಂತನೆಗಳ ಮೂಲಕ ಮಾನವೀಯ ಗುಣ ಹೆಚ್ಚಾಗಬೇಕಿದೆ ಎಂದರು.

ವೆಂಕಟಾಚಲನನ್ನು ಎಲ್ಲರೂ ಕಾಂಚನ ಬ್ರಹ್ಮ ಎನ್ನುತ್ತಾರೆ. ಆತನಲ್ಲಿ ನಾವು ಕೇವಲ ಭೌತಿಕ ಸಂಪತ್ತು ಕೊಡು ಎಂದಷ್ಟೇ ಕೇಳಬಾರದು. ಶಾಶ್ವತ ಸುಖ ನೀಡುವ ಜ್ಞಾನ ದಯಪಾಲಿಸು ಎಂದು ಪ್ರಾರ್ಥನೆ ಸಲ್ಲಿಸಬೇಕು ಎಂದವರು ಸಲಹೆ ನೀಡಿದರು.

ಯಾವ ದೇಗುಲಗಳಲ್ಲಿ ಭಕ್ತಿ ಪೂರ್ವಕ ಪೂಜೆ, ಅನ್ನದಾನಾದಿ ಗಳು ನಡೆಯುತ್ತಿರುತ್ತವೆಯೋ ಅಲ್ಲಿ ಮಾತ್ರ ಜಾಗೃತ ಸನ್ನಿಧಿ ಇರುತ್ತದೆ. ಆಗ ಮಾತ್ರ ದೇವಸ್ಥಾನಗಳು ನೆಮ್ಮದಿ ತಾಣಗಳಾಗಲು ಸಾಧ್ಯ ಎಂದರು. ಇದೇ ವೇಳೆ ಶ್ರೀ ವೆಂಕಟೇಶ ಮತ್ತು ಶ್ರೀ ರಾಘವೇಂದ್ರ ಸ್ವಾಮಿ ಗಳ ವೃಂದಾವನಕ್ಕೆ ವಿಶೇಷ ಪೂಜೆ ಸಮ ರ್ಪಿಸಲಾಯಿತು. ಶ್ರೀ ಪಾದರು ಸಂಸ್ಥಾನ ಪೂಜೆ ನೆರವೇರಿಸಿ ಭಕ್ತರಿಗೆ ಫಲ ಮಂತ್ರಾಕ್ಷತೆ ಅನು ಗ್ರಹಿಸಿದರು. ನೂರಾರು ಜನ ಭಕ್ತರು ಹೋಮ, ಹವನ ಮತ್ತಿತರ ಧಾರ್ಮಿಕ ಸೇವೆಗಳಲ್ಲಿ ಭಾಗವಹಿಸಿದ್ದರು. ಪ್ರಧಾನ ಅರ್ಚಕರಾದ ರಾಘವೇಂದ್ರ, ಹಿರಿಯ ವಿದ್ವಾಂಸ ಕೃಷ್ಣಕುಮಾರ್ ಆಚಾರ್ ಸೇರಿದಂತೆ ನೂರಾರು ಭಕ್ತರು ಹಾಜರಿದ್ದರು.



ಹಳ್ಳಿ ಹಳ್ಳಿಯಲ್ಲೂ ಸಂವಿಧಾನ ರಕ್ಷಣೆ ಜನಜಾಗೃತಿ: ಬಿಎಸ್‌ಪಿ ಅಭಿಯಾನ

ಬಿಎಸ್‌ಪಿ ಬೆಂಬಲಿತ ಅಭ್ಯರ್ಥಿ ಚನ್ನಕೇಶವಮೂರ್ತಿ ಗೆಲುವಿಗೆ ಶ್ರಮಿಸಲು ಕಾರ್ಯಕರ್ತರಲ್ಲಿ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ ಮನವಿ

ಮೈಸೂರು, ಮೇ 23 (ಆರ್‌ಕೆಬಿ)– ಬಹುಜನ ಸಮಾಜ ಪಾರ್ಟಿಯ ಕಾರ್ಯಕರ್ತರು ಹಳ್ಳಿ ಹಳ್ಳಿಗೆ ಹೋಗಿ ಸಂವಿಧಾನ ರಕ್ಷಣೆ ಬಗ್ಗೆ ಜನರಲ್ಲಿ ಜಾಗೃತಿ ಉಂಟು ಮಾಡಲಿದ್ದಾರೆ. ಅದಕ್ಕಾಗಿ ಜು.26ರಿಂದ ಜ.26ರವರೆಗೆ ಬಿಎಸ್‌ಪಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದು ಬಹುಜನ ಸಮಾಜ ಪಾರ್ಟಿಯ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ ತಿಳಿಸಿದರು.

ಮೈಸೂರಿನ ಕುವೆಂಪು ನಗರದ ಕಲ್ಯಾಣ ಮಂಟಪ ವೊಂದರಲ್ಲಿ ಸೋಮವಾರ ಮೈಸೂರು ವಿಭಾಗ ಮಟ್ಟದ 'ಸಂವಿಧಾನ ರಕ್ಷಿಸೋಣ– ದೇಶವನ್ನು ಉಳಿಸೋಣ' ಜನಜಾಗೃತಿ ಅಭಿಯಾನ ಪುನರ್ ಪರಿಶೀಲನಾ ಸಭೆ ಹಾಗೂ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾ ಪ್ರಚಾರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಸಂವಿಧಾನ ಉಳಿಸಬೇಕಿದೆ. ಸರ್ವರಿಗೂ ಸಮಾನತೆ, ವಾಕ್ ಮತ್ತು ಧಾರ್ಮಿಕ ಸ್ವಾತಂತ್ರ್ಯ, ಶಿಕ್ಷಣ ಮತ್ತು ರಾಜಕೀಯ ಪ್ರಾತಿನಿಧ್ಯ ನೀಡಿರುವ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯಗಳನ್ನು ಉಳಿಸ ಬೇಕಾಗಿದೆ. ಆದರೆ ಇವೆಲ್ಲವನ್ನೂ ನಾಶ ಮಾಡುವ ಹುನ್ನಾರವನ್ನು ಬಿಜೆಪಿ ಸರ್ಕಾರ ಮಾಡುತ್ತಿದೆ. ಹಿಂದು ಳಿದವರ ಶಿಕ್ಷಣ, ರಾಜಕೀಯ ಮೀಸಲಾತಿಯನ್ನು ನಾಶ ಮಾಡಲು ಹೊರಟಿದೆ. ಪ್ರಜಾಪ್ರಭುತ್ವ ವ್ಯವಸ್ಥೆ, ಸಂವಿ ಧಾನ, ದೇಶದ ಐಕ್ಯತೆ, ಸಾಮರಸ್ಯವನ್ನು ನಾಶ ಮಾಡುವ ಪ್ರಯತ್ನ ನಡೆಸಿದೆ ಎಂದು ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ವಿರುದ್ಧ ಕಿಡಿ ಕಾರಿದರು.

ಮೊದಲು ರೈತರ ಆತ್ಮಹತ್ಯೆ ಆಗುತ್ತಿತ್ತು. ಇಂದು ರೈತ ಕುಟುಂಬಗಳೇ ನಾಶವಾಗುವ ಹಂತಕ್ಕೆ ಬಂದಿವೆ. ಜ್ವಲಂತ ಸಮಸ್ಯೆಗಳತ್ತ ಜನರ ಗಮನ ಹೋಗದಂತೆ ಧಾರ್ಮಿಕ ವಿಚಾರಗಳನ್ನು ಕೆದಕಿ ಜನರ ಗಮನ ಬೇರೆಡೆ ಸೆಳೆಯು ವುದೇ ಬಿಜೆಪಿಯ ಗುರಿಯಾಗಿದೆ. ಸರ್ಕಾರ ವಾಸ್ತವ ವನ್ನು ಮರೆಮಾಚುವ ರೀತಿಯಲ್ಲಿ ರಾಜ್ಯದಲ್ಲಿ ಧರ್ಮದ ಹೆಸರಿನಲ್ಲಿ ವಿಷ ಬೀಜ ಬಿತ್ತಿ ಜನರಲ್ಲಿ ಧಾರ್ಮಿಕ ಭಾವನೆಗಳನ್ನು ಕೆರಳಿಸುತ್ತಿದೆ. ದಲಿತರು, ಹಿಂದುಳಿದವರ ರಕ್ಷಣೆ ಇಲ್ಲದಂತಾಗಿದೆ ಎಂದು ದೂರಿದರು.

ಶಿಕ್ಷಣದಲ್ಲಿ ಪಠ್ಯಕ್ರಮ ವಿವಾದ ಸೃಷ್ಟಿಸಿದ್ದಾರೆ. ಧಾರ್ಮಿಕ ವಿಷ ಇರುವವರನ್ನೇ ಪಠ್ಯ ಪುಸ್ತಕ ಪುನಾರಚನೆ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. 10ನೇ ತರಗತಿ ಪಠ್ಯ ಪುಸ್ತಕ ದಲ್ಲಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಪ್ರಮುಖ ವಿಚಾರಗಳನ್ನು ಮರೆಮಾಚುವ ಪ್ರಯತ್ನಕ್ಕೆ ಕೈ ಹಾಕಿ ದ್ದಾರೆ. ಹಾಗೇನಾದರೂ ಅಂಬೇಡ್ಕರ್ ವಿಚಾರಧಾರೆ ಗಳನ್ನು ಬದಲಿಸಲು ಪ್ರಯತ್ನಿಸಿದರೆ ಬಿಎಸ್‌ಪಿ ಸುಮ್ಮನೆ ಕೂರುವುದಿಲ್ಲ ಎಂದು ಹೇಳಿದರು.

ಇದೇ ವೇಳೆ ದಕ್ಷಿಣ ಪದವೀಧರ ಕ್ಷೇತ್ರದ ಬಿಎಸ್‌ಪಿ ಬೆಂಬಲಿತ ಅಭ್ಯರ್ಥಿ ಚನ್ನಕೇಶವಮೂರ್ತಿ ಅವರ ಗೆಲು ವಿಗೆ ಪಕ್ಷದ ಕಾರ್ಯಕರ್ತರು ಶ್ರಮಿಸುವಂತೆ ಕರೆ ನೀಡಿ ದರು. ಸಭೆಯಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಚನ್ನಕೇಶವಮೂರ್ತಿ, ಬಿಎಸ್‌ಪಿ ರಾಜ್ಯ ಉಪಾ ಧ್ಯಕ್ಷ ಆರ್.ಮುನಿಯಪ್ಪ, ಎಂ.ಗೋಪಿನಾಥ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಮಾಜಿ ಮೇಯರ್ ಪುರುಷೋತ್ತಮ್, ಅರಕಲವಾಡಿ ನಾಗೇಂದ್ರ, ಗಂಗಾ ಧರ್ ಬಹುಜನ್, ಮೈಸೂರು ಜಿಲ್ಲಾಧ್ಯಕ್ಷ ಪುಟ್ಟಸ್ವಾಮಿ, ಮುಖಂಡರಾದ ಶಿವಮಹದೇವು, ನಾಗಯ್ಯ, ಎಸ್.ಪಿ. ಮಹೇಶ್, ಬ.ಮ.ಕೃಷ್ಣಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.



ಬಿಎಸ್‌ಪಿ ಮೈಸೂರು ವಿಭಾಗ ಮಟ್ಟದ ಸಭೆಯಲ್ಲಿ ಸಂವಿಧಾನ ರಕ್ಷಿಸೋಣ–ದೇಶವನ್ನು ಉಳಿಸೋಣ, ಜನಜಾಗೃತಿ ಅಭಿಯಾನ ಪುನರ್ ಪರಿಶೀಲನಾ ಸಭೆ ಹಾಗೂ ಪದವೀಧರ ಕ್ಷೇತ್ರದ ಚುನಾವಣಾ ಪ್ರಚಾರ ಸಭೆಯನ್ನು ಉದ್ಘಾಟಿಸಿ ಪಕ್ಷದ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿದರು. ಚಿತ್ರದಲ್ಲಿ ರಾಜ್ಯ ಉಪಾಧ್ಯಕ್ಷ ಆರ್.ಮುನಿಯಪ್ಪ, ಎಂ.ಗೋಪಿನಾಥ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ಜಿಲ್ಲಾಧ್ಯಕ್ಷ ಪುಟ್ಟಸ್ವಾಮಿ ಇನ್ನಿತರರನ್ನು ಕಾಣಬಹುದು.

ರಸ್ತೆ ಅಗಲೀಕರಣ: ಸಾರ್ವಜನಿಕರ ಸಭೆ

ಮೈಸೂರು, ಮೇ 23– ಅರಣ್ಯ ಇಲಾಖೆಯ ವತಿಯಿಂದ ಮೈಸೂರು – ತಿ ನರಸೀಪುರ ರಿಂಗ್ ರೋಡ್ ಸಿಗ್ನಲ್ ಎಡಭಾಗ 400 ಮೀ ಹಾಗೂ ಬಲಭಾಗ 400 ಮೀ ಪರಿಮಿತಿಯನ್ನು ಗುರುತಿಸಿ, ರಸ್ತೆ ಅಗಲೀಕರಣ ಕಾಮಗಾರಿಗೆ ಅಡಚಣೆಯಾಗಿರುವ ಮರ ಗಿಡಗಳನ್ನು ತೆರವುಗೊಳಿಸಲು ಭಾರತ ಸರ್ಕಾರದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೋರಿದ್ದು, ಅದರಂತೆ ಅರಣ್ಯ ಇಲಾಖೆ ಸಿಬ್ಬಂದಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಜಂಟಿ ಮಹಜರು ನಡೆಸಿದ್ದು, ಅದರಂತೆ ಒಟ್ಟು 99 ಮರಗಳ ಅಳತೆ ಪಟ್ಟಿಯನ್ನು ತಯಾರಿಸಲಾಗಿರುತ್ತದೆ.

ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಪ್ರಕರಣ 8(3)(VII)ರಡಿ 50 ಕ್ಕಿಂತ ಹೆಚ್ಚು ಮರ ಗಿಡಗಳನ್ನು ಕಡಿಯಬೇಕಾದಲ್ಲಿ ಸಾರ್ವಜನಿಕ ಅಹವಾಲನ್ನು ಸ್ವೀಕರಿಸಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಜೂ.20ರಂದು ಪೂರ್ವಾಹ್ನ 11.00 ಗಂಟೆಗೆ ಆಲನಹಳ್ಳಿ ರಿಂಗ್ ರಸ್ತೆಯ ಜಂಕ್ಷನ್ ಬಳಿ ಸಾರ್ವಜನಿಕ ಅಹವಾಲು ಸಭೆ ಕರೆಯ ಲಾಗಿದೆ. ಈ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಸಭೆಯಲ್ಲಿ ಹಾಜರಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು ಅಥವಾ ನಿಗದಿತ ದಿನಾಂಕದ ಒಳಗಾಗಿ ವೃಕ್ಷಾಧಿ ಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉ.ಅ.ಸಂ.ಗ. ತಾಂತ್ರಿಕ ಸಹಾಯಕರು ಮೈಸೂರು ಇವರಿಗೆ ಲಿಖಿತ ರೂಪದಲ್ಲಿ ಆಕ್ಷೇಪಣೆಯನ್ನು ಸಲ್ಲಿಸ ಬಹುದು. ಜೊತೆಗೆ ಇಮೇಲ್ dcfmdm@gmail.com ಸಂಪರ್ಕಿಸಬಹುದು. ಇಲ್ಲವೇ ಅಂಚೆ ವಿಳಾಸ ವೃಕ್ಷಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಉ.ಅ.ಸಂ.ಗ. ತಾಂತ್ರಿಕ ಸಹಾಯಕರು, ಮೈಸೂರು ಅರಣ್ಯ ಭವನ, 1ನೇ ಮಹಡಿ, ಅಶೋಕಪುರಂ, 6ನೇ ಕ್ರಾಸ್. ಮೈಸೂರು–570008 ಅಂಚೆಯ ಮೂಲಕ ಕಳುಹಿಸ ಬಹುದು ಎಂದು ವೃಕ್ಷಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೃಗಾಲಯ, ಕಾರಂಜಿಕೆರೆ ಸಾರ್ವಜನಿಕ ವೀಕ್ಷಣೆಗೆ ಮುಕ್ತ

ಮೈಸೂರು, ಮೇ 23– ಬೇಸಿಗೆ ರಜೆ ಇರುವ ಪ್ರಯುಕ್ತ ಪ್ರವಾಸಿಗರು, ಜನ ಸಾಮಾನ್ಯರಿಗೆ ಹಾಗೂ ಸ್ಥಳೀಯರಿಗೆ ಅನು ಕೂಲವಾಗುವಂತೆ ಮೇ 24ರ ಮಂಗಳ ವಾರದಂದು ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನವನ್ನು ಸಾರ್ವಜನಿಕ ವೀಕ್ಷಣೆಗೆ ತೆರೆಯಲಾಗಿದೆ ಎಂದು ಶ್ರೀ ಚಾಮರಾಜೇಂದ್ರ ಮೃಗಾ ಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶ ಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್.ಎಸ್.ಅನುಷಾಗೆ ಅತ್ಯುನ್ನತ ಶ್ರೇಣಿ



ಮೈಸೂರು, ಮೇ 23–ಮೈಸೂರಿನ ಸೇಂಟ್ ಆನ್ನೀಸ್ ಬಾಲಕಿ ಯರ ಪ್ರೌಢಶಾಲೆ ವಿದ್ಯಾ ರ್ಥಿನಿ ಹೆಚ್.ಎಸ್. ಅನುಷಾ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 569 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಯಾಗಿದ್ದಾಳೆ. ಕನ್ನಡ–123, ಇಂಗ್ಲಿಷ್– 95, ಹಿಂದಿ–93, ಗಣಿತ–81, ವಿಜ್ಞಾನ– 81, ಸಮಾಜದಲ್ಲಿ 98 ಅಂಕ ಪಡೆದಿ ದ್ದಾರೆ. ಈಕೆ ಮೈಸೂರಿನ ಸುರೇಶ್ ಹಾಗೂ ಸುಧಾ ದಂಪತಿ ಪುತ್ರಿ.


ಡಾ.ಭಾನುಪ್ರಕಾಶ್ ಶರ್ಮ, ನಾರಾಯಣಗೌಡ, ಮಡ್ಡೀಕೆರೆ ಗೋಪಾಲ್ ಸೇರಿ 10 ಮಂದಿಗೆ ಮೈಸೂರಿನ ಸಾಮಾಜಿಕ ರತ್ನ ಪ್ರಶಸ್ತಿ

ಮೈಸೂರು, ಮೇ 23(ಎಂಟಿವೈ)–ಮೈಸೂರಿನ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ 15ನೇ ವಾರ್ಷಿಕೋತ್ಸವದ ಅಂಗವಾಗಿ ಮೇ 27ರಂದು ಬೆಳಗ್ಗೆ 11 ಗಂಟೆಗೆ ಎಂ.ಜಿ. ರಸ್ತೆಯಲ್ಲಿರುವ ಸಿಪಾಯಿ ಗ್ರಾಂಡ್ ಹೋಟೆಲ್ ಸಭಾಂಗಣದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ 10 ಮಂದಿಗೆ 'ಮೈಸೂರಿನ ಸಾಮಾಜಿಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ತಿಳಿಸಿದ್ದಾರೆ.

ಟ್ರಸ್ಟ್‌ನ 15ನೇ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ಧಾರ್ಮಿಕ ಕ್ಷೇತ್ರದಿಂದ ಡಾ.ಭಾನುಪ್ರಕಾಶ್ ಶರ್ಮಾ, ಸಾಹಿತ್ಯ ಕ್ಷೇತ್ರದಿಂದ ಮಡ್ಡೀಕೆರೆ ಗೋಪಾಲ್, ಔದ್ಯಮಿಕ ಕ್ಷೇತ್ರದಿಂದ ಸಿ.ನಾರಾಯಣಗೌಡ, ಸಂಘಟನಾ ಕ್ಷೇತ್ರದಿಂದ ದೇವೇಂದ್ರ ಪರಿಹಾರಿಯ, ಪೊಲೀಸ್ ಇಲಾಖೆಯಿಂದ ಗೌರಿಶಂಕರ್, ಸಾಮಾಜಿಕ ಕ್ಷೇತ್ರದಿಂದ ಶೋಭಾ ದಿನೇಶ್, ಕಲಾ ಕ್ಷೇತ್ರದಿಂದ ಪ್ರಕಾಶ್ ಚಿಕ್ಕಪಾಳ್ಯ, ರಾಜಕೀಯ ಕ್ಷೇತ್ರದಿಂದ ಕೇಬಲ್ ಮಹೇಶ್, ಕ್ರೀಡಾ ಕ್ಷೇತ್ರದಿಂದ ಸುಹಾಸ್ ಹಾಗೂ ಮಾಧ್ಯಮ ಕ್ಷೇತ್ರದಿಂದ ಅನಿಲ್‌ಕುಮಾರ್ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಮೇಲುಕೋಟೆಯ ವಂಗೀಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಪರಿಷತ್ ಸದಸ್ಯರಾದ ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ವಾಸು, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ, ಮುಖಂಡರಾದ ಯಶಸ್ವಿನಿ ಸೋಮಶೇಖರ್, ಎನ್.ಎಂ.ನವೀನ್‌ಕುಮಾರ್, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ನಿಧನ

ನಜೀರ್ ಅಹಮದ್



ಮೈಸೂರು, ಮೇ 23–ಮೈಸೂರಿನ ಅಶೋಕ ರಸ್ತೆ ನಿವಾಸಿ ಹಾಗೂ ಮಸೀದಿ–ಇ–ಆಜಮ್ ಮರ್ಕಾಜ್ ಅಹಲೆ ಸುನ್ನತ್–ಒ–ಜಮಾತ್‌ನ ಮಾಜಿ ಮೌಜನ್ ನಜೀರ್ ಅಹಮದ್ (72) ಭಾನುವಾರ ನಿಧನರಾದರು. ಇವರು ಉರ್ದು ಪತ್ರಿಕೆ ಡೈಲಿ ಕೌಸರ್‌ನ ಮುಖ್ಯ ಸಂಪಾದಕರಾಗಿದ್ದ ದಿವಂಗತ ಜನಾಬ್ ಖಲೀಲ್ ಜೇಬಕ್ ಅವರ ಸಹೋದರ. ಮೃತರು ಪತ್ನಿ, ಮೂವರು ಪುತ್ರರು, ಐವರು ಪುತ್ರಿಯರು, ಸಹೋದರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ನಮಾಜ್–ಇ–ಜನಾಜ್ ನಡೆದ ನಂತರ ಮೈಸೂರು ಜೈಲ್ ಹಿಂಭಾಗವಿರುವ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿ ಮರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಪಠ್ಯ ಪುಸ್ತಕ ಕೇಸರೀಕರಣ ಆರೋಪ; ಎಸ್‌ಎಫ್‌ಐ ಪ್ರತಿಭಟನೆ

ಮೈಸೂರು,ಮೇ 23(ಪಿಎಂ)– ಪಠ್ಯ ಪುಸ್ತಕಗಳಲ್ಲಿ ಪ್ರಗತಿಪರ ಚಿಂತಕರು ಹಾಗೂ ವಿಚಾರಗಳನ್ನು ಕೈಬಿಟ್ಟು ಕೇಸರೀಕರಣ ಮಾಡಲಾಗುತ್ತಿದೆ ಎಂದು ಆರೋಪಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವ ನಿಟ್ಟಿನಲ್ಲಿ ರಾಜ್ಯ ಬಿಜೆಪಿ ಸರ್ಕಾರ ಪಠ್ಯ ಪುಸ್ತಕ ಮರು ಪರಿಷ್ಕರಣೆ ಸಮಿತಿ ರಚಿಸಿದೆ. ಈ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಆರ್‌ಎಸ್‌ಎಸ್ ಸೈದ್ಧಾಂತಿಕ ನಿಷ್ಠೆಯ ಹಿನ್ನೆಲೆಯುಳ್ಳವರಾಗಿದ್ದು, ಇದರ ಪರಿಣಾಮ ಪಠ್ಯಪುಸ್ತಕಗಳಲ್ಲಿ ಪ್ರಗತಿಪರ ಚಿಂತಕರು ಹಾಗೂ ವಿಚಾರ ಗಳಿಗೆ ಕತ್ತರಿ ಹಾಕಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ದರು. ಪರಿಷ್ಕರಣೆ ನೆಪದಲ್ಲಿ 10ನೇ ತರಗತಿಯ ಕನ್ನಡ ಪಠ್ಯ ಪುಸ್ತಕದಲ್ಲಿದ್ದ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಕುರಿತ ಪಾಠವನ್ನು ಕೈಬಿಟ್ಟು ಇದೀಗ ವ್ಯಾಪಕ ವಿರೋಧ ವ್ಯಕ್ತವಾದ ಬಳಿಕ ಮರು ಸೇರ್ಪಡೆ ಮಾಡ ಲಾಗಿದೆ. ಸಮಾಜ ವಿಜ್ಞಾನದಲ್ಲಿ ಸಮಾಜ ಸುಧಾರಕ ರಾದ ನಾರಾಯಣ ಗುರು, ಪೆರಿಯಾರ್ ಅವರ ಕುರಿತ ಪಾಠಗಳೂ ಸೇರಿದಂತೆ ವೈಚಾರಿಕ ಚಿಂತನೆ ಹಾಗೂ ಜಾತ್ಯತೀತ ಮೌಲ್ಯಗಳನ್ನು ಒಳಗೊಂಡ ಪಾಠಗಳನ್ನು ಕೈಬಿಡಲಾಗಿದೆ ಎಂದು ದೂರಿದರು. 10ನೇ ತರಗತಿಯ ಕನ್ನಡ ಪಠ್ಯ ಪುಸ್ತಕದಲ್ಲಿ ಕೆ.ಬಿ.ಹೆಡಗೆವಾರ್ ಅವರ 'ನಿಜವಾದ ಆದರ್ಶ ಪುರುಷ ಯಾರಾಗಬೇಕು?' ಎಂಬ ಭಾಷಣ ಸೇರಿಸಲಾಗಿದೆ ಎಂದು ಕಿಡಿಕಾರಿದರು. ಸಂಘ ಟನೆ ಜಿಲ್ಲಾ ಸಂಚಾಲಕ ಟಿ.ಎಸ್.ವಿಜಯ್‌ಕುಮಾರ್, ಮುಖಂಡರಾದ ಸುರೇಶ್, ಯತೀಶ್, ಪಕೀರಪ್ಪ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.05.2022 ಮಂಗಳವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ನವಮಿ, ನಕ್ಷತ್ರ : ಪೂಭಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 9ಕ್ಕೆ ಶ್ರೀಚಕ್ರಪೂಜೆ, ದೇವೀಹೋಮ, ಬೆಳಗ್ಗೆ 10ಕ್ಕೆ ಚೈತನ್ಯಾರ್ಚನೆ– ವಿವಿಧ ಕ್ಷೇತ್ರಗಳಲ್ಲಿನ ಗಣ್ಯರಿಗೆ ಸನ್ಮಾನ, ವಿದ್ವಾನ್ ಎ.ವಿ. ಆನಂದ್, ವಿದ್ವಾನ್ ಮಲ್ಲಾಡಿ ಸೂರಿಬಾಬು, ವಿದ್ವಾನ್ ಅಮೃತ್, ವಿದ್ವಾನ್ ಗಂಡಿಕೋಟ ಫಣಿರಾಜ ಶಾಸ್ತ್ರಿ, ವಿದ್ವಾನ್ ಮುತ್ತುಕೃಷ್ಣ ಘನಪಾಠಿ, ಡಾ. ಶಶಿಭೂಷಣ್ ಅವರಿಗೆ ಸನ್ಮಾನ, ಬೆಳಗ್ಗೆ 11ಕ್ಕೆ ದಿವ್ಯ ಸಾನ್ನಿಧ್ಯ : ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ, ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಸಂದರ್ಶನ : ಅದಮಾರು ಮಠದ ಕಿರಿಯ ಶ್ರೀಗಳಾದ ಶ್ರೀ ಈಶಪ್ರಿಯ ತೀಥ ಸ್ವಾಮೀಜಿ, ಸಂಜೆ 6.30ಕ್ಕೆ ಸಂಗೀತ ಕಾರ್ಯಕ್ರಮ, ಪಂಡಿತ್ ನೀಲಾದ್ರಿ ಕುಮಾರ್ ಅವರಿಂದ ಸಿತಾರ್ ವಾದನ, ಪಂಡಿತ್ ಅನಿಂದೋ ಚಟರ್ಜಿ (ತಬಲ), ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಮತ್ತು 5.00 ಅಕ್ಷರ ಮೈಸೂರು ಅನ್ನದ ಸೂರು–ಮೈಸೂರಿನ ಪರಂಪರೆಯಲ್ಲಿ ಅನ್ನ ಅಕ್ಷರಗಳ ನೆನಪು, ಪ್ರಸ್ತುತಿ– ಡಾ.ವಿ.ರಂಗನಾಥ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, 7.15 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 9.00 ವೃತ್ತಿ ಮಾರ್ಗದರ್ಶನ–'ಟೆಕ್ನಿಕಲ್ ಕೋರ್ಸ್ ಆಯ್ಕೆಗೆ ಆಪ್ತ ಸಲಹೆ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವ ಕಾಶಗಳು ಕುರಿತು ಡಾ.ಸದಾಶಿವೇಗೌಡ ಬಿ. ಅವರೊಂದಿಗೆ ಮಾತುಕತೆ, 10.00 ಎಂ.ಜಿ.ಶ್ರೀಧರ್– ನಾಗಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾವಿಹಾರ–ಸ್ತ್ರೀ ಚೇತನ, ಲೇಖಕಿ ಉಷಾ ನರಸಿಂಹನ್ ಅವರೊಂದಿಗೆ ಮಾತುಕತೆ, 12.30 ದೇವರನಾಮ–ಸಂಗೀತಾ ಕಟ್ಟಿ, ದೇವೇಂದ್ರಕುಮಾರ್ ಮುದೋಳ್, 12.45 ಜೀವ ವೈವಿಧ್ಯದ ಅಳಿವು–ಉಳಿವು, ರಮೇಶ್ ಕಿಕ್ಕೇರಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 1.20 ಭಾವಗೀತೆ–ಮೈಸೂರು ರಂಗಸ್ವಾಮಿ, 3.00 ಎಂ.ಆರ್.ಸುಧಾ –ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ, 6.50 ಕೃಷಿರಂಗ –ಕಿಸಾನ್‌ವಾಣಿ, ಕೃಷಿ ಬದುಕಿನಲ್ಲಿ ಆರ್ಥಿಕ ಸ್ವಾವಲಂಬನೆ ಕುರಿತು ಅಚ್ಚುಗೌಡ ಅವರೊಡನೆ ಸಂದರ್ಶನ, 9.30 ಸುಧಾ ರಘುನಾಥನ್–ಹಾಡುಗಾರಿಕೆ, 10.00ಯಕ್ಷ ಸಂಪದ–ಯಕ್ಷಗಾನ ಬಡಗು ತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ನಿರ್ಮಾಣ–ದಿವಾಕರ್ ಹೆಗಡೆ, 10.30 ಸವಿನೆನಪು

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕದಂಬ ರಂಗ ವೇದಿಕೆ, ಸಮಾಜವಾದಿ ಅಧ್ಯಯನ ಕೇಂದ್ರ, ರಂಗವಲ್ಲಿ:** ಖ್ಯಾತ ಲೇಖಕ, ವಿಮರ್ಶಕ, ಚಿಂತಕ ಡಿ.ಎಸ್.ನಾಗಭೂಷಣ ಅವರಿಗೆ ನುಡಿನಮನ ಕಾರ್ಯಕ್ರಮ, ಉಪಸ್ಥಿ ತರು: ಪ್ರೊ ಹಿ.ಶಿ.ರಾಮಚಂದ್ರೇಗೌಡ, ಪ್ರೊ.ಕೆಂಪೇಗೌಡ, ಮಾನಸ, ಚಂದ್ರಶೇಖರ್, ಡಾ.ವೈ.ಡಿ. ರಾಜಣ್ಣ, ಜಿ.ಪ್ರಕಾಶ್, ಮಡ್ಡೀಕೆರೆ ಗೋಪಾಲ್, ರಾಜಶೇಖರ ಕದಂಬ, ರಂಗವಲ್ಲಿ ರಾಜೇಶ್, ಚಿಲೂರು ಚಂದ್ರಶೇಖರ, ಲತಾ ಮೋಹನ್, ಲಿಂಗರಾಜು, ಸ್ಥಳ: ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

ಋತುಚಕ್ರ ನಿರ್ವಹಣಾ ಸಪ್ತಾಹಕ್ಕೆ ಚಾಲನೆ

ಮೂಢನಂಬಿಕೆ ತೊಲಗಿಸಲು ಜನರಲ್ಲಿ ಜಾಗೃತಿ: ಜಿಪಂ ಸಿಇಓ ಪೂರ್ಣಿಮಾ

ಮೈಸೂರು, ಮೇ 23(ಎಂಕೆ)– ಯೂನಿಸೆಫ್(unicef), ಆರೋಗ್ಯ ನಿರ್ವಹಣೆ ಸಂಶೋಧನಾ ಸಂಸ್ಥೆ, ಬೆಂಗಳೂರು ಹಾಗೂ ಸ್ವಚ್ಛ ಭಾರತ್ ಮಿಷನ್(ಗ್ರಾ) ಸಹಯೋಗದೊಂದಿಗೆ ಮೇ 23ರಿಂದ ಮೇ 28ರವರೆಗೆ ಹಮ್ಮಿಕೊಂಡಿರುವ 'ಋತುಚಕ್ರ ನಿರ್ವಹಣಾ ಸಪ್ತಾಹ'ಕ್ಕೆ ಮೈಸೂರು ಜಿಲ್ಲಾ ಪಂಚಾಯತ್ ಸಿಇಓ ಡಾ.ಬಿ.ಆರ್.ಪೂರ್ಣಿಮಾ ಚಾಲನೆ ನೀಡಿದರು.



ಜಿಪಂ ಸಭಾಂಗಣದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಋತುಚಕ್ರ ನಿರ್ವಹಣೆಗೆ ಸಂಬಂಧಿಸಿದ ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆ ಮಾಡುವ ಮೂಲಕ ಸಪ್ತಾಹಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಋತುಚಕ್ರದ ಬಗ್ಗೆ ಜನರಲ್ಲಿರುವ ಮೂಢನಂಬಿಕೆ ಹಾಗೂ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸಪ್ತಾಹ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಋತುಚಕ್ರದ ವೇಳೆಯಲ್ಲಿ ಮಹಿಳೆಯರು ಬಳಸುವ ಪ್ಯಾಡ್‌ಗಳ ಅವೈಜ್ಞಾನಿಕ ವಿಲೇವಾರಿಯಿಂದ ಪರಿಸರಕ್ಕೆ ಹಾನಿಯುಂಟಾಗುತ್ತಿದೆ. ಈಗಾಗಲೇ ಜಿಪಂ ವತಿಯಿಂದ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ವಿತರಿಸಿರುವ ಇನ್ಸಿನಿರೇಟರ್(ಪ್ಯಾಡ್‌ಗಳನ್ನು ಸುಟ್ಟು ಹಾಕುವ ಯಂತ್ರ)ಗಳ ಸದ್ಬಳಕೆ ಮಾಡಿಕೊಳ್ಳಬೇಕು ಹಾಗೂ ವೈದ್ಯಕೀಯವಾಗಿ ಅಭಿವೃದ್ಧಿಪಡಿಸಿರುವ 'ಮೆನ್ಸ್ಟ್ರುಯಲ್ ಕಪ್'ಗಳ ಬಳಕೆಗೆ ಮಹಿಳೆಯರು ಹೆಚ್ಚು ಒತ್ತು ನೀಡಬೇಕು ಎಂದು ತಿಳಿಸಿದರು.

ಜಿಪಂ ಉಪಕಾರ್ಯದರ್ಶಿ(ಅಭಿವೃದ್ಧಿ) ದೇವರಾಜೇಗೌಡ ಮಾತನಾಡಿ, ಗ್ರಾಮಾಂತರ ಪ್ರದೇಶದ ಮಹಿಳೆಯರಲ್ಲಿ ಇಂದಿಗೂ ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಅರಿವಿನ ಕೊರತೆಯಿದ್ದು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಋತುಚಕ್ರದ ವೇಳೆಯಲ್ಲಿ ಮಹಿಳೆಯರು ಕಾಪಾಡಿಕೊಳ್ಳಬೇಕಾದ ಸ್ವಚ್ಛತೆಯ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಬೇಕು. ಹಾಗೂ ಋತುಸ್ರಾವದ ಸಮಯದಲ್ಲಿ ಉಂಟಾಗುವ ದೈಹಿಕ ಮತ್ತು ಮಾನಸಿಕ ಸಮಸ್ಯೆಯನ್ನು ಎದುರಿಸಲು ಕುಟುಂಬದವರು ಸಹಕರಿಸಬೇಕು ಎಂದರು.

ಜಿಪಂ ಯೋಜನಾ ನಿರ್ದೇಶಕಿ ಸವಿತಾ ಮಾತನಾಡಿ, ಹದಿಹರೆಯದ ಹೆಣ್ಣು ಮಕ್ಕಳು ಋತುಸ್ರಾವದ ಬಗ್ಗೆ ಮಾತನಾಡುವುದಕ್ಕೆ ಇಂದಿಗೂ ಹಿಂಜರಿಯುತ್ತಾರೆ. ಋತುಚಕ್ರ ಕುರಿತು ಶಾಲಾ-ಕಾಲೇಜು ವಿದ್ಯಾರ್ಥಿನಿಯರಲ್ಲಿ ಅರಿವು ಮೂಡಿಸುವುದು ಅತ್ಯಗತ್ಯ ಎಂದು ತಿಳಿಸಿದರು. ಬಳಿಕ ಜಿಪಂ ಎಸ್.ಬಿ.ಸಿ.ಸಿ ಸಂಯೋಜಕ(ಮೈಸೂರು ವಿಭಾಗ) ಡಾ.ರವೀಶ್, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ವಿಶೇಷ ಕಾರ್ಯಾಗಾರ ನಡೆಸಿಕೊಟ್ಟರು.

ಮೇ 28 ವರೆಗೂ ಆನ್‌ಲೈನ್ ಉಪನ್ಯಾಸ: ಋತುಚಕ್ರ ನಿರ್ವಹಣೆ ಕುರಿತು ಮೇ 28ರವರೆಗೂ ನುರಿತ ವೈದ್ಯರಿಂದ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ. ಪ್ರತಿದಿನ ಸಂಜೆ 4.30ಕ್ಕೆ ಉಪನ್ಯಾಸ ನಡೆಯಲಿದ್ದು bit.ly/MHOpenAccess ಮೂಲಕ ಭಾಗವಹಿಸಬಹುದಾಗಿದೆ.

ಕಾರ್ಯಕ್ರಮದಲ್ಲಿ ಜಿಪಂ ಸಹಾಯಕ ಕಾರ್ಯದರ್ಶಿ ಕುಲದೀಪ್, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳು ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಸಮಾಲೋಚಕರುಗಳು ಉಪಸ್ಥಿತರಿದ್ದರು.

ಸಾಧಕ ರೈತರಿಗೆ ಕೃಷಿರತ್ನ ಪ್ರಶಸ್ತಿ ಪ್ರದಾನ



ಮೈಸೂರು,ಮೇ 23(ಪಿಎಂ)– ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ವತಿಯಿಂದ ಜಿಲ್ಲೆಯ ಸಾಧಕ ರೈತರಿಗೆ ಸೋಮವಾರ 'ಕೃಷಿರತ್ನ–2022' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪ್ರಶಸ್ತಿ ನೀಡಿ ಗೌರವಿಸಿದರು. ರೈತರಾದ ವಿಜಯೇಂದ್ರ, ಅಶೋಕ, ನಾಗೇಂದ್ರ, ಲೋಕೇಶ್, ದೇವರಾಜ್, ದೊರೆಸ್ವಾಮಿ, ಶ್ರೀನಿವಾಸ್, ಶಿವಣ್ಣ, ಚೆಲುವರಾಜ್, ಅಭಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಲ್ಲದೆ, ಸಂಘದಿಂದ ಹಮ್ಮಿಕೊಂಡಿರುವ ಮಣ್ಣು ಸಂರಕ್ಷಣೆ ಅಭಿಯಾನದ ಭಿತ್ತಿಪತ್ರ ಬಿಡುಗಡೆ ಮಾಡಲಾಯಿತು.

ಬಳಿಕ ಮಾತನಾಡಿದ ಅಂಶಿ ಪ್ರಸನ್ನಕುಮಾರ್, ಹೆಚ್ಚಿನ ಇಳುವರಿ ಪಡೆಯಲು ಕೃಷಿಯಲ್ಲಿ ರಾಸಾಯನಿಕ ಬಳಕೆ ಇತ್ತೀಚಿಗೆ ಹೆಚ್ಚುತ್ತಿದೆ ಆದರೆ ಇದರಿಂದ ಭೂಮಿಯ ಫಲವತ್ತತೆಗೆ ಧಕ್ಕೆಯಾಗಲಿದೆ. ರಾಸಾಯನಿಕ ಗೊಬ್ಬರ ಬಳಕೆ ಕೈಬಿಡುವ ಜೊತೆಗೆ ಏಕಬೆಳೆ ಪದ್ಧತಿ ಬಿಟ್ಟು, ಬಹುಬೆಳೆ ಪದ್ಧತಿ ಅನುಸರಿಸಿದರೆ ಭೂಮಿಯ ಫಲವತ್ತತೆ ಹೆಚ್ಚಾಗಲಿದೆ ಎಂದು ಹೇಳಿದರು.

ಸಂಘದ ರಾಜ್ಯಾಧ್ಯಕ್ಷ ಚಂದನ್‌ಗೌಡ ಮಾತನಾಡಿ, ಮನುಷ್ಯ ಸತ್ತರೆ ಮಣ್ಣಿಗೆ, ಆದರೆ ಮಣ್ಣು ಸತ್ತರೆ ಎಲ್ಲಿಗೆ? ಎಂದು ಪ್ರಶ್ನಿಸುವ ಕಾಲ ಬಂದಿದೆ. ಹಾಗಾಗಿ ಮಣ್ಣನ್ನು ಸಂರಕ್ಷಿಸುವ ಕೆಲಸ ನಮ್ಮಿಂದ ಆಗಬೇಕಿದೆ. ಆದ್ದರಿಂದ ಮಣ್ಣಿನ ಸಂರಕ್ಷಣೆ ಕಡೆಗೆ ಗಮನ ನೀಡಬೇಕೆಂದು ಮನವಿ ಮಾಡಿದರು. ಮುಖಂಡರಾದ ಗೋವರ್ಧನ್, ವೇಣು, ಶ್ರೀಧರ್, ಸ್ವಾಮಿಗೌಡ ಮತ್ತಿತರರು ಹಾಜರಿದ್ದರು.

ನಾಲ್ಕು ಮಕ್ಕಳಿಗೆ ಜನ್ಮ ನೀಡಿದ ತಾಯಿ: 2 ಹೆಣ್ಣು, 2 ಗಂಡು



ಶಿವಮೊಗ್ಗ, ಮೇ 23– ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಮಹಿಳೆಯೊಬ್ಬರು ಏಕಕಾಲದಲ್ಲಿ ಬರೋಬ್ಬರಿ ನಾಲ್ಕು ಮಕ್ಕಳಿಗೆ ಜನ್ಮ ನೀಡಿದ್ದಾರೆ.

ಜಿಲ್ಲೆಯ ಭದ್ರಾವತಿ ತಾಲೂಕಿನ ತಡಸಾ ಗ್ರಾಮದ ಆರೀಫ್ ಹಾಗೂ ಅಲ್ಮಾಜಾ ಬಾನು ದಂಪತಿಗೆ ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆಯಾಗಿದ್ದು, ಅಲ್ಮಾಜಾ ಬಾನು ಎರಡು ಗಂಡು, ಎರಡು ಹೆಣ್ಣು ಮಕ್ಕಳಿಗೆ ಜನ್ಮ ನೀಡಿದ್ದಾರೆ.

ವೈದ್ಯಕೀಯ ಕ್ಷೇತ್ರದ ಪ್ರಕಾರ ಒಟ್ಟಿಗೆ 4 ಮಕ್ಕಳಿಗೆ ಜನ್ಮ ನೀಡುವ ಪ್ರಕರಣಗಳು ತುಂಬಾ ಅಪರೂಪ. 5.12 ಲಕ್ಷ ಜನರಲ್ಲಿ ಒಬ್ಬರು ಮಾತ್ರ ಈ ರೀತಿ 4 ಮಕ್ಕಳಿಗೆ ಜನ್ಮ ನೀಡುವುದು ಕಂಡು ಬರುತ್ತದೆ. 4 ಮಕ್ಕಳಾಗುವುದಕ್ಕೆ ಅನುವಂಶೀಯ ಅಂಶಗಳೇ ಕಾರಣ ಎಂದು ತಜ್ಞವೈದ್ಯರೊಬ್ಬರು ಮಾಹಿತಿ ಹಂಚಿಕೊಂಡಿದ್ದಾರೆ. ತಾಯಿ ಮಕ್ಕಳು ಆರೋಗ್ಯವಾಗಿದ್ದಾರೆ ಎಂದು ಆಸ್ಪತ್ರೆ ವೈದ್ಯ ಡಾ.ಧನಂಜಯ ಸರ್ಜಿ ತಿಳಿಸಿದ್ದಾರೆ.

ಲುಲು ಗ್ರೂಪ್‌ನಿಂದ ರಾಜ್ಯದಲ್ಲಿ 2 ಸಾವಿರ ಕೋಟಿ ಹೂಡಿಕೆ

● ದಾವೋಸ್ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಸಿಎಂ ಜೊತೆ ಒಪ್ಪಂದಕ್ಕೆ ಸಹಿ ● 10 ಸಾವಿರ ಉದ್ಯೋಗ ಸೃಷ್ಟಿ ನಿರೀಕ್ಷೆ



ದಾವೋಸ್ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಮೆ.ಲುಲು ಗ್ರೂಪ್ ಇಂಟರ್ ನ್ಯಾಷನಲ್ ನಿರ್ದೇಶಕ ಎ.ವಿ.ಅನಂತರಾಮನ್(ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತಿರುವುದು) ಮತ್ತಿತರರೊಂದಿಗೆ ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಚರ್ಚೆ ನಡೆಸಿದರು.

ಬೆಂಗಳೂರು, ಮೇ 23– ಕರ್ನಾಟಕದಲ್ಲಿ ಹೂಡಿಕೆಗೆ ಇರುವ ಅವಕಾಶಗಳ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದಾವೋಸ್ ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ಹಲವು ಉದ್ಯಮಿಗಳು ಮತ್ತು ಕಂಪನಿಗಳ ಜೊತೆ ಚರ್ಚೆ ನಡೆಸಿದ್ದಾರೆ.

ಮೊದಲ ದಿನ ಕೆಲ ಉದ್ಯಮಿಗಳಿಗೆ ಬಂಡವಾಳ ಹೂಡಲು ಸಹ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಪ್ಪಂದ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿ ಹೂಡಿಕೆ ಮಾಡುವ ಕುರಿತು ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಲುಲು ಗ್ರೂಪ್ ಕರ್ನಾಟಕದಲ್ಲಿ ಸುಮಾರು ಎರಡು ಸಾವಿರ ಕೋಟಿ ರೂ. ಹೂಡಿಕೆಗೆ ಮುಂದಾಗಿದೆ. 4 ಶಾಪಿಂಗ್ ಮಾಲ್ ಮತ್ತು ಹೈಪರ್ ಮಾರ್ಕೆಟ್ ಹಾಗೂ ರಫ್ತು ಆಧಾರಿತ ಆಹಾರ ಮಳಿಗೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಮೂಲಕ 10 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಹೊಂದಲಾಗಿದೆ.

ಲುಲು ಗ್ರೂಪ್ ಇಂಟರ್ ನ್ಯಾಷನಲ್‌ನ ನಿರ್ದೇಶಕ ಎ.ವಿ.ಅನಂತ ರಾಮನ್ ಜತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಜೊತೆಗೆ ಹೀರೋ ಮೋಟೋಕಾರ್ಪ್‌ನ ಅಧ್ಯಕ್ಷ ಹಾಗೂ ಸಿಇಒ ಪವನ್ ಮುಂಜಲ್ ಜತೆ ಚರ್ಚೆ ನಡೆಸಿದ್ದಾರೆ. ಹಲವು ಹೂಡಿಕೆ ಯೋಜನೆಗಳಿಗೂ ಸಹಿ ಹಾಕಿದ್ದಾರೆ. ಕರ್ನಾಟಕದ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅವರು ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಾಥ್ ನೀಡಿದ್ದಾರೆ.

ವಿಶ್ವದ ಪ್ರಮುಖ ಸಂಸ್ಥೆಗಳೊಂದಿಗೆ ಸಿಎಂ ಚರ್ಚೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂದು ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ಜ್ಯೂಬಿಲಿಯಂಟ್ ಗ್ರೂಪ್, ಹಿಟಾಚಿ ಹಾಗೂ ಸೀಮನ್ಸ್ ಸಂಸ್ಥೆಯ ಮುಖ್ಯಸ್ಥರೊಂದಿಗೆ ಚರ್ಚಿಸಿದರು.

ಕರ್ನಾಟಕ ಸರ್ಕಾರದಿಂದ ಭರವಸೆ: ಆಧುನಿಕ ವೈದ್ಯಕೀಯ ಉಪಕರಣಗಳ ಉತ್ಪಾದನೆಗೆ ಸಂಬಂಧಿಸಿದಂತೆ ವಿಶೇಷ ಪ್ರೋತ್ಸಾಹಕಗಳನ್ನು ಕರ್ನಾಟಕ ಸರ್ಕಾರ ಒದಗಿಸುವ ಭರವಸೆ ನೀಡಿದೆ. ಬಿಯಾಂಡ್ ಬೆಂಗಳೂರು ಯೋಜನೆಯಡಿ ತುಮಕೂರು, ಹುಬ್ಬಳ್ಳಿ– ಧಾರವಾಡ ಮತ್ತು ಮೈಸೂರು ನಗರಗಳಲ್ಲಿಯೂ ಹೂಡಿಕೆ ಮಾಡುವ ಕುರಿತು ರಾಜ್ಯ ಸರ್ಕಾರ ಮತ್ತು ಸೀಮನ್ಸ್ ಸಂಸ್ಥೆ ಮಾತುಕತೆ ನಡೆಸಿತು.

ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ. ಇ.ವಿ. ರಮಣ ರೆಡ್ಡಿ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಕೈಗಾರಿಕಾ ಇಲಾಖೆಯ ಆಯುಕ್ತರಾದ ಗುಂಜನ್ ಕೃಷ್ಣ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಆಸ್ಟ್ರೇಲಿಯಾ ನೂತನ ಪ್ರಧಾನಿಯಾಗಿ ಆಂಟನಿ ಅಲ್ಬನೀಸ್ ಅಧಿಕಾರ ಸ್ವೀಕಾರ

ಕ್ಯಾನ್‌ಬೆರಾ (ಆಸ್ಟ್ರೇಲಿಯಾ), ಮೇ 23– ಆಸ್ಟ್ರೇಲಿಯಾದ ನೂತನ ಪ್ರಧಾನಿಯಾಗಿ ಆಂಟನಿ ಅಲ್ಬನೀಸ್ ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ಅದರ ಬೆನ್ನಲ್ಲೇ ಅಲ್ಬನೀಸ್ ಕ್ವಾಡ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಜಪಾನ್‌ನ ಟೋಕಿಯೊಗೆ ತೆರಳಿದರು.



ಆಸ್ಟ್ರೇಲಿಯಾ ಸಂಸತ್ತಿಗೆ ಶನಿವಾರ ನಡೆದ ಚುನಾವಣೆಯಲ್ಲಿ ವಿಪಕ್ಷ ಲೇಬರ್ ಪಾರ್ಟಿ ಈಗಾಗಲೇ ಸರಳ ಬಹುಮತ ಪಡೆದುಕೊಂಡಿದ್ದು, ಮತ ಎಣಿಕೆ ಕಾರ್ಯ ಮುಂದುವರಿದಿದೆ. ಈ ಮೂಲಕ ಸತತ 9 ವರ್ಷಗಳ ಕಾಲ ಅಧಿಕಾರದಲ್ಲಿದ್ದ ಸ್ಕಾಟ್ ಮಾರಿಸನ್ ನೇತೃತ್ವದ ಕನ್ಸರ್ವೇಟಿವ್ ಪಕ್ಷವನ್ನು ಲೇಬರ್ ಪಾರ್ಟಿ ಪರಾಭವಗೊಳಿಸಿದೆ.

ಉತ್ತರಾಖಂಡದ ವಿಕಲಚೇತನ ಕಲ್ಪನಾಳ 'ಶಿಕ್ಷಣ ಮಾತೆ' ತಾರಾಮೂರ್ತಿ ನಿವಾಸಕ್ಕೆ ಡಿಡಿಪಿಐ ಭೇಟಿ: ಅಭಿನಂದನೆ



ಮೈಸೂರು, ಮೇ 23(ಎಸ್‌ಬಿಡಿ)– ಸಂಕಷ್ಟದಲ್ಲಿದ್ದ ವಿಕಲಚೇತನ ಬಾಲಕಿ ಕಲ್ಪನಾಳನ್ನು ಮೈಸೂರಿಗೆ ಕರೆತಂದು ಆಕೆಯ ವಿದ್ಯಾಭ್ಯಾಸಕ್ಕೆ ನೆರವಾಗಿರುವ ಪ್ರೊ.ತಾರಾ ಮೂರ್ತಿ ಅವರನ್ನು ಡಿಡಿಪಿಐ ರಾಮಚಂದ್ರರಾಜೇ ಅರಸ್ ಭೇಟಿಯಾಗಿ ಅಭಿನಂದನೆ ತಿಳಿಸಿದರು.

ಮೈಸೂರಿನ ಜಯನಗರದಲ್ಲಿರುವ ಪ್ರೊ.ತಾರಾ ಮೂರ್ತಿ ಅವರ ನಿವಾಸದಲ್ಲಿ ಸೋಮವಾರ ಭೇಟಿಯಾದ ಡಿಡಿಪಿಐ, ಮಾನವತೆಗೆ ಸಾಕ್ಷಿಯಾದ ಆ ಒಂದು ಸಂಗತಿ ಬಗ್ಗೆ ತಿಳಿದುಕೊಂಡರು. ಕೌಟುಂಬಿಕ ಸಮಸ್ಯೆಯಿಂದ ಶಿಕ್ಷಣದಿಂದ ದೂರ ಉಳಿದಿದ್ದ ವಿಕಲ ಚೇತನೆ ಕಲ್ಪನಾಳ ಬಾಳಲ್ಲಿ ಹೊಸ ಬೆಳಕು ಮೂಡಿಸಿರುವ ಮಾತೃ ಹೃದಯಿಗೆ ಅಭಿನಂದಿಸಿದರು.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಡಿಡಿಪಿಐ ರಾಮಚಂದ್ರರಾಜೇ ಅರಸ್, ಉತ್ತರಾಖಂಡದಿಂದ ಜೊತೆಯಲ್ಲಿ ಕರೆದುಕೊಂಡು ಬಂದ ಕಲ್ಪನಾಳಿಗೆ ತಮ್ಮ ನಿವಾಸದಲ್ಲೇ ನೆಲೆ ನೀಡಿ, ಪಾಠ ಹೇಳಿಕೊಟ್ಟು ಆಕೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಕನ್ನಡದಲ್ಲೇ ಬರೆದು ಉತ್ತಮ ಅಂಕಗಳೊಂದಿಗೆ ಉತ್ತೀರ್ಣಳಾಗಲು ಕಾರಣರಾಗಿರುವ ಪ್ರೊ.ತಾರಾ ಮೂರ್ತಿ ಅವರ ಸತ್ಕಾರ್ಯ ಅನುಕರಣೀಯ. ಬಾಲಕಿ ಊರಿಗೆ ತೆರಳಿದ್ದು, ಪಿಯುಸಿಯನ್ನು ಮೈಸೂರಿನಲ್ಲೇ ಮುಂದುವರೆಸಲಿದ್ದಾಳೆ ಎಂದು ತಾರಾ ಅವರು ತಿಳಿಸಿದ್ದಾರೆ. ಈ ಬಗ್ಗೆ ಡಿಡಿಪಿಯು ಅವರ ಗಮನಕ್ಕೆ ತಂದಿದ್ದು, ಆಕೆಯ ವಿದ್ಯಾಭ್ಯಾಸಕ್ಕೆ ಅಗತ್ಯ ಸಹಕಾರ ನೀಡುವಂತೆ ನಾನೂ ಮನವಿ ಮಾಡಿದ್ದೇನೆ ಎಂದು ಹೇಳಿದರು.

ಉತ್ತರಾಖಂಡ ಜೋಶಿಮಠ ನಗರದ ಉರ್ಗಮ್ ಕಣಿವೆಯ ರವೀಂದ್ರ ಸಿಂಗ್ ಮತ್ತು ಆಶಾ ಅವರ ಪುತ್ರಿ ಕಲ್ಪನಾ, 3 ವರ್ಷದ ಮಗುವಾಗಿದ್ದಾಗಲೇ ತಾಯಿ ಕಳೆದುಕೊಂಡು ಮಲತಾಯಿಯ ನಿರ್ಲಕ್ಷ್ಯಕ್ಕೆ ಗುರಿಯಾದಳು. ತಾತ ರಾಮ್‌ಸಿಂಗ್ ನೇಗಿ ಪೋಷಣೆ ಮಾಡುತ್ತಿದ್ದರಾದರೂ ಮಾನಸಿಕ ಆಘಾತ ಹಾಗೂ ಅನಾರೋಗ್ಯದಿಂದ ಕಲ್ಪನಾಳಿಗೆ ಟಿಬಿ ಖಾಯಿಲೆ ಬಾಧಿಸಿದ್ದಲ್ಲದೆ ದೃಷ್ಟಿಯೂ ಇಲ್ಲದಾಯಿತು. ಅಧ್ಯಯನ ಪ್ರವಾಸಕ್ಕಾಗಿ ಅಲ್ಲಿಗೆ ತೆರಳಿದ್ದ ಈಶಾ ಫೌಂಡೇಶನ್ ಸ್ವಯಂ ಸೇವಕರೂ ಆದ ಪ್ರೊ.ತಾರಾ ಮೂರ್ತಿ ಅವರು ಇದೆಲ್ಲವನ್ನೂ ಗಮನಿಸಿ, ರಾಮ್‌ಸಿಂಗ್ ನೇಗಿ ಅವರ ಮನವಿಯಿಂದ ಕಲ್ಪನಾಳನ್ನು ತಮ್ಮೊಂದಿಗೆ ಕರೆತಂದರು. ಮೈಸೂರಿನ ರಂಗರಾವ್ ಮೆಮೋರಿಯಲ್ ವಿಕಲಚೇತನರ ಶಾಲೆಗೆ ದಾಖಲು ಮಾಡಿ 7ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿಸಿದರು. ನಂತರ ಕೊರೊನಾ ಕಾರಣದಿಂದ ತಾವೇ ಮನೆಯಲ್ಲಿ ಪಾಠ ಹೇಳಿಕೊಟ್ಟು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಿದ್ಧಗೊಳಿಸಿದ್ದರು. ನೇರ ವಿದ್ಯಾರ್ಥಿಯಾಗಿ ಪರೀಕ್ಷೆ ಬರೆದ ಕಲ್ಪನಾ, ಕನ್ನಡದಲ್ಲಿ 92 ಸೇರಿದಂತೆ ಒಟ್ಟು 514 ಅಂಕಗಳೊಂದಿಗೆ ಉತ್ತೀರ್ಣಳಾಗಿದ್ದಾಳೆ. ಕಲ್ಪನಾಳ ಸಾಧನೆ ಹಾಗೂ ಇದಕ್ಕೆ ಕಾರಣೀಭೂತರಾದ ಸಹೃದಯಿ ಪ್ರೊ.ತಾರಾ ಮೂರ್ತಿ ಅವರ ಮಾನವ ಸಂದೇಶದ ಬಗ್ಗೆ 'ಮೈಸೂರು ಮಿತ್ರ'ನ ಮೇ 20ರ ಸಂಚಿಕೆಯಲ್ಲಿ ವರದಿ ಪ್ರಕಟಿಸಲಾಗಿತ್ತು.

ಜ್ಞಾನವಾಪಿ ಮಸೀದಿ ವಿವಾದ

ಜಿಲ್ಲಾ ನ್ಯಾಯಾಲಯದಿಂದ ಇಂದು ಮಹತ್ವದ ಆದೇಶ

ನವದೆಹಲಿ, ಮೇ 23– ಜ್ಞಾನವಾಪಿ ಮಸೀದಿಯಲ್ಲಿ ಶಿವಲಿಂಗ ಪತ್ತೆಯಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಳೆ ವಾರಣಾಸಿಯ ಜಿಲ್ಲಾ ನ್ಯಾಯಾಲಯ ಮಹತ್ವದ ಆದೇಶ ನೀಡಲಿದೆ. ಸುಪ್ರೀಂಕೋರ್ಟ್ ಆದೇಶದನ್ವಯ ಇಂದು ಸುಮಾರು 45 ನಿಮಿಷಗಳ ಸುಧೀರ್ಘ ವಿಚಾರಣೆ ನಡೆಸಿದ ನ್ಯಾ. ಅಜಯ್ ಕೃಷ್ಣ ವಿಶ್ವೇಶ ನಾಳೆಗೆ ತೀರ್ಪು ಕಾಯ್ದಿರಿಸಿದರು.



ವಿಚಾರಣೆ ವೇಳೆ ಮಸೀದಿಯಲ್ಲಿ ಪತ್ತೆಯಾಗಿದೆ ಎನ್ನಲಾಗಿರುವ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಅನುಮತಿ ಕೋರಿ ಹಿಂದೂ ಪರ ವಕೀಲರು ಸಲ್ಲಿಸಿದ್ದ ಅರ್ಜಿಗೆ ಮಸೀದಿ ಪರ ವಕೀಲರು ವಿರೋಧ ವ್ಯಕ್ತಪಡಿಸಿದರು. 1991 ಕಾಯಿದೆ ಅನ್ವಯ ಈ ಅರ್ಜಿ ವಿಚಾರಣೆ ಅರ್ಹವಾಗಿಲ್ಲ, ಇದು ಆರ್ಡರ್ 7 ರೂಲ್ 11 ಉಲ್ಲಂಘನೆಯಾಗಿದೆ ಎಂದು ವಾದಿಸಿದರು.

ಈ ನಿಯಮ ಉಲ್ಲಂಘಿಸಿ ನಡೆಸಿದ ಸರ್ವೆ ಕೂಡಾ ಅನೂರ್ಜಿತವಾಗಿದ್ದು ಮೊದಲು ಈ ಅರ್ಜಿ ವಿಚಾರಣೆಗೆ ಅರ್ಹವೇ? ಅಲ್ಲವೇ? ಎಂದು ತಿರ್ಮಾನವಾಗಬೇಕು ಎಂದು ಕೋರ್ಟ್ ಗೆ ಮನವಿ ಮಾಡಿದರು. ಇದಕ್ಕೆ ಪ್ರತಿವಾದ ಸಲ್ಲಿಸಿದ ಹಿಂದೂ ಪರ ವಕೀಲರು ಕಾನೂನು ಬದ್ಧವಾಗಿ ನಿರ್ಮಿಸಿದ ಧಾರ್ಮಿಕ ಕ್ಷೇತ್ರಗಳಿಗೆ ಮಾತ್ರ 1991 ಅನ್ವಯವಾಗಲಿದ್ದು ಅತಿಕ್ರಮಣ ಕಟ್ಟಡಗಳಿಗಲ್ಲ, ರಾಮ ಮಂದಿರ ಪ್ರಕರಣವನ್ನು ಇದೇ ಆಧಾರದ ಮೇಲೆ ಸುಪ್ರೀಂಕೋರ್ಟ್ ವಿಚಾರಣೆ ನಡೆಸಿದೆ ಎಂದರು.

ಮಥುರಾದ ಶಾಹಿ ಈದ್ಗಾ ಮಸೀದಿಯಲ್ಲಿ ಅಭಿಷೇಕಕ್ಕೆ ಅನುಮತಿ ಕೋರಿ ಹಿಂದೂ ಮಹಾಸಭಾ ಅರ್ಜಿ

ಜುಲೈ 1ಕ್ಕೆ ವಿಚಾರಣೆ

ಮಥುರಾ, ಮೇ 23– ಸೋಮವಾರ ಹಿಂದೂ ಮಹಾಸಭಾ ಶಾಹಿ ಈದ್ಗಾ ಮಸೀದಿಯ ಶುದ್ದೀಕರಣ ಕೋರಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವುದರೊಂದಿಗೆ ಶ್ರೀ ಕೃಷ್ಣ ಜನ್ಮಭೂಮಿ ಮತ್ತು ಶಾಹಿ ಈದ್ಗಾ ಮಸೀದಿಯ ಮತ್ತೊಂದು ಭೂ ವಿವಾದವೇರ್ಪಟ್ಟಿದೆ. ಜುಲೈ 1ರಂದು ಅರ್ಜಿ ವಿಚಾರಣೆ ನಡೆಯಲಿದೆ.

ಶ್ರೀ ಕೃಷ್ಣ ಜನ್ಮಭೂಮಿಯ ಗರ್ಭಗುಡಿಯಲ್ಲಿ ಈದ್ಗಾ ಮಸೀದಿ ನಿರ್ಮಿಸಲಾಗಿದೆ ಎಂದು ಹಿಂದೂ ಮಹಾಸಭಾದ ಖಜಾಂಚಿ ದಿನೇಶ್ ಶರ್ಮಾ ಮನವಿಯಲ್ಲಿ ಹೇಳಿದ್ದಾರೆ. ಪುರಾತನ ದೇವಾಲಯದ ವಿವಾದಿತ ಸ್ಥಳದಲ್ಲಿ 'ಅಭಿಷೇಕ' ಮತ್ತು ಭಗವಾನ್ ಕೃಷ್ಣನ ಪೂಜೆ ಮಾಡಲು ಶಾಹಿ ಈದ್ಗಾ ಮಸೀದಿ ಪ್ರವೇಶಿಸಲು ಅವರು ಅನುಮತಿ ಕೇಳಿದ್ದಾರೆ.

ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಯಶೋವರ್ಮ ನಿಧನ

ಉಜಿರೆ, ಮೇ 23– ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ.ಬಿ. ಯಶೋವರ್ಮ ಇಂದು ನಿಧನರಾಗಿದ್ದು, ಅವರಿಗೆ 72 ವರ್ಷ ವಯಸ್ಸಾಗಿತ್ತು. ಉಜಿರೆ ನಿವಾಸಿಯಾಗಿರುವ ಡಾ.ಬಿ. ಯಶೋವರ್ಮ ಅವರು ಭಾನುವಾರ ತಡರಾತ್ರಿ ಸಿಂಗಪುರದಲ್ಲಿ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ಅನಾರೋಗ್ಯದ ನಿಮಿತ್ತ ಚಿಕಿತ್ಸೆಗಾಗಿ ಅವರು ಸಿಂಗಪುರಕ್ಕೆ ಹೋಗಿದ್ದರು ಎಂದು ತಿಳಿದುಬಂದಿದೆ. ಬೆಳ್ತಂಗಡಿ ತಾಲೂಕಿನ ಪೆರಾಡಿ ಬೀಡು ನಿವಾಸಿಯಾದ ಯಶೋವರ್ಮಾ ಅವರು, ಮೂಡುಬಿದಿರೆ ಜೈನ್ ಹೈಸ್ಕೂಲಿನ 'ಕನ್ನಡ ಪಂಡಿತ'ರೆಂದೇ ಚಿರಪರಿಚಿತರಾಗಿದ್ದ ದಿವಂಗತ ಟಿ. ರಘು ಚಂದ್ರ ಶೆಟ್ಟಿ ಅವರ ಪುತ್ರರಾಗಿದ್ದಾರೆ. ಸಸ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರಾದ ಅವರು ಧಾರವಾಡದಲ್ಲಿ ಜೆಎಸ್‌ಎಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಬಳಿಕ ಉಜಿರೆಯ ಎಸ್‌ಡಿಎಂ ಕಾಲೇಜಿನ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ್ದರು.



ಉನ್ನತ ಶ್ರೇಣಿಯಲ್ಲಿ ಉತ್ತೀರ್ಣ



ಮೈಸೂರು, ಮೇ 23– ಮೈಸೂರಿನ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಶಿವಣ್ಣ ಅವರ ಪುತ್ರಿ ರಚನಾಶ್ರೀ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 551 (ಶೇ.88.16) ಅಂಕಗಳೊಂದಿಗೆ ತೇರ್ಗಡೆಯಾಗಿದ್ದಾಳೆ. ಪರೀಕ್ಷೆಯನ್ನು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಎಲ್ಲಾ ಪತ್ರಿಕಾ ವಿತರಕರ ಮಕ್ಕಳಿಗೂ ಸಂಘದ ವತಿಯಿಂದ ಅಭಿನಂದನೆ ತಿಳಿಸುವುದಾಗಿ ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಸಿ ಕೋರ್ಟ್ ಆದೇಶ ಉಲ್ಲಂಘಿಸಿ ಕಟ್ಟಡ ನಿರ್ಮಾಣ ; ಆರೋಪ

ಮೈಸೂರು,ಮೇ 23(ಪಿಎಂ)– ಹೆಚ್‌ಡಿ ಕೋಟೆ ತಾಲೂಕು ಅಂತರಸಂತೆ ಗ್ರಾಮದ ಸರ್ವೇ ನಂಬರ್ 110ರಲ್ಲಿರುವ 3.05 ಎಕರೆ ಜಮೀನಿನಲ್ಲಿ ಯಾವುದೇ ಕಟ್ಟಡ ನಿರ್ಮಿಸದೇ ಯಥಾಸ್ಥಿತಿ ಕಾಪಾಡುವಂತೆ ಜಿಲ್ಲಾಧಿಕಾರಿಗಳ ಕೋರ್ಟ್‌ನ ಮಧ್ಯಂತರ ಆದೇಶವಿದ್ದರೂ ಅಕ್ರಮವಾಗಿ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದು ಶ್ರೀ ಪಾರ್ವತಿ ಪರಮೇಶ್ವರ ಅರ್ಚಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಮಹದೇವಪ್ಪ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸದರಿ ಜಮೀನು ನಮ್ಮ ಪಿತ್ರಾರ್ಜಿತ ಆಸ್ತಿ. ಇಲ್ಲಿ ನಮ್ಮ ಹಿರಿಯರು ಮಹದೇಶ್ವರ ದೇವಸ್ಥಾನ ನಿರ್ಮಿಸಿದ್ದಾರೆ. ಗ್ರಾಮದ ಕೆಲವರು ಗುಂಪು ಕಟ್ಟಿಕೊಂಡು ಅಕ್ರಮ ಸಮಿತಿ ಮಾಡಿಕೊಂಡು ದೇವಸ್ಥಾನದಿಂದ ನಮ್ಮನ್ನೇ ಹೊರಹಾಕಿದರು. ಅಲ್ಲದೆ, 2017ರಲ್ಲಿ ತಮ್ಮ ಸಮಿತಿ ಹೆಸರಿಗೆ ಜಮೀನಿನ ಖಾತೆ ಮಾಡುವಂತೆ ಎಸಿ ಕೋರ್ಟ್ ಮೊರೆ ಹೋದರು. ಈ ಹಿನ್ನೆಲೆಯಲ್ಲಿ ಸದರಿ ಆಸ್ತಿಯು ಸರ್ಕಾರಕ್ಕೆ ಸೇರಿದ್ದೆಂದು ಆದೇಶವಾಯಿತು ಎಂದರು.

ಈ ಸಂಬಂಧ ನಾವು ಡಿಸಿ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ವಿಚಾರಣೆ ನಡೆಯುತ್ತಿದೆ. ಇತ್ತೀಚಿಗೆ ಅವರು ಸದರಿ ಸ್ಥಳದಲ್ಲಿ ಕಟ್ಟಡ ನಿರ್ಮಾಣಕ್ಕೆ ಮುಂದಾದ ಸಂಬಂಧ ನಮ್ಮ ಪರ ವಕೀಲರ ವಾದ ಪರಿಗಣಿಸಿ, ಸದರಿ ಸ್ಥಳದಲ್ಲಿ ಯಥಾಸ್ಥಿತಿ ಕಾಪಾಡುವಂತೆ ಡಿಸಿ ಕೋರ್ಟ್ ಮಧ್ಯಂತರ ಆದೇಶ ನೀಡಿದೆ. ಆದರೂ 5 ಅಡಿ ಗೋಡೆ ನಿರ್ಮಿಸಿದ್ದಾರೆ ಎಂದು ಆರೋಪಿಸಿದರು. ಸಂಘದ ಸದಸ್ಯ ಎಂ.ಎನ್.ಸುರೇಶ್, ಮುಖಂಡ ಸಚ್ಚಿನ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮೇ 25ರಂದು ಜ್ಞಾನಬುತ್ತಿ ಶಿಬಿರಾರ್ಥಿಗಳಿಗೆ ಶುಭಹಾರೈಕೆ

ಮೈಸೂರು,ಮೇ 23(ಪಿಎಂ)–ಮೈಸೂರಿನ ಲಕ್ಷ್ಮೀಪುರಂನ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಆವರಣದಲ್ಲಿರುವ ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಹಮ್ಮಿಕೊಂಡಿರುವ ಉಚಿತ ಐಎಎಸ್, ಕೆಎಎಸ್ ಪರೀಕ್ಷೆಯ ತರಬೇತಿ ಶಿಬಿರದ ಶಿಬಿರಾರ್ಥಿಗಳಿಗೆ ಮೇ 25ರಂದು ಶುಭ ಹಾರೈಕೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಅಂದು ಸಂಜೆ 6.30ಕ್ಕೆ ಸಂಸ್ಥೆ ಆವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಸಚಿವರೂ ಆದ ಶಾಸಕ ಎಸ್.ಎ.ರಾಮದಾಸ್ ಶಿಬಿರಾರ್ಥಿಗಳಿಗೆ ಶುಭ ಹಾರೈಸಿ, ಸಂವಾದ ನಡೆಸಲಿದ್ದಾರೆ. ಅಲ್ಲದೆ, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮಿಕಾಂತರೆಡ್ಡಿಯವರು ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಪುಸ್ತಕ ಬಿಡುಗಡೆಗೊಳಿಸಿ, ಅಭ್ಯರ್ಥಿಗಳಿಗೆ ಶುಭ ಕೋರಲಿದ್ದಾರೆ.

ಮೈಸೂರು ವಿವಿ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಹೆಚ್.ಎಂ.ರಾಜಶೇಖರ್ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಪ್ರೊ.ಕೆ.ಎಂ.ಪ್ರಸನ್ನಕುಮಾರ್, ಪ್ರೊ.ಹೊನ್ನಯ್ಯ, ಪ್ರೊ.ವಿ.ಜಯಪ್ರಕಾಶ್, ಡಾ.ಎನ್.ಮಹದೇವಸ್ವಾಮಿ, ಪ್ರೊ.ಸಿ.ಕೆ.ಕಿರಣ್‌ಕೌಶಿಕ್, ರೋಹನ್‌ರವಿಕುಮಾರ್, ಡಿ.ನವೀನ್ ಪ್ರಸಾದ್, ಡಾ.ಎಸ್‌ಬಿಎಂ ಪ್ರಸನ್ನ, ಶರದ್‌ರಾವ್, ನಾಗರಾಜು, ಸಿ.ಮೋಹನ್, ನೆಲ್ವಿನ್ ಪ್ರವೀಣ್‌ಕುಮಾರ್, ಎಸ್.ಎನ್.ಲಿಂಗರಾಜು, ಡಾ.ಈ.ಶಿವಪ್ರಸಾದ್, ರಾಜೇಂದ್ರ ಪ್ರಸಾದ್, ಕೆ.ವೈ.ನಾಗೇಂದ್ರ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳೆ ಹಾವಳಿ; ತರಕಾರಿ ದುಬಾರಿ

ನಗರ ವಾಸಿಗಳಿಗೆ ಬಿಸಿ ತುಪ್ಪವಾಗಿರುವ ಟೊಮೆಟೊ, ಬೀನ್ಸ್



ಮೈಸೂರು, ಮೇ 23(ಎಸ್‌ಬಿಡಿ)– ಟೊಮೆಟೊ ಹಾಗೂ ಬೀನ್ಸ್ ಬೆಲೆ ಸ್ಪರ್ಧಾತ್ಮಕವಾಗಿ ಏರಿಕೆಯಾಗುತ್ತಿದ್ದು, ಗ್ರಾಹಕರು ಕಂಗಾಲಾಗಿದ್ದಾರೆ. ಸದ್ಯ ವಿವಾಹ ಇನ್ನಿತರ ಸಮಾರಂಭಗಳು ನಡೆಯುತ್ತಿದ್ದು ತರಕಾರಿಗೆ ಬೇಡಿಕೆ ಹೆಚ್ಚಿದೆ. ಆದರೆ ನಿರತಂರ ಮಳೆಯಿಂದ ಬೆಳೆ ನಷ್ಟವಾಗಿ ಬೇಡಿಕೆಯಷ್ಟು ಪೂರೈಕೆ ಸಾಧ್ಯವಾಗುತ್ತಿಲ್ಲ. ಪರಿಣಾಮ ಸಾಮಾನ್ಯ ಗ್ರಾಹಕರು ನೂರರ ಗಡಿ ದಾಟಿರುವ ಬೆಲೆ ಏರಿಕೆ ಬರೆಗೆ ಗುರಿಯಾಗಿದ್ದಾರೆ. ಟೊಮೆಟೊ ಹಾಗೂ ತರಕಾರಿ ಬಾತ್, ಗೊಜ್ಜು, ಸಾಂಬಾರ್, ಪಲ್ಯ ಮಾಡಿಕೊಳ್ಳಲು ಯೋಚಿಸುವಂತಾಗಿದೆ.

ಮಳೆ ಆರಂಭವಾಗುವ ಮುನ್ನ 10–20 ರೂ. ಇದ್ದ ಬೆಲೆ ನಂತರದ ದಿನಗಳಲ್ಲಿ ಏರಿಕೆಯಾಗಿದೆ. ಅದರಲ್ಲೂ ನಿತ್ಯ ಬಳಸುವ ತರಕಾರಿಗಳಾದ ಬೀನ್ಸ್ ಹಾಗೂ ಟೊಮೆಟೊ ದರ ನಾಗಾಲೋಟದಲ್ಲಿ ಹೆಚ್ಚಳವಾಗಿದೆ. ಮಾರುಕಟ್ಟೆ ಬಡಾವಣೆಗಳ ತರಕಾರಿ ಮಳಿಗೆಗಳು, ಬೀದಿ ಬದಿ ವ್ಯಾಪಾರಿಗಳು ಹಾಗೂ ತಳ್ಳುಗಾಡಿಗಳಲ್ಲಿ ತರಕಾರಿ ಬೆಲೆ ವ್ಯತ್ಯಾಸವಿದೆ.



80–120 ರೂ: ಮೈಸೂರಿನ ಬಂಡಿಪಾಳ್ಯ ಎಪಿಎಂಸಿ ಮಾರುಕಟ್ಟೆಯಲ್ಲಿ ಕೆಜಿ ಟೊಮೆಟೊ ಬೆಲೆ 80 ರೂ. ಇದೆ. ಮಾರುಕಟ್ಟೆಗಳಲ್ಲಿ ಕೆಜಿಗೆ 100–120 ರೂ.ಗೆ ಮಾರಾಟ ಮಾಡಲಾಗುತ್ತಿದೆ. ಇತರೆ ಅಂಗಡಿಗಳಲ್ಲಿ 5–10 ರೂ. ವ್ಯತ್ಯಾಸವಿದೆ. ಎಪಿಎಂಸಿಯಲ್ಲಿ ಬೀನ್ಸ್‌ಗೆ 80 ರೂ. ಇದ್ದು, ಹೊರಗಡೆ 20–40 ರೂ. ಹೆಚ್ಚು ಬೆಲೆ ಇದೆ. ದಪ್ಪ ಮೆಣಸಿನ ಕಾಯಿ(ಕ್ಯಾಪ್ಸಿಕಂ–47–60ರೂ.), ಕ್ಯಾರೆಟ್ (40–50ರೂ.), ತೊಂಡೆಕಾಯಿ(35–50ರೂ.), ಬಜ್ಜಿ ಮೆಣಸಿನಕಾಯಿ(30–40 ರೂ.) ದರ ಹೆಚ್ಚಿದ್ದು, ಮೆಣಸಿನ ಕಾಯಿ(10 ರೂ.) ಬೆಲೆ ಗಣನೀಯವಾಗಿ ಕುಸಿದಿದೆ.

ಮೈಸೂರು ಭಾಗದಲ್ಲಿ ರೈತರು ಸಹಜವಾಗಿ ಬೆಳೆಯುತ್ತಿದ್ದ ತರಕಾರಿ ಇಳುವರಿ ಮಳೆಯಿಂದಾಗಿ ಶೇ.30ಕ್ಕಿಂತ ಹೆಚ್ಚು ಕ್ಷೀಣಿಸಿದೆ. ಹಲವೆಡೆ ಮಳೆ ನೀರಿನಿಂದ ಬೆಳೆ ಸಂಪೂರ್ಣ ನಾಶವಾಗಿದೆ. ಜೋರು ಗಾಳಿ–ಮಳೆಯಿಂದ ತರಕಾರಿ ನೆಲಕಚ್ಚಿದೆ. ನೆಲದೊಳಗೆ ಬೆಳೆಯುವ ತರಕಾರಿಗಳು ಕೊಳೆತು ಹೋಗಿವೆ. ಟೊಮೆಟೊ ಹಾಗೂ ಬೀನ್ಸ್ ಅನ್ನು ಇತರೆ ತರಕಾರಿಗಳಿಗಿಂತ ಹೆಚ್ಚು ಬಳಕೆ ಮಾಡಿಕೊಳ್ಳುವುದರಿಂದ ಬೇಡಿಕೆ ಹೆಚ್ಚು. ಅದರಲ್ಲೂ ವಿವಾಹ ಇನ್ನಿತರ ಕಾರ್ಯಕ್ರಮಗಳಿರುವುದರಿಂದ ಭಾರೀ ಬೇಡಿಕೆ ಸೃಷ್ಟಿಯಾಗಿದೆ. ಮಳೆ ಕ್ಷೀಣಿಸಿದ್ದರೂ ಇನ್ನಷ್ಟು ದಿನ ಬೆಲೆ ಕಡಿಮೆಯಾಗುವುದು ಅನುಮಾನ ಎಂದು ವ್ಯಾಪಾರಿ, ನಿಸರ್ಗ ಸ್ಟೋರ್ಸ್‌ನ ಶಿವು ತಿಳಿಸಿದರು.

ಕಳೆದೆರಡು ತಿಂಗಳಿಗೆ ಹೋಲಿಸಿದರೆ ಎಪಿಎಂಸಿ ಮಾರುಕಟ್ಟೆಗೆ ಬರುವ ತರಕಾರಿ ಪ್ರಮಾಣದಲ್ಲಿ ಶೇ.35–40ರಷ್ಟು ಕಡಿಮೆಯಾಗಿದೆ. ಎರಡು ವಾರಗಳಿಂದ ಮಳೆಯಾಗುತ್ತಿರುವ ಕಾರಣದಿಂದ ಬೆಳೆ ಹಾಳಾಗಿದೆ. ಕೊಯ್ಲು ಮಾಡುವುದಕ್ಕೂ ಸಾಧ್ಯವಾಗದೆ ಬೆಳೆಯೆಲ್ಲಾ ಮಣ್ಣು ಪಾಲಾಗಿದೆ. ಗಿಡವನ್ನು ನೆಲದಲ್ಲೇ ಹಾಸು ರೀತಿಯಲ್ಲಿ ಬಿಟ್ಟು ಬೆಳೆಸಿರುವುದೆಲ್ಲಾ ಮಳೆ ನೀರಿನಿಂದ ಕೊಳೆತು ಹೋಗಿದೆ. ಕಡ್ಡಿಯನ್ನು ನೆಟ್ಟು ಗಿಡದ ಹಂಬು ಕಟ್ಟಿ ವ್ಯವಸ್ಥಿತವಾಗಿ ಬೆಳೆಸಿದ್ದೂ ಗಾಳಿಯಿಂದ ಹಾಳಾಗಿದೆ. ಪರಿಣಾಮ ಎಪಿಎಂಸಿಗೆ ಸಾಮಾನ್ಯವಾಗಿ ಬರುತ್ತಿದ್ದ 1,200 ಟನ್ ಟೊಮೆಟೊ ಪ್ರಮಾಣ 500–600 ಟನ್‌ಗೆ ಇಳಿಕೆಯಾಗಿದೆ. ಬೀನ್ಸ್ ಕೂಡ ಸಾವಿರ ಟನ್‌ನಿಂದ 600ಕ್ಕೆ ಇಳಿದಿದೆ. ಸಮಾರಂಭಕ್ಕೆ ತರಕಾರಿ ಬೇಕಾದವರು ಬೆಳಗ್ಗೆಯೇ ಹೆಚ್ಚು ಪ್ರಮಾಣದಲ್ಲಿ ಖರೀದಿಸುತ್ತಾರೆ. ಅಂದಿನ ಲಭ್ಯತೆ ಆಧಾರದಲ್ಲಿ ಬೆಲೆ ವ್ಯತ್ಯಯವಾಗುತ್ತದೆ ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.

ನಕ್ಕರೆ ಅದೇ ಸ್ವರ್ಗ

ಮಗಳು : ಮೋಸವಾಯ್ತಪ್ಪಾ, ನಿಮ್ಮ ಅಳಿಯ ದೊಡ್ಡ ಕುಡುಕ

ಅಪ್ಪ : ದುಃಖಿಸಬೇಡಮ್ಮ, ನನಗೆಲ್ಲಾ ಗೊತ್ತು. ನನಗೆ ಅವನ ಪರಿಚಯವಾದದ್ದೇ ಬಾರ್‌ವೊಂದರಲ್ಲಿ!

ಮೈಸೂರು ಮಿತ್ರ
ಮಂಗಳವಾರ, 24 ಮೇ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ವಿನಯವಂತರಿಗೆ ಕ್ರೋಧ ಬರದು. ದೃಢ ಮನಸ್ಸುಳ್ಳವರಿಗೆ ಹಿಂಜರಿಕೆ ಇರದು.

– ಪ್ರತಿಮಾ ನಾಟಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಲೆಕ್ಕಕ್ಕಿಂತ ಹೆಚ್ಚು ಹೊರಬಾರದು, ಲೆಕ್ಕಕ್ಕಿಂತ ಹೆಚ್ಚು ಬಯಸಬಾರದು

ನಿಮ್ಮ ಪತ್ರಗಳು

ಕಾಲಾಯ ತಸ್ಮೈ ನಮಃ

ಮಾನ್ಯರೆ,

ನಗರದ ಪ್ರತಿಷ್ಠಿತ ಚಲನ ಚಿತ್ರ ಮಂದಿರಗಳಲ್ಲಿ ಒಂದಾಗಿದ್ದ "ಒಲಂಪಿಯಾ" ಚಿತ್ರ ಮಂದಿರ ಮುಚ್ಚಿರುವುದು ತೀರಾ ಬೇಸರದ ಸಂಗತಿಯಾಗಿದೆ.



ಸುಮಾರು 73 ವರ್ಷಗಳಷ್ಟು ಸುದೀರ್ಘ ಇತಿಹಾಸ ಹೊಂದಿದ್ದ ಈ ಚಿತ್ರ ಮಂದಿರವನ್ನು 1949ರಲ್ಲಿ ವರ್ಧಮಾನಯ್ಯ ಎಂಬುವರು ಸ್ಥಾಪಿಸಿದ್ದರು. ಒಂದೂವರಾಣಿ ಗಲ್ಲಿ ಎಂದೇ ಹೇಳಲಾಗುವ ಹಾಗೂ ನಗರದ ಸುಪ್ರಸಿದ್ಧ ಗಾಂಧಿ ಚೌಕದ ಸನಿಹದಲ್ಲಿದ್ದ ಈ ಚಿತ್ರ ಮಂದಿರ ತೀರಾ ದೊಡ್ಡದೂ ಅಲ್ಲದ ಅಥವಾ ತೀರಾ ಚಿಕ್ಕದೂ ಅಲ್ಲದ ಒಂದು ಸಾಮಾನ್ಯ ಪ್ರಮಾಣದ ಚಿತ್ರ ಮಂದಿರವಾಗಿತ್ತು. ಸಾಮಾನ್ಯ ವರ್ಗದ ಸಿನಿ ಪ್ರೇಕ್ಷಕರಿಗೆ ಹೇಳಿ ಮಾಡಿಸಿದಂತಿತ್ತು. ಈ ರಸ್ತೆಯಲ್ಲಿ ಸಾಲು ಸಾಲು ಅಂಗಡಿಗಳಿರುವುದರಿಂದ ಹಾಗೂ ಪಾದಚಾರಿಗಳ ನಿರಂತರ ಸಂಚಾರದಿಂದಾಗಿ ಚಿತ್ರ ಮಂದಿರದ ಸುತ್ತಮುತ್ತ ಸದಾ ಗೌಜು ಗದ್ದಲಗಳಿರುತ್ತಿದ್ದು, ರಸ್ತೆ ಬದಿ ವ್ಯಾಪಾರಿಗಳು ಸಹ ಅಲ್ಲಲ್ಲಿ ಕುಳಿತು, ಬಟ್ಟೆ, ಪಾತ್ರೆ ಪಗಡಗಳು ಹಾಗೂ ಇನ್ನಿತರ ಗೃಹೋಪಯೋಗಿ ಹಾಗೂ ಎಲೆಕ್ಟ್ರಾನಿಕ್ ವಸ್ತುಗಳನ್ನು ಆಕರ್ಷಕ ಬೆಲೆಗೆ ಮಾರುತ್ತಿದ್ದರು. ಇಂತಹ ಕೇಂದ್ರ ಸ್ಥಾನದಲ್ಲಿದ್ದ ಈ ಚಿತ್ರ ಮಂದಿರದಲ್ಲಿ ಪ್ರವೇಶ ಶುಲ್ಕ ಸಹಾ ದುಭಾರಿಯಾಗಿರಲಿಲ್ಲ. ದುನಿಯಾ, ಅವಳ ಅಂತರಂಗ ಮುಂತಾದ ಕನ್ನಡ ಚಿತ್ರಗಳು ಇಲ್ಲಿ ದೀರ್ಘ ಕಾಲ ಪ್ರದರ್ಶನಗೊಂಡಿವೆ. ನಾನೂ ಸಹ ಈ ಚಿತ್ರ ಮಂದಿರದಲ್ಲಿ ಹಲವಾರು ಚಿತ್ರಗಳನ್ನು ನೋಡಿ ಆನಂದಿಸಿದ್ದೇನೆ. ಚಿತ್ರಮಂದಿರಗಳಿಗೆ ಬಂದು ಚಿತ್ರ ನೋಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಲೇ ಇದೆ. ಹೀಗಾಗಿ ಚಿತ್ರಮಂದಿರಗಳನ್ನು ನಡೆಸುವುದು ಮಾಲೀಕರ ಪಾಲಿಗೆ "ಆನೆಯನ್ನು ಸಾಕಿದಂತೆ". ಜನರ ಅಭಿರುಚಿ ಬದಲಾಗುತ್ತಿರುವ ಹಾಗೆ ಚಿತ್ರಮಂದಿರಗಳ ಅವಸಾನ ಪ್ರಾರಂಭವಾಯಿತು. ಒಂದು ಕಾಲದಲ್ಲಿ ನಗರದಲ್ಲಿ ಸುಮಾರು 26ಕ್ಕೂ ಹೆಚ್ಚಿನ ಚಿತ್ರಮಂದಿರಗಳಿದ್ದವು. ಈಗ ಅವುಗಳ ಸಂಖ್ಯೆ 9ಕ್ಕೆ ಇಳಿದಿವೆ. ಮುಂದಿನ ವರ್ಷಗಳಲ್ಲಿ ಇವೂ ಸಹ ಒಂದೊಂದಾಗಿ ಮುಚ್ಚಬಹುದು. ನಗರದ ಪ್ರತಿಷ್ಠಿತ ಚಿತ್ರಮಂದಿರಗಳಾಗಿದ್ದ, ಶಾಂತಲಾ, ಲಕ್ಷ್ಮಿ, ಸರಸ್ವತಿ, ಅಪೇರಾ, ಚಾಮುಂಡೇಶ್ವರಿ, ಉಮಾ, ರತ್ನ, ವಿದ್ಯಾರಣ್ಯ, ಶ್ರೀನಂದ್, ಗೋಕುಲ್, ರಣಜಿತ್, ಶಾಲಿಮಾರ್, ತಿಬ್ಬಾದೇವಿ ಮುಂತಾದ ಚಿತ್ರಮಂದಿರಗಳು ಒಂದರ ಹಿಂದೆ ಮತ್ತೊಂದು ಅನ್ನುವ ಹಾಗೆ ಕಾಲನ ತೆಕ್ಕೆಗೆ ಸೇರಿ ಕಣ್ಮರೆಯಾಗಿವೆ. ಕೋವಿಡ್ ಸಂಕಷ್ಟದಲ್ಲೂ ಅನೇಕ ಚಿತ್ರಮಂದಿರಗಳ ಮಾಲೀಕರು ತಮ್ಮ ನೌಕರರಿಗೆ ಸಂಬಳ ನೀಡಿ ಔದಾರ್ಯತೆ ಮೆರೆದಿದ್ದರು. ಆದರೆ ಪರಿಸ್ಥಿತಿ ವಿಕೋಪಕ್ಕೆ ಹೋಗಿರುವುದರಿಂದ ಅವರು ತಾನೇ ಏನು ಮಾಡಿಯಾರು? ಕಾಲಾಯ ತಸ್ಮೈ ನಮಃ

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಆಯ್ಕೆಯನ್ನು ಅವರಿಗೆ ಬಿಡಿ, ನಿಮ್ಮ ಬೆಂಬಲ ಇರಲಿ

ಮಾನ್ಯರೆ,

ಈಗಾಗಲೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿದು ಫಲಿತಾಂಶ ಹೊರ ಬಿದ್ದಿದ್ದು, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಕೂಡ ಮುಗಿದಿದೆ.

ಈ ಸುಸಂದರ್ಭದಲ್ಲಿ ಪಾಲಕರು, ಪೋಷಕರು ಮಾಡಬೇಕಾದಂತಹ ಪ್ರಮುಖ ಕೆಲಸ ಏನೆಂದರೆ ಪ್ರತಿಷ್ಠೆಗೆ ಬಿದ್ದು ಅಧಿಕ ಹಣ ವ್ಯಯಿಸಿ ಖಾಸಗಿ ಶಾಲಾ ಕಾಲೇಜುಗಳಿಗೆ ಸೇರಿಸಿ ಸಾಲ ಮಾಡಿ ಒದ್ದಾಡುವ ಬದಲು ಉತ್ತಮ ಶಿಕ್ಷಣ ನೀಡುವ ಸರ್ಕಾರಿ ಶಾಲಾ–ಕಾಲೇಜು, ಕಡಿಮೆ ಶುಲ್ಕವಿರುವ ಖಾಸಗಿ ಶಾಲಾ ಕಾಲೇಜು ಕಡೆಗೆ ಗಮನಹರಿಸಿ. ಓದುವ ಮುಂದಿನ ಆಯ್ಕೆಯನ್ನು ಅವರಿಗೆ ಬಿಡಿ. ಆ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಿ ಏಕೆಂದರೆ ಓದು ಅವರ ಆಸಕ್ತಿ–ಇಷ್ಟದಂತೆ ಇರಲಿ. ಹೊರೆ ಮಾಡಬೇಡಿ. ಆನಂತರ ಕೊರಗಬೇಡಿ. ಅವರಿಗೆ ನಿಮ್ಮ ಬೆಂಬಲ ಪ್ರೋತ್ಸಾಹಬೇಕು.

ಮಿತಿ ಮೀರಿದ ಮುದ್ದು ಸಹ ಕಂಟಕವಾಗಬಹುದು. ಸ್ವಾತಂತ್ರ್ಯ ನೀಡಿ, ಸ್ನೇಹಿತರಂತೆ ಇರಿ. ನಿಮ್ಮ ಒತ್ತಡದ ಮಧ್ಯೆಯು ಅವರ ಮೇಲೆ ಕಣ್ಣಿಡಿ. ಆಗಾಗ ಶಾಲೆ–ಕಾಲೇಜು ಕಡೆ ಹೋಗಿ ವಿಚಾರಿಸಿ. ಓದನ್ನು ಹೊರೆ ಮಾಡದೇ ಅವರ ಆಯ್ಕೆ ಇಷ್ಟದಂತೆ ಬಿಟ್ಟರೆ ಮಾತ್ರ ಅವರ ಶೈಕ್ಷಣಿಕ ಪ್ರಗತಿ ಉತ್ತಮವಾಗಬಹುದು.

– ಎ.ಎಸ್. ಗೋವಿಂದೇಗೌಡ, ಅರೇನಹಳ್ಳಿ, ಪಿ.ಪಟ್ಟಣ ತಾ.

ಪಾಲಿಕೆ ಮತ್ತು ಪೊಲೀಸರ ಗಮನಕ್ಕೆ!

ಮಾನ್ಯರೆ,

ಇದು ಮೈಸೂರಿನ ಕುವೆಂಪುನಗರದಲ್ಲಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜು ಸೂರ್ಯಾಸ್ತವಾಗುತ್ತಿದ್ದಂತೆಯೇ ಈ ಕಾಲೇಜು ಆವರಣ ಭೂತ ಬಂಗಲೆಯಾಗಿ ಮಾರ್ಪಡುತ್ತದೆ. ಕಾರಣ ಈ ಕಾಲೇಜಿನ ಆವರಣದಲ್ಲಿ ಒಂದೇ ಒಂದು ವಿದ್ಯುದ್ದೀಪವೂ ಬೆಳಗುವುದಿಲ್ಲ. ಗಾಯದ ಮೇಲೆ ಬರೆ ಎಳೆದಂತೆ ಎಂಬಂತೆ ಈ ಕಾಲೇಜಿನ ಎದುರು ಇರುವ ಬೀದಿ ದೀಪಗಳೂ ಸಹ ಬೆಳಗುತ್ತಿಲ್ಲ.



ಪಾಲಿಕೆಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ನಿದ್ರಾವಸ್ಥೆಯಲ್ಲಿದ್ದಾರೆ. ಹಾಗಾಗಿ ಕತ್ತಲಾಗುತ್ತಿದ್ದಂತೆಯೇ ಈ ಕಾಲೇಜಿನ ಎದುರು ಪುಂಡು–ಪೋಕರಿಗಳು, ಕುಡುಕರು ಮೆರೆಯತೊಡಗುತ್ತಾರೆ. ರಾಜಾರೋಷವಾಗಿ ಮದ್ಯದ ಬಾಟಲಿಗಳನ್ನು ಹಿಡಿದು ಗುಂಡು ಪಾರ್ಟಿ ನಡೆಸುತ್ತಿರುತ್ತಾರೆ. ಹೀಗಾಗಿ ಪ್ರತಿದಿನ ಕಾಲೇಜಿಗೆ ಬರುವ ವಿದ್ಯಾರ್ಥಿಗಳನ್ನು ಈ ಮದ್ಯದ ಬಾಟಲಿಗಳು ಸ್ವಾಗತಿಸುತ್ತವೆ. ಈ ಕಾಲೇಜಿನಲ್ಲಿ ರಾತ್ರಿ ಕಾವಲುಗಾರರೂ ಇಲ್ಲದಿರುವುದರಿಂದ, ಕಾಲೇಜಿನ ಒಳಗೂ ಹೊರಗೂ ವಿದ್ಯುದ್ದೀಪಗಳು ಇಲ್ಲದಿರುವುದರಿಂದ ಹಾಗೂ ಪೊಲೀಸರು ಈ ಭಾಗಕ್ಕೆ ಸುಳಿಯದಿರುವುದರಿಂದ ಪುಂಡು–ಪೋಕರಿಗಳ ಪುಂಡಾಟ ಅಟ್ಟಹಾಸಕ್ಕೆ ಬ್ರೇಕ್ ಇಲ್ಲದಂತಾಗಿದೆ.

ವಿಪರ್ಯಾಸವೆಂದರೆ, ಇದೇ ಕಟ್ಟಡದಲ್ಲಿ ಈ ಹಿಂದೆ ಕುವೆಂಪುನಗರ ಪೊಲೀಸ್ ಠಾಣೆ ಕಾರ್ಯ ನಿರ್ವಹಿಸುತ್ತಿತ್ತು. ಈ ಕೂಡಲೇ ಪಾಲಿಕೆಯು ಎಚ್ಚೆತ್ತು ಈ ಕಾಲೇಜಿನ ಎದುರು ಇರುವ ವಿದ್ಯುದ್ದೀಪಗಳು ಬೆಳಗುವಂತೆ ಮಾಡಬೇಕು. ಕಾಲೇಜಿನ ಕಾವಲುಗಾರರು ಕತ್ತಲಾಗುತ್ತಿದ್ದಂತೆಯೇ ಆವರಣದಲ್ಲಿರುವ ವಿದ್ಯುದ್ದೀಪಗಳನ್ನು ಬೆಳಗಿಸುವುದರ ಜೊತೆಗೆ ಕಾಲೇಜಿನ ಎದುರು ಪುಂಡ–ಪೋಕರಿಗಳು ಜಮಾಯಿಸಿದೊಡನೆ ಪೊಲೀಸರಿಗೆ ಮಾಹಿತಿ ನೀಡಬೇಕು.

ಕತ್ತಲಾದ ನಂತರ ಈ ಕಾಲೇಜಿನ ಎದುರು ಪೊಲೀಸ್ ಗಸ್ತು ವಾಹನವು ಸಂಚರಿಸುವಂತೆ ಪೊಲೀಸ್ ಆಯುಕ್ತರು ಸೂಚನೆ ನೀಡಬೇಕು. ಪಾಲಿಕೆ ಪೊಲೀಸ್ ಹಾಗೂ ಕಾಲೇಜಿನ ಮುಖ್ಯಸ್ಥರು ಸೂಕ್ತ ಕ್ರಮ ಕೈಗೊಂಡು ಆಸುಪಾಸಿನ ನಾಗರಿಕರ ನೆಮ್ಮದಿಯನ್ನು ಕಾಪಾಡಬೇಕಿದೆ.


–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ದೇಶ ಪೋಷಕರ ಶೋಷಣೆ ಸಲ್ಲದು



ನಮ್ಮ ದೇಶದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಡೆಯುವುದು ಜನರು ನೀಡುವ ತೆರಿಗೆ ಹಣದಿಂದ. ಅದರಲ್ಲಿ ಮುಖ್ಯವಾಗಿ ಆದಾಯ ತೆರಿಗೆ, ಮಾರಾಟ ತೆರಿಗೆ, ಮೌಲ್ಯವರ್ಧಿತ ತೆರಿಗೆ, ವೃತ್ತಿ ತೆರಿಗೆ, ಮನರಂಜನಾ ತೆರಿಗೆ, ಅಬಕಾರಿ ಸುಂಕ, ಸಂಪತ್ತಿನ ತೆರಿಗೆ, ಸೇವಾ ತೆರಿಗೆ, ಆಸ್ತಿ ನೋಂದಣಿ ತೆರಿಗೆ ಇತ್ಯಾದಿಗಳು ಸೇರುತ್ತವೆ. ಇವು ನೇರವಾಗಿ ಕಾಣುವ ತೆರಿಗೆಗಳು. ಇದಲ್ಲದೇ ಮತ್ತಷ್ಟು ಪರೋಕ್ಷ ತೆರಿಗೆಗಳು ನಮ್ಮ ದೇಶದಲ್ಲಿವೆ. ಈ ರೀತಿಯ ತೆರಿಗೆ ಸಂಗ್ರಹದಿಂದ ದೇಶ ಹಾಗೂ ರಾಜ್ಯಗಳ ಸರ್ಕಾರಗಳು ನಡೆಯುತ್ತವೆ. ಯಾವುದರ ಮೇಲೆ ತೆರಿಗೆ ಹಾಕಬೇಕು, ಹಾಕಬಹುದು, ಯಾವುದರ ತೆರಿಗೆ ಹೆಚ್ಚಿಸಬೇಕು (ಇಳಿಸುವುದು ದೂರದ ಮಾತು ಬಿಡಿ) ಎಂಬುದು ಪ್ರತಿ ವರ್ಷ ಮಂಡಿಸುವ ಆಯವ್ಯಯ ಪತ್ರಗಳಲ್ಲಿ ಕಂಡುಬರುತ್ತದೆ. ಹಾಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆಯವ್ಯಯ ಪತ್ರಗಳನ್ನು ಮಂಡಿಸುವ ಸಮಯದಲ್ಲಿ ಇಡೀ ದೇಶ/ರಾಜ್ಯದ ಜನರು ಕಾತುರದಿಂದ ಕಾಯುತ್ತಾರೆ. ಆನಂತರ ನೆಪ ಮಾತ್ರಕ್ಕೆ ಸಂಸತ್ತಿನಲ್ಲಿ, ವಿಧಾನ ಸಭೆಗಳಲ್ಲಿ ಅವುಗಳ ಮೇಲೆ ಚರ್ಚೆ ನಡೆದು ಆಯವ್ಯಯ ಅನುಮೋದನೆಯಾಗುತ್ತದೆ. ಆಯವ್ಯಯ ಅನು ಮೋದನೆಯಾದರೆ ರಾಜ್ಯದ/ದೇಶದ ಜನರು ಅದನ್ನು ಪಾಲಿಸಲೇಬೇಕು. ನಿಗದಿಪಡಿಸಿದಷ್ಟು ತೆರಿಗೆಯನ್ನು ಕಟ್ಟಲೇಬೇಕು, ಇಲ್ಲದಿದ್ದಲ್ಲಿ ಅನೇಕ ರೀತಿಯ ದಂಡ ವಸೂಲಿ ಮಾಡಲಾಗುತ್ತದೆ.

ಇದು ನಿಜ. ತೆರಿಗೆ ಇಲ್ಲದಿದ್ದರೆ ದೇಶ ಅಥವಾ ರಾಜ್ಯ ಸರ್ಕಾರಗಳಿಗೆ ತನ್ನದೇ ಆದ ಬೇರೆ ವರಮಾನ ಇರುವುದಿಲ್ಲ. ತೆರಿಗೆಯೇ ಅದರ ಆದಾಯ. ದೇಶದಲ್ಲಿ ಬದುಕಬೇಕಾದರೆ ಜನರು ಸರಕಾರಗಳು ಹೇಳಿದಂತೆ ತೆರಿಗೆ ಪಾವತಿಸಲೇಬೇಕು. ಪಾವತಿಸುವುದಿಲ್ಲ ಎಂದು ಹೇಳಲು ಬರುವುದಿಲ್ಲ. ಪಾವತಿಸದಿದ್ದರೆ ಅದನ್ನು ಬಲವಂತವಾಗಿಯೂ ವಸೂಲು ಮಾಡಲಾಗುತ್ತದೆ. ಇದು ಒಂದು ರೀತಿ ಉಳ್ಳವರಿಂದ ಪಡೆದು ಇಲ್ಲದವರಿಗೆ ಸೌಲಭ್ಯ ಕಲ್ಪಿಸುವ ಪದ್ಧತಿಯಂತೆ ಕಂಡುಬರುತ್ತದೆ.

ತೆರಿಗೆ ಎಂಬುದು ಸರ್ಕಾರದ ಆರ್ಥಿಕ ವ್ಯವಸ್ಥೆಯ ಮುಖ್ಯ ಭಾಗ. ಈ ಹಿಂದೆ ಇದನ್ನು ಕಂದಾಯ ಎಂದು ಕರೆಯಲಾಗುತ್ತಿತ್ತು. ಆದರೆ ಈಗ ಕಂದಾಯ ಎಂದರೆ ಭೂಮಿಯ ಮೇಲಿನ ತೆರಿಗೆ ಎಂಬ ಅರ್ಥ ಪಡೆದುಕೊಂಡಿದೆ. ನಮ್ಮ ಆದಾಯ ಅನುಸರಿಸಿ ತೆರಿಗೆ ಪಾವತಿಸಬೇಕಾದುದು ಒಂದು ರೀತಿಯಾದರೆ, ಮಾರಾಟಗಾರ ಹಾಗೂ ಕೊಳ್ಳುವವನು ಪಾವತಿಸಬೇಕಾದುದನ್ನು ವಾಣಿಜ್ಯ ತೆರಿಗೆ ಎಂದು ಕರೆಯಲಾಗುತ್ತದೆ. ಆದಾಯ ತೆರಿಗೆ ಎಂದರೆ ಸರ್ಕಾರಗಳು ತಮ್ಮ ವ್ಯಾಪ್ತಿಯಲ್ಲಿ ವ್ಯಕ್ತಿಗಳು ಗಳಿಸುವ ಆದಾಯದ ಮೇಲೆ ವಿಧಿಸಲಾಗುವ ತೆರಿಗೆ. ಸರ್ಕಾರಗಳು ನಿಮ್ಮ ಆದಾಯ ಇಷ್ಟಿದ್ದರೆ, ಇಷ್ಟು ತೆರಿಗೆ ಪಾವತಿಸಬೇಕು ಎಂದು ನಿರ್ಧರಿಸುತ್ತವೆ. ಇದನ್ನು ಆ ಭಾಷೆಯಲ್ಲಿ ಸ್ಲ್ಯಾಬ್ ಎಂದು ಕರೆಯಲಾಗುತ್ತದೆ.

ನಮ್ಮ ದೇಶದಲ್ಲಿ ಪ್ರಸ್ತುತ ಜನಸಂಖ್ಯೆ 136 ಕೋಟಿಯಾಗಿದ್ದರೂ, ತಮ್ಮ ಆದಾಯದ ವಿವರ ಸಲ್ಲಿಸುವವರ ಸಂಖ್ಯೆ ಕೇವಲ 8 ಕೋಟಿಯಾಗಿದೆ ಅಂದರೆ ಒಂದು ವರದಿಯ ಪ್ರಕಾರ 2020–21 ನೇ ಸಾಲಿನಲ್ಲಿ ದೇಶದ 8,13,22,263 ಜನರು ತಮ್ಮ ಆದಾಯದ ವಿವರ ದಾಖಲಿಸಿದ್ದಾರೆ. ಇದು ಶೇಕಡಾ 17 ರಷ್ಟು ಎನ್ನಬಹುದು. ಆದರೆ ಇಷ್ಟೂ ಜನರು ಆದಾಯ ತೆರಿಗೆ ಪಾವತಿಸುತ್ತಾರೆ ಎಂದೇನಲ್ಲ. ಈ ಪೈಕಿ ತಮಗೆ ನಿಗದಿತ ಕನಿಷ್ಠ ವರಮಾನಕ್ಕಿಂತ ಕಡಿಮೆ ವರಮಾನವಿದೆ ಎಂದು ಘೋಷಿಸಿಕೊಳ್ಳುವವರು ಜಾಸ್ತಿ ಇದ್ದಾರೆ. ನಿಗದಿತ ಮಿತಿಗಿಂತ ಕಡಿಮೆ ಆದಾಯವಿದ್ದರೆ ಆದಾಯ ತೆರಿಗೆ ಪಾವತಿಸಬೇಕಾಗಿರುವುದಿಲ್ಲ, ಅವರಿಗೆ ವಿನಾಯಿತಿ ಇರುತ್ತದೆ. ಹಾಗಾಗಿ ದೊಡ್ಡ ಮೊತ್ತದ ಆದಾಯ ತೆರಿಗೆ ಪಾವತಿಸುವವರ ಸಂಖ್ಯೆ ಶೇಕಡಾ 7 ಕ್ಕಿಂತ ಕಡಿಮೆ ಇದೆ ಎನ್ನಲಾಗುತ್ತದೆ. ಇಷ್ಟು ಜನರು ನೀಡುವ ತೆರಿಗೆಯಿಂದ ದೇಶ ನಡೆಯಬೇಕು.

ಇದಲ್ಲದೆ ಸರ್ಕಾರದ ಮತ್ತೊಂದು ಪ್ರಮುಖ ಆದಾಯ ಬರುವುದು ಸರಕು ಮತ್ತು ಸೇವಾ ತೆರಿಗೆಯಿಂದ. ಇಲ್ಲಿ ತಯಾರಕ, ಮಾರಾಟಗಾರ ಹಾಗೂ ಖರೀದಿದಾರ ತೆರಿಗೆ ಪಾವತಿಸುತ್ತಾರೆ. ಅದರಲ್ಲಿ ಕಚ್ಚಾ ವಸ್ತು ಸರಬರಾಜುದಾರನೂ ತೆರಿಗೆ ಪಾವತಿಸಬೇಕು. ಇದೊಂದು ರೀತಿಯಲ್ಲಿ ಬಹು ಹಂತದ ತೆರಿಗೆ ಪದ್ಧತಿ. ಈ ತೆರಿಗೆಯಲ್ಲಿ ನೇರ ತೆರಿಗೆ ಹಾಗೂ ಪರೋಕ್ಷ ತೆರಿಗೆ ಎಂಬ ವಿಧಗಳಿವೆ.

ತೆರಿಗೆದಾರನಿಗೆ ತೆರಿಗೆ ಪಾವತಿಸುವ ಕರ್ತವ್ಯ ಮಾತ್ರ ಇದೆ. ಆದರೆ ತಾನು ನೀಡಿದ ಹಣವನ್ನು ವೆಚ್ಚ ಮಾಡುವಾಗ ಸರ್ಕಾರ ಅದನ್ನು ಹೀಗೇ ವೆಚ್ಚ ಮಾಡಬೇಕು ಎಂದು ಹೇಳುವ ಅಧಿಕಾರವಿಲ್ಲ.

> "ತೆರಿಗೆ ಇಲ್ಲದಿದ್ದರೆ ದೇಶ ಅಥವಾ ರಾಜ್ಯ ಸರ್ಕಾರಗಳಿಗೆ ತನ್ನದೇ ಆದ ಬೇರೆ ವರಮಾನ ಇರುವುದಿಲ್ಲ. ತೆರಿಗೆಯೇ ಅದರ ಆದಾಯ. ದೇಶದಲ್ಲಿ ಬದುಕಬೇಕಾದರೆ ಜನರು ಸರಕಾರಗಳು ಹೇಳಿದಂತೆ ತೆರಿಗೆ ಪಾವತಿಸಲೇ ಬೇಕು. ಪಾವತಿಸುವುದಿಲ್ಲ ಎಂದು ಹೇಳಲು ಬರುವುದಿಲ್ಲ. ಪಾವತಿಸದಿದ್ದರೆ ಅದನ್ನು ಬಲವಂತವಾಗಿಯೂ ವಸೂಲು ಮಾಡಲಾಗುತ್ತದೆ. ಇದು ಒಂದು ರೀತಿ ಉಳ್ಳವರಿಂದ ಪಡೆದು ಇಲ್ಲದವರಿಗೆ ಸೌಲಭ್ಯ ಕಲ್ಪಿಸುವ ಪದ್ಧತಿಯಂತೆ ಕಂಡುಬರುತ್ತದೆ.

ಶೇ. 7 ರಷ್ಟು ಜನರು ಮಾತ್ರ ತೆರಿಗೆ ಪಾವತಿಸುತ್ತಾರೆ ಎಂದಾದಾಗ, ಅಷ್ಟು ಜನ ಮಾತ್ರವೇ ಹೆಚ್ಚಿನ ಆದಾಯ ಹೊಂದಿದ್ದಾರೆ ಎಂಬ ಅರ್ಥವೇ? ಎಂಬುದೂ ನಿಗೂಢವಾದ ತಾರ್ಕಿಕ ಸಂಗತಿ. ಆದರೆ ಸಾಮಾನ್ಯವಾಗಿ ಜನರು ಯೋಚಿಸುವುದೆಂದರೆ ತೆರಿಗೆ ಪಾವತಿದಾರನು ನೀಡಿದ ಹಣವನ್ನು ಖರ್ಚು ಮಾಡುವಾಗ ಸರ್ಕಾರಗಳು ತೆರಿಗೆದಾರನನ್ನು ಆ ಬಗ್ಗೆ ಏಕೆ ಕೇಳುವುದಿಲ್ಲ? ಎಂಬುದಾಗಿದೆ. ನಿಜ, ಎಲ್ಲವನ್ನೂ ಜನರಿಗೆ ಹೇಳಿ ವೆಚ್ಚ ಮಾಡಲಾಗುವುದಿಲ್ಲ. ಆದರೆ ಜನರು ತಾನು ತೆರಿಗೆ ಪಾವತಿಸುವುದು ತನ್ನ ದೇಶದ ಉದ್ಧಾರಕ್ಕೆ. ಅದು ಸರಿಯಾದ ದಿಸೆಯಲ್ಲಿ ವೆಚ್ಚವಾಗಬೇಕು ಎಂದು ಬಯಸುವುದು ತಪ್ಪಲ್ಲ.

ಯಾವುದೇ ವ್ಯಕ್ತಿಯು ತನ್ನ ಆದಾಯವನ್ನು ಎರಡು ರೀತಿಯಾಗಿ ವಿಭಜಿಸಿಕೊಳ್ಳುತ್ತಾನೆ. ಒಂದು ಮಾಡಲೇಬೇಕಾದ ವೆಚ್ಚಗಳು, ಮತ್ತೊಂದು ಉಳಿತಾಯ. ಇಲ್ಲಿ ಉಳಿತಾಯ ಎನ್ನುವುದು ಮುಂದೆ ಜೀವನದಲ್ಲಿ ಬರಬಹುದಾದ ತೊಂದರೆಗಳ ಸಮಯದಲ್ಲಿ ತಾನು ಹಾಗೂ ತನ್ನನ್ನು ನಂಬಿದವರಿಗೆ ಯಾವುದೇ ಅಡ್ಡಿಯಿಲ್ಲದೆ ಜೀವನ ಮಾಡುವ ವಿಧಾನ. ಅದು ಆರೋಗ್ಯದ ಸಮಸ್ಯೆಯೂ ಇರಬಹುದು. ಮತ್ತೊಂದು ರೀತಿಯ ಯೋಜನೆ ಎಂದರೆ ತನ್ನ ಆದಾಯವನ್ನು ಹೆಚ್ಚಿಸುವಂತಹುದಕ್ಕೆ ಹಣ ತೊಡಗಿಸುವುದು. ಅಂದರೆ ಹೆಚ್ಚುವರಿಯಾಗಿ ಮನೆ ಕಟ್ಟಿಸಿ ಬಾಡಿಗೆಗೆ ನೀಡುವುದು, ಉಳಿತಾಯದ ಹಣವನ್ನು ಬ್ಯಾಂಕು, ಶೇರುಗಳಲ್ಲಿ ವಿನಿಯೋಗಿಸಿ ಹೆಚ್ಚಿನ ವರಮಾನ ಗಳಿಸುವುದು ಇತ್ಯಾದಿ ಯೋಚನೆ ಮಾಡುತ್ತಾನೆ. ಇದೆಲ್ಲಾ ಭವಿಷ್ಯದ ದೃಷ್ಟಿಯಿಂದ. ವೈಯಕ್ತಿಕವಾಗಿ ಒಂದು ಹಂತದ ವಯೋಮಾನ ತಲುಪಿದಾಗ, ತಾನು ದುಡಿಯಲು ಅಶಕ್ತನಾಗುವುದರಿಂದ ತನ್ನ ಹಾಗೂ ತನ್ನನ್ನು ನಂಬಿದವರ ಪೋಷಣೆಗಾಗಿ ಒಂದು ಸ್ಥಿರವಾದ ಆದಾಯ ಗಳಿಸುವ ಯೋಜನೆ. ಸಾಮಾನ್ಯವಾಗಿ ಈ ರೀತಿ ಯೋಚನೆ ಮಾಡಲಾಗುತ್ತದೆ. ಅಂದರೆ ತನ್ನ ಆದಾಯದ ಒಂದು ಭಾಗವನ್ನು ಅವಶ್ಯಕ ವೆಚ್ಚಗಳಿಗೆ, ಮತ್ತೊಂದು ಮುಂದಿನ ಭವಿಷ್ಯಕ್ಕೆ ಹಾಗೂ ಮತ್ತೊಂದು ಭಾಗ ಆದಾಯ ಹೆಚ್ಚಿಸಿಕೊಳ್ಳುವುದಕ್ಕಾಗಿ. ಈ ನಿಯಮ ಸರ್ಕಾರಗಳಿಗೂ ಅನ್ವಯವಾಗಬೇಕು ಅಲ್ಲವೇ? ಸರ್ಕಾರ ಬರುವ ಹಣವನ್ನು ಕೇವಲ ಖರ್ಚು ಮಾಡಲು ಮಾತ್ರ ಉಪಯೋಗಿಸಬಾರದು. ದೇಶಕ್ಕೆ ಮುಂದೆ ಏನಾದರೂ ಆಪಾಯವಾದರೆ (ಯುದ್ಧ, ಕೊರೋನಾದಂತಹ ಸಾಂಕ್ರಾಮಿಕ ಖಾಯಿಲೆಗಳು ಇತ್ಯಾದಿ..) ಅದನ್ನು ಬಗೆಹರಿಸಲು ಒಂದಷ್ಟು ನಿಗದಿತ ಮೊತ್ತ ಹಾಗೂ ತನ್ನ ಆದಾಯ ಹೆಚ್ಚು ಮಾಡಿಕೊಳ್ಳಲು ಬೇರೆಡೆ ಹೂಡಿಕೆ ಮಾಡುವುದು, ಅಂದರೆ ನೀರಾವರಿ ಯೋಜನೆಗಳು, ಹೆದ್ದಾರಿಗಳ ನಿರ್ಮಾಣ, (ಇತ್ತೀಚೆಗೆ ಈ ಬಗೆಗೆ ಮಾಡುವ ವೆಚ್ಚವನ್ನೂ ಗ್ರಾಹಕರಿಂದ ಟೋಲ್ ರೂಪದಲ್ಲಿ ಸಂಗ್ರಹಿಸಲಾಗುತ್ತಿದೆ), ಸ್ವಂತ ಕಟ್ಟಡಗಳ ನಿರ್ಮಾಣ ಇತ್ಯಾದಿ., ಇವುಗಳಿಂದ ಆದಾಯ ಬರುವಂತೆ ಮಾಡುವುದು. ಇದಕ್ಕಾಗಿ ಒಂದಷ್ಟು ಹಣವನ್ನು ವೆಚ್ಚ ಮಾಡಿ ವರ್ಷದಿಂದ ವರ್ಷಕ್ಕೆ ಆದಾಯ ವೃದ್ಧಿಸಿಕೊಳ್ಳುವುದು ಮಾಡಬೇಕು.

ನಮ್ಮ ಪುರಸಭೆ, ನಗರಪಾಲಿಕೆಗಳಲ್ಲಿ ಈ ಹಿಂದೆ ಈ ರೀತಿ ಹಣವನ್ನು ಕಟ್ಟಡ ಕಟ್ಟಲು ಉಪಯೋಗಿಸಲಾಗಿದೆ. ಅದನ್ನು ಬಾಡಿಗೆಗೆ ನೀಡಿ ತನ್ನ ಆದಾಯವನ್ನು ವೃದ್ಧಿಸಿಕೊಳ್ಳುವ ಯೋಜನೆ ಇದಾಗಿದೆ. ಆದರೆ ಈ ರೀತಿಯಾಗಿ ಕಟ್ಟಿದ ಕಟ್ಟಡದ ಬಗ್ಗೆ ಸರಿಯಾದ ದಾಖಲೆ ಇಟ್ಟುಕೊಳ್ಳದ ಪರಿಣಾಮ ಈಗಿನ ಆಡಳಿತಕ್ಕೆ ತಮ್ಮ ಆಸ್ತಿ ಯಾವುದು? ಎಂದೇ ತಿಳಿದಿಲ್ಲ. ಅವುಗಳಲ್ಲಿ ಬಹುತೇಕ ಕಟ್ಟಡಗಳು ಖಾಸಗಿಯವರ ಆಸ್ತಿಯಾಗಿಬಿಟ್ಟಿವೆ. ಅಲ್ಲದೆ ಒಬ್ಬ ಖಾಸಗಿ ವ್ಯಕ್ತಿ ತನ್ನ ಆಸ್ತಿಯನ್ನು ಬಾಡಿಗೆಗೆ ನೀಡಿದರೆ ಅದರ ಬಾಡಿಗೆಯನ್ನು ಪ್ರತಿ ವರ್ಷ ಶೇ. 5 ರಷ್ಟಾದರೂ ಹೆಚ್ಚಿಸಿ ತನ್ನ ಆದಾಯವನ್ನು ಆಯಾ ಕಾಲದ ವೆಚ್ಚಕ್ಕೆ, ನಿರ್ವಹಣೆಗೆ ತಕ್ಕಂತೆ ವೃದ್ಧಿಸಿಕೊಳ್ಳಲು ಬಯಸುತ್ತಾನೆ. ಆದರೆ ಸರ್ಕಾರದ ಆಸ್ತಿಯ ಬಗ್ಗೆ ಈ ರೀತಿಯ ಕ್ರಮವೇ ಆಗುವುದಿಲ್ಲ. ಎಷ್ಟೋ ವರ್ಷಗಳ ಹಿಂದೆ ನಿಗಧಿ ಪಡಿಸಿದ್ದ ಬಾಡಿಗೆಯೇ ಮುಂದುವರೆದಿರುತ್ತದೆ. (ಅದು ದಶಕಗಳ ಕಾಲವಾದರೂ ಆಗಿರಬಹುದು) ಎಷ್ಟೋ ಪ್ರಕರಣಗಳಲ್ಲಿ ವರ್ಷಗಟ್ಟಲೆ ಬಾಡಿಗೆಯೇ ಪಾವತಿಯಾಗುವುದಿಲ್ಲ. ಬಾಡಿಗೆ ಹೆಚ್ಚು ಮಾಡಬೇಕೆಂದಾಗ, ಬಾಡಿಗೆದಾರರು ಅದರ ವಿರುದ್ಧ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ತಡೆಯಾಜ್ಞೆ ಪಡೆಯುತ್ತಾರೆ. ತಡೆಯಾಜ್ಞೆ ಹತ್ತಾರು ವರ್ಷ ಮುಂದುವರೆದಿರುತ್ತದೆ. ಅದು ಇತ್ಯರ್ಥವಾಗುವವರೆಗೆ ಬಾಡಿಗೆ ಬರುವುದಿಲ್ಲ. ಆದರೆ ಬಾಡಿಗೆ ವಸೂಲಿಗಾಗಿ ನೇಮಿಸುವ ಸಿಬ್ಬಂದಿಗೆ ನಿಯಮಿತವಾಗಿ ಸಂಬಳ ಪಾವತಿಸಬೇಕಾಗುತ್ತದೆ. ಅದೂ ವರ್ಷದಿಂದ ವರ್ಷಕ್ಕೆ ಹೆಚ್ಚಳವೂ ಆಗಬೇಕಾಗುತ್ತದೆ. ಇದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾದಂತಾಗುತ್ತದೆ. ಇಲ್ಲಿ ಆದಾಯಕ್ಕಿಂತ ವೆಚ್ಚವೇ ಅಧಿಕವಾಗಿ, ಕೊನೆಗೆ ಇವನ್ನು ಏಕೆ ಖಾಸಗಿಯವರಿಗೆ ವಹಿಸಬಾರದು? ಎಂಬ ಹೊಣೆಗೇಡಿ ಯೋಚನೆ ಮಾಡುವಂತಾಗುತ್ತದೆ. ಸರ್ಕಾರದ ಹಣ ವೆಚ್ಚ ಮಾಡುವಾಗ ಆರ್ಥಿಕ ಸಂಹಿತೆಯಲ್ಲಿ ಹೇಳಿರುವಂತೆ, 'ತಾನು ತನ್ನ ಸ್ವಂತ ಹಣವನ್ನು ವೆಚ್ಚ ಮಾಡುವಾಗ ಯಾವ ವಿವೇಚನೆಯಿಂದ ಉಪಯೋಗಿಸಿ ವೆಚ್ಚ ಮಾಡುವನೋ ಅದೇ ರೀತಿ ಸರ್ಕಾರದ ಹಣ ವೆಚ್ಚ ಮಾಡುವಾಗಲೂ ವಿವೇಚನೆ ಉಪಯೋಗಿಸಬೇಕು' ಎಂದು ಹೇಳಲಾಗಿದೆ. ಆದರೆ ಇದು ಪುಸ್ತಕಕ್ಕೆ ಸೀಮಿತವಾಗಿದೆ.


ಸರ್ಕಾರಗಳು ಹೀಗೆ ಸಂಗ್ರಹಿಸುವ ತೆರಿಗೆ ಹಣವನ್ನು ವಿವೇಚನೆಯಿಂದ ಖರ್ಚು ಮಾಡಬೇಕಾಗುತ್ತದೆ. ಏಕೆಂದರೆ ಅದು ಸಾರ್ವಜನಿಕರು ನೀಡಿರುವ ಹಣ, ಅದು ಸದುಪಯೋಗವಾಗಬೇಕು ಎಂಬುದು ಅಪೇಕ್ಷೆ. ಆದರೆ ಈ ಹಣವನ್ನು ಇಂತಹ ಸಮೂಹದ ಮತದಾರರ ಮೇಲೆ ಹೂಡಿದರೆ, ಅಂದರೆ ಅವರಿಗೆ ಸಹಾಯ ಮಾಡಿದರೆ, ಮುಂದಿನ ಚುನಾವಣೆಯಲ್ಲಿ ನಮಗೆ ಹೆಚ್ಚು ಮತ ಬರುತ್ತದೆ ಎಂದು ಯೋಚಿಸುತ್ತಿರುವುದು ದುರ್ದೈವದ ಸಂಗತಿ ಎನಿಸುತ್ತದೆ. ದೇಶದ ಹಣ ಮತದಾರನ ಓಲೈಕೆಗೆ ಬಳಕೆಯಾಗುವುದು ಎಷ್ಟು ಸರಿ? ಆಲೋಚನೆ ಮಾಡಬೇಕಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಆಯವ್ಯಯ ಎಂದರೆ ಒಂದಷ್ಟು ಜನಪ್ರಿಯ ಯೋಜನೆಗಳನ್ನು ಘೋಷಿಸುವುದೇ ಆಗಿದೆ. ಇದರಿಂದ ತೆರಿಗೆದಾರನಿಗೆ ಏನು ಪ್ರಯೋಜನವಾಗುತ್ತದೆ? ಎಂದು ಯೋಚಿಸುವುದಿಲ್ಲ. ನಮ್ಮಲ್ಲಿ ಇರುವ ಈ ಸಬ್ಸಿಡಿ (ಧನ ಸಹಾಯ) ಯೋಜನೆಯಿಂದ ಹೆಚ್ಚು ಹಣ ಪೋಲಾಗುತ್ತದೆ. (ಇದರಿಂದಾಗುವ ದುಷ್ಪರಿಣಾಮಕ್ಕೆ ಶ್ರೀಲಂಕಾ ಎದುರಿಸುತ್ತಿರುವ ದಾರುಣ ಸ್ಥಿತಿ ಸಾಕ್ಷಿಯಾಗಿದೆ) ಸರ್ಕಾರ ನೀಡುವ ಉಚಿತವಾದ ಯೋಜನೆ ಎಂದಾದಾಗ ಅದು ಕಡುಬಡವರಿಗೆ ಸಲ್ಲಬೇಕು. ಆದರೆ ಇತ್ತೀಚಿನ ವರದಿಗಳನ್ನು ನೋಡಿದಾಗ ಅದು ಉಳ್ಳವರ ಪಾಲಾಗುತ್ತಿದೆ. ನಮ್ಮಲ್ಲಿ ಈ ಬಿಪಿಎಲ್ ಪದ್ಧತಿ ಇಲ್ಲದವರಿಗಿಂತ ಉಳ್ಳವರಿಗೇ ಅನುಕೂಲ ಕಲ್ಪಿಸುತ್ತಿದೆ. (ಉದಾಹರಣೆಗೆ ಆಹಾರ ಪಡಿತರ ಕಾರ್ಡುಗಳು. ಇವು ಅರ್ಧಕ್ಕಿಂತ ಹೆಚ್ಚಿಗೆ ಉಳ್ಳವರ ಪಾಲಾಗಿದೆ. ಅದನ್ನು ಪರಿಶೀಲಿಸುವ ಕೆಲಸ ಆಗುವುದಿಲ್ಲ!!) ಅಂದರೆ ತೆರಿಗೆದಾರ ನೀಡುವ ಹಣ ಪೋಲಾದಂತೆ ಅಲ್ಲವೇ? ಅದೇ ರೀತಿ ನೂರಾರು ಯೋಜನೆಗಳು. ಸರ್ಕಾರಗಳು ಕೊಡಮಾಡುವ ಸಾರ್ವಜನಿಕ ಪಿಂಚಣಿ ಯೋಜನೆಯ ಕಥೆಯೂ ಇದೇ ಆಗಿದೆ. ಅದೂ ಉಳ್ಳವರ ಪಾಲಾಗುತ್ತಿದೆ. ಹೀಗೆ ಮಾಡಲು ರಾಜಕಾರಿಣಿಗಳೇ ಪ್ರೋತ್ಸಾಹಿಸುತ್ತಾರೆ.

ಇವೆಲ್ಲಾ ತೆರಿಗೆದಾರನ ಶೋಷಣೆ ಎನಿಸುತ್ತದೆ. ಅವನು ಕೇವಲ ದುಡಿದು ತೆರಿಗೆ ಕಟ್ಟಬೇಕು, ಅವನಿಗೆ ಬೇರಾವ ಮಾರ್ಗವೂ ಇಲ್ಲ. ಕೊನೇ ಪಕ್ಷ ಸರ್ಕಾರಗಳು ತಾವು ಈ ರೀತಿ ಹಣ ವೆಚ್ಚ ಮಾಡಲು ಹೋಗುತ್ತಿದ್ದೇವೆ, ಇದಕ್ಕೆ ದೇಶದ (ಅಂದರೆ ತೆರಿಗೆದಾರನ) ಒಪ್ಪಿಗೆ ಪಡೆಯಬೇಕು ಎಂಬ ಕನಿಷ್ಠ ಸೌಜನ್ಯವನ್ನು ತೋರಿಸದಿರುವುದು ಸರಿಯಾದ ನಡೆ ಎನಿಸುವುದಿಲ್ಲ. ಒಟ್ಟಿನಲ್ಲಿ ದೇಶಪೋಷಕನ ಶೋಷಣೆ ನಡೆಯುತ್ತಿದೆ.

ಚುಕು ಬುಕು ರೈಲು ಶಾಲೆ...





ಮೊಟ್ಟ ಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲೇ ಇದೊಂದು ವಿನೂತನ ಪ್ರಯತ್ನ. ಮೈಸೂರಲ್ಲಿ ರೈಲು ಬೋಗಿಯ ಶಾಲೆ ಆರಂಭವಾಗಿದೆ. ಮೈಸೂರು ಮಹಾರಾಜರ ಕಾಲದಲ್ಲಿ ರೈಲ್ವೆ ಕಾರ್ಯಾಗಾರದಲ್ಲಿ ಕೆಲಸ ಮಾಡುವ ಕಾಲೋನಿ ಮಕ್ಕಳೂ ಸೇರಿದಂತೆ ಅಕ್ಕ–ಪಕ್ಕದ ಹಳ್ಳಿಗಳಿಂದ ಬರುವ ಮಕ್ಕಳಿಗೋಸ್ಕರ ನೈರುತ್ಯ ರೈಲ್ವೆ ವಿಭಾಗದ ಅಶೋಕಪುರಂ ಕಾರ್ಯಾಗಾರದ ಕಾಲೋನಿ ಆವರಣದಲ್ಲಿ ಸ್ಥಾಪನೆಯಾಗಿದ್ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತೀವ್ರ ಶಿಥಿಲಾವಸ್ಥೆಯಲ್ಲಿತ್ತು. ಕಾರಣ, ಅಪಾಯ ಸಂಭವಿಸುವ ಮುಂಚೆ ಎಚ್ಚೆತ್ತ ಅಧಿಕಾರಿಗಳು ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿದ್ದಾರೆ.

ಶಾಲಾ ಮಕ್ಕಳಿಗೆ ತೊಂದರೆಯಾಗುವುದನ್ನು ಗಮನಿಸಿ, ಕಾರ್ಯೋನ್ಮುಖರಾದ ರೈಲ್ವೆ ಇಲಾಖೆಯ ಅಧಿಕಾರಿಗಳು ಒಂದು ಹೊಸ ಪ್ಲಾನ್ ಓಡಿಸಿ, ಕಟ್ಟಡ ನಿರ್ಮಾಣ ಮಾಡುವುದರ ಬದಲಾಗಿ ಗುಜರಿ ಸೇರಬೇಕಾಗಿದ್ದ ರೈಲ್ವೆ ಹಳೇ ಬೋಗಿಗಳನ್ನು ಕ್ರೇನ್ ಮೂಲಕ ಶಾಲೆಯ ಆವರಣಕ್ಕೆ ತಂದು, ತುಕ್ಕು ರಹಿತ ಬಣ್ಣ ಬಳಿದು, ವಿನೂತನ ಶಾಲೆಯನ್ನೇ ನಿರ್ಮಿಸಿದ್ದಾರೆ. ಮಕ್ಕಳನ್ನು ಆಕರ್ಷಿಸಲು ಹಾಗೂ ಪೋಷಕರ ಮತ್ತು ಸಾರ್ವಜನಿಕರ ಗಮನ ಸೆಳೆಯಲು ರೈಲ್ವೆ ಬೋಗಿಯ ಮೇಲೆ ಕನ್ನಡದ ವರ್ಣಮಾಲೆ, ಇಂಗ್ಲೀಷ್ ಪದಗಳು, ಭಾರತದ ಭೂಪಟ, ರಾಷ್ಟ್ರಗೀತೆ, ನಾಡ ಗೀತೆ, ವಿಜ್ಞಾನ ಮಾಹಿತಿ, ಪ್ರಾಣಿ–ಪಕ್ಷಿಗಳ ಚಿತ್ರಗಳು ಇನ್ನೂ ಮುಂತಾದ ಬರಹ ಚಿತ್ರಗಳು ವಿದ್ಯಾರ್ಥಿಗಳ ಗಮನ ಸೆಳೆಯಲು ರೈಲಿನ ಬೋಗಿಯ ಒಳಗೆ ಮತ್ತು ಹೊರಗೆ ಹೊಸ ವಿನ್ಯಾಸದಲ್ಲಿ ಈ ಚಿತ್ರ ಸಮೇತ ಮಾಹಿತಿಗಳನ್ನು ಬಿಡಿಸಲಾಗಿದೆ.



ಇದುವರೆಗೆ ಕಟ್ಟಡಗಳ ಒಳಗೆ ಕುಳಿತು ಪಾಠ ಕೇಳುತ್ತಿದ್ದ ಮಕ್ಕಳಿಗೆ ಹೊಸ ಪ್ರಪಂಚಕ್ಕೆ ಬಂದಿರುವಂತೆ ಹಾಗೂ ರೋಚಕ ಅನುಭವ ನೀಡುವುದರ ಜೊತೆಗೆ ದಿನ ನಿತ್ಯ ರೈಲ್ವೆ ಬೋಗಿಯಲ್ಲಿ ಪ್ರಯಾಣಿಸುತ್ತಿರುವ ಅನುಭವವಾಗುತ್ತಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಬಿಇಓ ರಾಮಾರಾಧ್ಯರು ತಿಳಿಸಿದ್ದಾರೆ.

ಪ್ರಯಾಣಿಕರು ಕೂರುತ್ತಿದ್ದ ಸೀಟ್‌ಗಳನ್ನು ತೆಗೆದು, ಮಕ್ಕಳಿಗೆ ಆಧುನಿಕ ಪೀಠೋಪಕರಣಗಳ ಅಳವಡಿಸಲಾಗಿದೆ. ಒಂದು ಬೋಗಿಯಲ್ಲಿ 30 ಮಕ್ಕಳು ಪಾಠ ಕೇಳುವ ವ್ಯವಸ್ಥೆ ಮಾಡಲಾಗಿದೆ. 4 ಜನ ಉಪಾಧ್ಯಾಯರಿದ್ದು, ಎರಡು ಬೋಗಿಗಳಲ್ಲಿ ಒಂದರಿಂದ 7ನೇ ತರಗತಿಗಳಿವೆ. ಅದರಲ್ಲಿ ಹೆಣ್ಣು ಮಕ್ಕಳು 43 ಹಾಗೂ ಗಂಡು ಮಕ್ಕಳು 46 ಸೇರಿ ಒಟ್ಟು 89 ವಿದ್ಯಾರ್ಥಿಗಳು ಪಾಠ ಪ್ರವಚನ ಕೇಳುತ್ತಿದ್ದಾರೆ ಎಂದು ಶಾಲೆಯ ಮುಖ್ಯೋಪಾಧ್ಯಾಯಿನಿ ಎಸ್.ಜಯಲಕ್ಷ್ಮಿ ಸಂತಸ ವ್ಯಕ್ತಪಡಿಸುತ್ತಾರೆ.

ಈ ಬೋಗಿಗಳಲ್ಲಿ ಉಚಿತವಾಗಿ ಫ್ಯಾನ್, ವಿದ್ಯುತ್ ದೀಪಗಳ ಮೂಲಕ ಹೊಸ ಮಾದರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ನಿರ್ಮಿಸಿದ್ದಾರೆ. ಫ್ಯಾನ್ ಬಳಕೆಗೆ ವಿದ್ಯುತ್ ಹಾಗೂ ಚಳಿ, ಗಾಳಿ, ಮಳೆಯನ್ನು ತಡೆಯಲು ಭದ್ರವಾದ ಕಿಟಕಿ–ಬಾಗಿಲುಗಳನ್ನು ಅಳವಡಿಸಲಾಗಿದೆ. ಮಕ್ಕಳು ಕುಳಿತು ಪಾಠ ಕಲಿಯಲು ಸುಯೋಜಿತವಾದ ಡೆಸ್ಕ್, ಬ್ಲಾಕ್ ಬೋರ್ಡ್, ಸ್ಮಾರ್ಟ್‌ಬೋರ್ಡ್ ಹಾಗೂ ಪುಸ್ತಕಗಳನ್ನು ಶೇಖರಿಸಿಡಲು ಬೀರುಗಳನ್ನು ರೈಲ್ವೆ ಬೋಗಿಯ ತಗಡುಗಳನ್ನೇ ಬಳಸಿ ಸಂಪೂರ್ಣ ನವೀಕರಿಸಿ, ಆಕರ್ಷಕವಾದ ವರ್ಣಾಲಂಕಾರ ಮಾಡಲಾಗಿದೆ.

ಶಾಲೆಯ ಶಿಕ್ಷಕರಿಗೆ ವಿಶ್ರಮಿಸಲು ಪ್ರತ್ಯೇಕ ಕೊಠಡಿ ಮಾಡಲಾಗಿದೆ. ಮಕ್ಕಳಿಗೆ ಮೂತ್ರ ವಿಸರ್ಜನೆಗೆ ರೈಲ್ವೆ ಬೋಗಿಯ ಹೊರಗೆ ಹೆಣ್ಣು ಮಕ್ಕಳು, ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಲಾಗಿದೆ. ಸ್ವಚ್ಛತೆಗಾಗಿ ನೀರಿನ ಟ್ಯಾಂಕ್ ಅಳವಡಿಸಿದ್ದು, ಕುಡಿಯುವ ನೀರಿನ ವ್ಯವಸ್ಥೆ ಕೂಡ ಮಾಡಲಾಗಿದೆ ಎಂದು ರೈಲ್ವೆ ಅಧಿಕಾರಿ ಮಾಯಗಣ್ಣನವರು ತಿಳಿಸಿದ್ದಾರೆ.

ಎರಡು ವರ್ಷಗಳ ಹಿಂದೆಯೇ ಈ ನೂತನ ಶಾಲೆ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಕೊರೊನಾ ಹಾವಳಿಯಿಂದ ಆರಂಭವಾಗಿರಲಿಲ್ಲ. ಈಗ, ಮೇ 16ರಿಂದ ಇಲ್ಲಿ ಶಾಲೆ ಆರಂಭವಾಗಿದೆ. ಇದಕ್ಕಿಂತ ಮೊದಲು ಈ ಹೊಸ ಪ್ರಯತ್ನವನ್ನು ಕಾಸರಗೋಡಿನ ಸರ್ಕಾರಿ ಶಾಲೆಯಲ್ಲಿ ಮಾಡಲಾಗಿದೆ. ಆದರೆ ಅದು ನೈಜವಾಗಿಲ್ಲ. ಗೋಡೆ ಬರಹವಾಗಿ ರೈಲು ಬೋಗಿಯ ರೂಪದಲ್ಲಿ ಪ್ರಚಲಿತವಾಗಿದೆ. ಗೋಡೆ ಬರಹಕ್ಕಿಂತ ಒಂದು ಕೈ ಮೇಲಾಗಿ ಮೈಸೂರಿನ ರೈಲ್ವೆ ಕಾರ್ಯಾಗಾರ ಕಾಲೋನಿಯಲ್ಲಿ ರೈಲ್ವೆ ಬೋಗಿ ಗಳನ್ನೆ ಶಾಲೆ ಕೊಠಡಿಯಾಗಿ ಮಾರ್ಪಡಿಸಿದ್ದಾರೆ.



ಇನ್ನು ಮುಂದಾದರೂ ಕರ್ನಾಟಕ ಸರಕಾರ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ, ರೈಲ್ವೇ ಇಲಾಖೆ ವತಿಯಿಂದ ಪ್ರತಿ ಜಿಲ್ಲೆ, ಊರು, ಹಳ್ಳಿಗಳಲ್ಲಿ ದುಸ್ಥಿತಿಯಲ್ಲಿರುವ ಶಾಲಾ ಕಟ್ಟಡಗಳ ಬದಲಾಗಿ ಹೀಗೆ ಹಳೆಯ ರೈಲ್ವೆ ಬೋಗಿಗಳಿಂದ ಶಾಲೆಗಳನ್ನು ನಿರ್ಮಿಸಿ ಮಕ್ಕಳನ್ನು ಆಕರ್ಷಣೆ ಮಾಡಿ ಹಾಜರಾತಿಯ ಸಂಖ್ಯೆಯನ್ನು ಹೆಚ್ಚು ಮಾಡಬಹುದು ಎಂದು ರೈಲ್ವೆ ಅಧಿಕಾರಿಗಳು ಸಹ ಅಭಿಪ್ರಾಯ ಪಡುತ್ತಾರೆ. ಸದ್ಯ ಮೈಸೂರಿನ ರೈಲ್ವೆ ಕಾರ್ಯಾಗಾರ ಕಾಲೋನಿ ಆವರಣದಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಚುಕು ಬುಕು ರೈಲು ಬೋಗಿಯಲ್ಲಿ ಕುಳಿತು ಖುಷಿಯಿಂದಲೇ ಮಕ್ಕಳು ಪಾಠ ಕೇಳುತ್ತಿದ್ದಾರೆ.

–ಎಂ.ಆರ್.ಮಂಜುನಾಥ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹಾಸನ ಜಿಲ್ಲೆಯಲ್ಲಿ ವರದಕ್ಷಿಣೆ ಕಿರುಕುಳಕ್ಕೆ ಇಬ್ಬರು ಮಹಿಳೆಯರು ಬಲಿ

ಹಾಸನ, ಮೇ 23– ಪ್ರತ್ಯೇಕ ಪ್ರಕರಣಗಳಲ್ಲಿ ಹಾಸನ ಜಿಲ್ಲೆಯಲ್ಲಿ ವರದಕ್ಷಿಣೆ ಕಿರುಕುಳಕ್ಕೆ ಇಬ್ಬರು ಗೃಹಿಣಿಯರು ಬಲಿಯಾಗಿರುವ ಬಗ್ಗೆ ವರದಿಯಾಗಿದೆ. ಹಾಸನದ ವಿದ್ಯಾನಗರದಲ್ಲಿ ಅಕ್ಷಯ್ ಎಂಬುವರ ಪತ್ನಿ ರಂಜಿತಾ(31) ಮೃತದೇಹ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಈಕೆಯನ್ನು ಪತಿ, ಆತನ ತಂದೆ ಮತ್ತು ತಾಯಿ ವರದಕ್ಷಿಣೆ ಕಿರುಕುಳ ನೀಡಿ ಹತ್ಯೆ ಮಾಡಿದ್ದಾರೆ ಎಂದು ರಂಜಿತಾ ಪೋಷಕರು ಆರೋಪಿಸಿದ್ದಾರೆ.



ಅಕ್ಷಯ್–ರಂಜಿತಾ ದಂಪತಿ

ರಂಜಿತಾ ಮೃತಪಟ್ಟಿರುವ ವಿಷಯ ತಿಳಿಯುತ್ತಿದ್ದಂತೆಯೇ ಆಕೆಯ ಪೋಷಕರು ಮತ್ತು ಸಂಬಂಧಿಕರು ಅಕ್ಷಯ್ ಮನೆಯ ಕಿಟಕಿ ಗಾಜುಗಳನ್ನು ಒಡೆದು ಹಾಕಿದ್ದಾರೆ. ಅಲ್ಲದೇ, ರಂಜಿತಾ ಪತಿ ಅಕ್ಷಯ್, ಆತನ ತಂದೆ ಅಶೋಕ್ ಮತ್ತು ತಾಯಿಯ ಮೇಲೆ ಹಲ್ಲೆ ನಡೆಸಿದ್ದಾರೆ. ಅದೇ ವೇಳೆ ಅಕ್ಷಯ್‌ನ ಸಂಬಂಧಿಕರೂ ಕೂಡ ಸ್ಥಳಕ್ಕೆ ಆಗಮಿಸಿದ್ದು, ಅಕ್ಷಯ್ ಮತ್ತು ಮೃತ ರಂಜಿತಾ ಸಂಬಂಧಿಕರ ನಡುವೆ ಮಾರಾಮಾರಿ ನಡೆದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹಾಸನ ಬಡಾವಣೆ ಠಾಣೆ ಪೊಲೀಸರು ಹರಸಾಹಸ ಪಟ್ಟು ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ.

ವಿವರ: ಹೊಳೆನರಸೀಪುರ ತಾಲೂಕು ವಡುವಲಹಿಪ್ಪೆ ಗ್ರಾಮದ ರಂಜಿತಾ ಕಳೆದ 10 ವರ್ಷಗಳ ಹಿಂದೆ ಹಾಸನದ ವಿದ್ಯಾನಗರದ ಅಕ್ಷಯ್ ಜೊತೆ ವಿವಾಹವಾಗಿದ್ದರು. ಆರಂಭದಲ್ಲಿ ದಂಪತಿ ಅನ್ಯೋನ್ಯವಾಗಿದ್ದರಾದರೂ, ಮದುವೆಯಾಗಿ 10 ವರ್ಷ ಕಳೆದರೂ ಮಕ್ಕಳಾಗಲಿಲ್ಲವೆಂದು ರಂಜಿತಾಗೆ ಪತಿ ಮತ್ತು ಆತನ ಪೋಷಕರು ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡುತ್ತಿದ್ದರು ಹಾಗೂ ಹೆಚ್ಚಿನ ವರದಕ್ಷಿಣೆಗಾಗಿ ಪೀಡಿಸುತ್ತಿದ್ದರು ಎಂದು ಆರೋಪಿಸಿರುವ ರಂಜಿತಾ ಪೋಷಕರು, ಆಕೆಯನ್ನು ಪತಿ ಮತ್ತು ಮನೆಯವರು ಕೊಲೆ ಮಾಡಿ ನೇಣು ಹಾಕಿದ್ದಾರೆ ಎಂದು ಆರೋಪಿಸಿದ್ದಾರೆ.

ರಂಜಿತಾಗೆ ಪತಿ ಮನೆಯವರಿಂದ ಕಿರುಕುಳ ಹೆಚ್ಚಾದಾಗ ಒಮ್ಮೆ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಅಕ್ಷಯ್ ಮತ್ತು ಆತನ ಮನೆಯವರನ್ನು ಕರೆದು ಬುದ್ಧಿವಾದ ಹೇಳಿದ್ದರು ಎಂದು ರಂಜಿತಾ ಪೋಷಕರು ತಿಳಿಸಿದ್ದಾರೆ. ಈ ಸಂಬಂಧ ಹಾಸನ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಅರಕಲಗೂಡು ತಾಲೂಕು ಹುಲಿಕಲ್ ಗ್ರಾಮದಲ್ಲಿ ಗೃಹಿಣಿಯೋರ್ವರು ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದು, ಈಕೆಯನ್ನು ವರದಕ್ಷಿಣೆ ಕಿರುಕುಳ ನೀಡಿ ಪತಿ ಮನೆಯವರು ಹತ್ಯೆ ಮಾಡಿದ್ದಾರೆ ಎಂದು ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವರ: ಕೆಆರ್ ನಗರ ತಾಲೂಕು ಹೊಸೂರು ಗ್ರಾಮದ ಮಂಜುನಾಥ ಮತ್ತು ರಾಣಿ ದಂಪತಿ ಪುತ್ರಿ ಪ್ರಿಯಾಂಕಾ(23) ಅರಕಲಗೂಡು ತಾಲೂಕಿನ ಹುಲಿಕಲ್ ಗ್ರಾಮದ ರಾಮಕೃಷ್ಣ ಎಂಬುವರ ಮಗ ದಿನೇಶ್ ಎಂಬುವನನ್ನು 2018ರ ಫೆಬ್ರವರಿ 18ರಂದು ವಿವಾಹವಾಗಿದ್ದರು. ಈ ವೇಳೆ 150 ಗ್ರಾಂ ಚಿನ್ನಾಭರಣ, 1.50 ಲಕ್ಷ ರೂ. ನಗದು ಹಾಗೂ ಬೈಕ್‌ಅನ್ನು ವರದಕ್ಷಿಣೆಯಾಗಿ ನೀಡಲಾಗಿತ್ತು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಮದುವೆಯಾದ ಆರೇ ತಿಂಗಳಿನಲ್ಲಿ ಇನ್ನೂ ಹೆಚ್ಚಿನ ವರದಕ್ಷಿಣೆ ತರುವಂತೆ ಪ್ರಿಯಾಂಕಾಗೆ ಪತಿ ದಿನೇಶ್, ಮಾವ ರಾಮಕೃಷ್ಣ, ಅತ್ತೆ ಗಾಯಿತ್ರಮ್ಮ, ದಿನೇಶ್ ಸಹೋದರರಾದ ಪ್ರವೀಣ್, ಲೋಕೇಶ್, ಸಹೋದರಿಯರಾದ ಸುಹಾಸಿನಿ ಮತ್ತು ಶುಭಾಶಿಣಿ ಅವರು ಕಿರುಕುಳ ನೀಡಲಾರಂಭಿಸಿದರು. ಆ ವೇಳೆ ಗ್ರಾಮದ ಮುಖಂಡರ ಸಮ್ಮುಖದಲ್ಲಿ ಪಂಚಾಯಿತಿ ನಡೆದು, ಇನ್ನೂ 50 ಗ್ರಾಂ ಚಿನ್ನವನ್ನು ಕೊಡುವುದಾಗಿ ಪ್ರಿಯಾಂಕ ಮನೆಯವರು ಆಕೆಯ ಪತಿ ಮನೆಯವರಿಗೆ ತಿಳಿಸಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ.

ಆದರೆ, ಚಿನ್ನ ನೀಡಲು ಸಾಧ್ಯವಾಗದ ಕಾರಣ ದಿನೇಶ್ ಮನೆಯವರೆಲ್ಲಾ ಪ್ರಿಯಾಂಕಾಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡುತ್ತಿದ್ದರು. ಮೇ 16ರಂದು ಪ್ರಿಯಾಂಕಾಳನ್ನು ತವರು ಮನೆಗೆ ಕರೆತಂದ ಪತಿ ದಿನೇಶ್, ವರದಕ್ಷಿಣೆ ಬಾಕಿ ಇನ್ನೂ 50 ಗ್ರಾಂ ಚಿನ್ನ ಕೊಡದಿದ್ದರೆ ಪ್ರಿಯಾಂಕಾಳನ್ನು ಕೊಲೆ ಮಾಡುವುದಾಗಿ ಬೆದರಿಸಿ, ಆಕೆಯನ್ನು ಅಲ್ಲೇ ಬಿಟ್ಟು ಹೋಗಿದ್ದಾನೆ. ಮೇ 20ರಂದು ಪ್ರಿಯಾಂಕಾ ಪತಿಯ ಮನೆಗೆ ತೆರಳಿದ್ದು, ಆ ವೇಳೆ ಆಕೆಗೆ ಪತಿ ಮನೆಯವರೆಲ್ಲಾ ಹಲ್ಲೆ ನಡೆಸಿ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಈ ವಿಚಾರವನ್ನು ಅಂದು ರಾತ್ರಿ ಪ್ರಿಯಾಂಕಾ ತಮಗೆ ಮೊಬೈಲ್ ಮೂಲಕ ತಿಳಿಸಿದ್ದು, ಬೆಳಗ್ಗೆ ಬರುತ್ತೇವೆ ಎಂದು ಆಕೆಗೆ ತಿಳಿಸಿ, ಸಮಾಧಾನ ಮಾಡಿದ್ದೆವು ಎಂದು ಪೊಲೀಸರಿಗೆ ದೂರು ನೀಡಿರುವ ಆಕೆಯ ತಾಯಿ ರಾಣಿ ತಿಳಿಸಿದ್ದಾರೆ.

ಅದೇ ದಿನ ಮುಂಜಾನೆ 3 ಗಂಟೆ ಸುಮಾರಿನಲ್ಲಿ ಹುಲಿಕಲ್ ಗ್ರಾಮದಲ್ಲೇ ಇರುವ ಪ್ರಿಯಾಂಕಾಳ ಸೋದರಮಾವ ರಾಣಿ ಅವರಿಗೆ ಕರೆ ಮಾಡಿ ಆಕೆ ಸಾವನ್ನಪ್ಪಿರುವ ಬಗ್ಗೆ ತಿಳಿಸಿದ್ದಾರೆ. ಪ್ರಿಯಾಂಕಾಳನ್ನು, ಆಕೆ ಗಂಡ, ಆತನ ಕುಟುಂಬದವರು ಹತ್ಯೆ ಮಾಡಿದ್ದಾರೆ ಎಂದು ರಾಣಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೊಣನೂರು ಠಾಣೆ ಪೊಲೀಸರು ಪ್ರಿಯಾಂಕಾ ಪತಿ ದಿನೇಶ್‌ನನ್ನು ಬಂಧಿಸಿ, ತಲೆಮರೆಸಿಕೊಂಡಿರುವ ಇತರರಿಗಾಗಿ ಹುಡುಕಾಟ ನಡೆಸಿದ್ದಾರೆ.

ಕಾರು ಡಿಕ್ಕಿ: ಕಾರ್ಮಿಕ ಮಹಿಳೆ ಸಾವು

ಮೈಸೂರು, ಮೇ 23(ಎಸ್‌ಬಿಡಿ)– ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರ್ಮಿಕ ಮಹಿಳೆ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಮೈಸೂರು ತಾಲೂಕು ದಡದಹಳ್ಳಿ ಸಮೀಪ ಭಾನುವಾರ ನಡೆದಿದೆ. ಕೊಳ್ಳೇಗಾಲ ತಾಲೂಕಿನ ಕಾಮಗೆರೆ ನಿವಾಸಿ ಜಯಮ್ಮ(45) ಅಪಘಾತದಲ್ಲಿ ಮೃತಪಟ್ಟಿದ್ದಾರೆ. ದಡದಹಳ್ಳಿ ಸಮೀಪ ಇಟ್ಟಿಗೆ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಇವರು, ರಾಯನ ಹುಂಡಿ ಸಮೀಪದ ಮತ್ತೊಂದು ಇಟ್ಟಿಗೆ ಕಾರ್ಖಾನೆಗೆ ಕೆಲಸಕ್ಕೆ ತೆರಳಿದ್ದರು. ಆದರೆ ಇಲ್ಲಿಯೇ ಬಿಟ್ಟು ಹೋಗಿದ್ದ ಪಾತ್ರೆಗಳನ್ನು ತೆಗೆದುಕೊಂಡು ಹೋಗಲೆಂದು ಭಾನುವಾರ ಸಂಜೆ ದಡದಹಳ್ಳಿ ಬಳಿ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಸ್ವಿಫ್ಟ್ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ಜಯಮ್ಮ ತೀವ್ರ ಪೆಟ್ಟಿನಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ನಂತರ ಚಾಲಕ ಕಾರನ್ನು ಅಲ್ಲಿಯೇ ಬಿಟ್ಟು ಪರಾರಿಯಾಗಿದ್ದು, ಆತನ ಪತ್ತೆಗೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಕ್ಕಿದ ಚಿನ್ನದ ಓಲೆ ಮಹಿಳೆಗೆ ತಲುಪಿಸಿ ಪ್ರಾಮಾಣಿಕತೆ ಮೆರೆದ ಸಂಚಾರಿ ಪೇದೆ!



ಮೈಸೂರು, ಮೇ 23(ಎಂಕೆ)– ನಗರದ ಜಯಚಾಮ ರಾಜೇಂದ್ರ ವೃತ್ತದಲ್ಲಿ ಕರ್ತವ್ಯ ನಿರತ ದೇವರಾಜ ಸಂಚಾರ ಪೊಲೀಸ್ ಠಾಣೆ ಸಿಬ್ಬಂದಿ ಅರುಣ್ ಕೌಶಿಕ್, ತಮಗೆ ಸಿಕ್ಕಿದ ಒಂದು ಜೊತೆ ಚಿನ್ನದ ಓಲೆ, ಪರ್ಸ್ ಹಾಗೂ ಮೊಬೈಲ್ ಅನ್ನು ವಾರಸುದಾರರಿಗೆ ಹಿಂದಿರುಗಿಸಿ, ಪ್ರಾಮಾಣಿಕತೆ ಮೆರೆದಿದ್ದಾರೆ. ಸೋಮವಾರ ಬೆಳಗ್ಗೆ 11 ಗಂಟೆಗೆ ಒಂದು ಪರ್ಸ್, ಮೊಬೈಲ್ ಹಾಗೂ ಒಂದು ಚಿನ್ನದ ಓಲೆ ಸಿಕ್ಕಿದ್ದು, ಮೊಬೈಲ್ ಮೂಲಕ ವಾರಸುದಾರರನ್ನು ಸಂಪರ್ಕಿಸಿದಾಗ ಮೈಸೂರಿನ ಆಲನಹಳ್ಳಿ ಗ್ರಾಮದವರು ಎಂದು ತಿಳಿದುಬಂದಿದೆ. ಬಳಿಕ ಅವರನ್ನು ಕರ್ತವ್ಯ ನಿರತ ಸ್ಥಳಕ್ಕೆ ಕರೆಸಿಕೊಂಡು ವಾಪಸ್ ನೀಡಿದ್ದಾರೆ.

ರವಿಶಂಕರ್‌ಗೆ ಮೊದಲ ಪ್ರಾಶಸ್ತ್ಯ ಮತ ನೀಡಿ

ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮನವಿ



ಮೈಸೂರು, ಮೇ 23(ಎಂಕೆ)– ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸೋಮವಾರ ವಿವಿಧೆಡೆ ಮತಯಾಚಿಸಿದರು.

ಮೈಸೂರಿನ ವಿಜಯನಗರದಲ್ಲಿರುವ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್‌ಗೆ ಮತ ನೀಡುವಂತೆ ಮನವಿ ಮಾಡಿದರು. ಪದವೀಧರ ಕ್ಷೇತ್ರದಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಮೈ.ವಿ.ರವಿಶಂಕರ್ ಸೂಕ್ತ ವ್ಯಕ್ತಿಯಾಗಿದ್ದು, ಮೊದಲ ಪ್ರಾಶಸ್ತ್ಯ ಮತ ನೀಡಿ ಗೆಲ್ಲಿಸುವಂತೆ ಕೋರಿದರು. ಶಾಸಕ ಎಲ್.ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತಿತರರು ಉಪಸ್ಥಿತರಿದ್ದರು.

2025ರ ವೇಳೆಗೆ ದೇಶ ಮಲೇರಿಯಾ ಮುಕ್ತ: ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಾರ್ವಾಹಾರಿ ಮೀನು ಸಾಕಾಣೆ

- ಮೈಸೂರು ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯಿಂದ 170 ಮೀನು ಸಾಕುವ ತೊಟ್ಟಿ ನಿರ್ಮಾಣ
- 480 ಕೆರೆ ಸೇರಿ 2880 ವಾಟರ್ ಬಾಡಿಗಳಲ್ಲೂ ಲಾರ್ವಾಹಾರಿ ಮೀನು ಬಿಡಲು ನಿರ್ಧಾರ





ಮೈಸೂರಿನ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಿರ್ಮಿಸಿರುವ ಲಾರ್ವಾಹಾರಿ ಮೀನು ಸಾಕಾಣಿಕೆ ತೊಟ್ಟಿಯನ್ನು ವೀಕ್ಷಿಸುತ್ತಿರುವ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಿದಂಬರ ಹಾಗೂ ಸಿಬ್ಬಂದಿ. ಬಲಚಿತ್ರದಲ್ಲಿ ಹಲಗೈಯ್ಯನಹುಂಡಿಯ ಕಂಚುಗಾರ ಕಟ್ಟೆಯಲ್ಲಿ ಲಾರ್ವಾಹಾರಿ ಮೀನು ಸಂಗ್ರಹಿಸುತ್ತಿರುವುದು.

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಮೇ 23– ಎಷ್ಟೇ ಮುಂಜಾಗ್ರತಾ ಕ್ರಮ ಕೈಗೊಂಡರೂ ಪೂರ್ಣ ಪ್ರಮಾಣದಲ್ಲಿ ದೇಶವನ್ನು ಮಲೇರಿಯಾ ಮುಕ್ತ ಮಾಡಲು ಸಾಧ್ಯವಾಗದ ಕಾರಣ, ಇದೀಗ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೊಳ್ಳೆಯನ್ನು ಭಕ್ಷಿಸಬಲ್ಲ 'ಲಾರ್ವಾಹಾರಿ ಮೀನು' ಸಾಕುವುದಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆದೇಶಿಸಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ 170 ಲಾರ್ವಾಹಾರಿ ಮೀನಿನ ಕಿರು ತೊಟ್ಟಿಯನ್ನು ನಿರ್ಮಿಸಲಾಗುತ್ತಿದೆ.

2025ಕ್ಕೆ ದೇಶವನ್ನು ಮಲೇರಿಯಾ ಮುಕ್ತಗೊಳಿಸಲು ಆರೋಗ್ಯ ಇಲಾಖೆ ಪಣ ತೊಟ್ಟಿದೆ ಅದರ ಅಂಗವಾಗಿ ಹಲವು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಅದರಲ್ಲಿ ಲಾರ್ವಾಹಾರಿ ಮೀನು ಸಾಕಾಣಿಕೆಯೂ ಒಂದಾಗಿದ್ದು, ಈ ಪ್ರಯೋಗದ ಮೂಲಕ ಮಲೇರಿಯಾಗೆ ಕಾರಣವಾಗುವ ಅನಾಫಿಲಿಸ್ ಸೊಳ್ಳೆಯನ್ನು ನೈಸರ್ಗಿಕ ವಿಧಾನದಲ್ಲಿ ನಿರ್ಮೂಲನೆ ಮಾಡಲು ಮುಂದಾಗಿದೆ. ಈ ಹೊಸ ಪ್ರಯೋಗವು ನೈಸರ್ಗಿಕ ಪ್ರಕ್ರಿಯೆಯಲ್ಲೇ ನಡೆಯುವುದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಾಗುತ್ತಿದ್ದ ಸೊಳ್ಳೆ ಉತ್ಪಾದನೆ ಸಹಜವಾಗಿ ಲಾರ್ವಾಹಾರಿ ಮೀನಿರುವ ತೊಟ್ಟಿಯತ್ತ ಆಕರ್ಷಣೆಯಾಗಿ ಸೊಳ್ಳೆಗಳ ಸಂಖ್ಯೆ ಹೆಚ್ಚಳಕ್ಕೆ ಬ್ರೇಕ್ ಬೀಳಲಿದೆ.

> **ಜಾಗೃತಿಯೊಂದಿಗೆ ಹಲವು ಕ್ರಮ**
>
> ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ರೋಗವಾಹಕ ಸೊಳ್ಳೆಗಳ ನಿಯಂತ್ರಣಕ್ಕಾಗಿ ಲಾರ್ವಾಹಾರಿ ಮೀನಿನ ತೊಟ್ಟಿ ನಿರ್ಮಿಸಲಾಗಿದೆ. ಸರ್ಕಾರದ ಆದೇಶದಂತೆ ಕ್ರಮ ಕೈಗೊಳ್ಳಲಾಗಿದೆ. ಇದರೊಂದಿಗೆ ಮಲೇರಿಯಾ ಜ್ವರ ಸಮೀಕ್ಷೆ, ಸೋಂಕಿತರ ಪತ್ತೆ ಹಚ್ಚುವಿಕೆ, ಕೀಟನಾಶಕ ಸಿಂಪಡಣೆ, ಸೊಳ್ಳೆ ಉತ್ಪತ್ತಿಯಾಗುವ ಸ್ಥಳ ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿರುವ 480 ಕೆರೆ ಒಳಗೊಂಡಂತೆ 2880 ನೀರಿನ ಸಂಪನ್ಮೂಲ ಗುರುತಿಸಲಾಗಿದೆ. ಇಲಾಖೆ ಸಿಬ್ಬಂದಿಗಳೇ ಕೆರೆಗಳಿಂದ ಲಾರ್ವಾ ಮೀನನ್ನು ತಂದು ತೊಟ್ಟಿಗೆ ಬಿಡುತ್ತಿದ್ದೇವೆ. ಇದರೊಂದಿಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಮನೆಯಲ್ಲಿರುವ ನೀರಿನ ತೊಟ್ಟಿ, ಸಂಪ್, ಅಕ್ವೇರಿಯಂ, ಟೇಬಲ್ ವಾಸ್, ವಾಸ್ತು ಗಿಡ ಸೇರಿದಂತೆ ಹೆಚ್ಚು ತೇವಾಂಶವಿರುವ ಸ್ಥಳಗಳಲ್ಲಿ ಸೊಳ್ಳೆ ಉತ್ಪಾದನೆಯಾಗದಂತೆ ಆಗಿಂದಾಗ್ಗೆ ಸ್ವಚ್ಛಗೊಳಿಸಬೇಕು. ಮನೆ ಸುತ್ತಮುತ್ತ ಖಾಲಿ ಟೈರ್, ತೆಂಗಿನ ಚಿಪ್ಪುಗಳಲ್ಲಿ ಮಳೆ ನೀರು ನಿಲ್ಲದಂತೆ ಕಟ್ಟೆಚ್ಚರವಹಿಸುವಂತೆ ಸೂಚನೆ ನೀಡಲಾಗುತ್ತಿದೆ.
>
> –ಡಾ.ಚಿದಂಬರ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ.

ಅಧಿಕೃತ ಆದೇಶ: ಮಲೇರಿಯಾ ನಿವಾರಣಾ ಗುರಿ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ ಹಾಗೂ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳ ಕಚೇರಿಗೆ ಅಧಿಕೃತ ಆದೇಶ ಹೊರಡಿಸಲಾಗಿದ್ದು, ಕಡ್ಡಾಯವಾಗಿ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಾರ್ವಾಹಾರಿ ಮೀನು ಸಾಕಾಣಿಕೆಯ ತೊಟ್ಟಿ ನಿರ್ಮಾಣ ಮಾಡುವುದಕ್ಕೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ತಲಾ 15 ಸಾವಿರ ವೆಚ್ಚ: ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಾರ್ವಾಹಾರಿ ಮೀನಿನ ಸಾಕಾಣಿಕೆಯ ತೊಟ್ಟಿ ನಿರ್ಮಾಣ ಮಾಡಲು ಆಯಾ ಪ್ರಾಥಮಿಕ ಆರೋಗ್ಯ ಕೇಂದ್ರ ಆರೋಗ್ಯ ರಕ್ಷಾ ಸಮಿತಿ ಅನುದಾನ ಬಳಸುವಂತೆ ಸೂಚಿಸಲಾಗಿದೆ. ಅಲ್ಲದೆ, ಒಂದು ತೊಟ್ಟಿ ನಿರ್ಮಾಣಕ್ಕೆ 15 ಸಾವಿರಕ್ಕಿಂತ ಹೆಚ್ಚು ಹಣ ಬಳಸದಂತೆಯೂ ಸೂಚಿಸಲಾಗಿದೆ.

150 ಪೂರ್ಣ, 20 ಪ್ರಗತಿಯಲ್ಲಿವೆ: ಜಿಲ್ಲೆಯಲ್ಲಿ ಈಗಾಗಲೇ 150 ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಾರ್ವಾಹಾರಿ ಮೀನಿನ ತೊಟ್ಟಿ ನಿರ್ಮಿಸಲಾಗಿದೆ. ಇನ್ನು 20 ಕೇಂದ್ರಗಳಲ್ಲಿ ಲಾರ್ವಾಹಾರಿ ಮೀನಿನ ತೊಟ್ಟಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಮುಂದಿನ 15 ದಿನದೊಳಗೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಲಾರ್ವಾಹಾರಿ ಮೀನಿನ ತೊಟ್ಟಿಗಳಲ್ಲಿ ಸೊಳ್ಳೆ ಭಕ್ಷಕ ಲಾರ್ವಾಹಾರಿ ಮೀನಿನ ಸಾಕುವ ಪ್ರಕ್ರಿಯೆ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭವಾಗಲಿದೆ. ವಿಧಾನಪರಿಷತ್ ಚುನಾವಣೆ ನೀತಿ ಸಂಹಿತೆ ಮುಗಿದ ಬಳಿಕ ಮೀನಿನ ತೊಟ್ಟಿಗಳ ಉದ್ಘಾಟನೆ ನೆರವೇರಲಿದೆ.

2880 ವಾಟರ್ ಬಾಡಿ: ಮೈಸೂರು ಜಿಲ್ಲೆಯಲ್ಲಿ 480 ಕೆರೆ, ಬಾವಿ, ಕೃಷಿ ಹೊಂಡಾ, ಸಣ್ಣ ಸಣ್ಣ ಕಟ್ಟೆಗಳು ಒಳಗೊಂಡಂತೆ 2880 ವಾಟರ್ ಬಾಡಿ(ನೀರಿನ ಸಂಪನ್ಮೂಲ) ಯನ್ನು ಗುರುತಿಸಲಾಗಿದೆ. ಅವುಗಳಲ್ಲಿ ಹಲವೆಡೆ ಲಾರ್ವಾಹಾರಿ ಮೀನುಗಳಿವೆ. ಮೀನುಗಳಿಲ್ಲದ ಕೆರೆ–ಕಟ್ಟೆ, ಬಾವಿ ಹಾಗೂ ಕೃಷಿ ಹೊಂಡಾಗಳಿಗೆ ಲಾರ್ವಾ ಮೀನು ಬಿಡಲು ಕ್ರಮ ಕೈಗೊಳ್ಳಲಾಗಿದೆ.

ಸಿಬ್ಬಂದಿಯಿಂದಲೇ ಮೀನಿನ ಸಂಗ್ರಹ: ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಟ್ಟಿರುವ ಮೀನಿನ ತೊಟ್ಟಿಗೆ ಲಾರ್ವಾಹಾರಿ ಮೀನುಗಳನ್ನು ಬಿಡಲು ಆರೋಗ್ಯ ಸಿಬ್ಬಂದಿ ಮುಂದಾಗಿದ್ದಾರೆ. ಇದಕ್ಕಾಗಿ ಗುರುತಿಸಲ್ಪಟ್ಟ ಕೆರೆಗಳಿಗೆ ಡಾ.ಚಿದಂಬರ ನೇತೃತ್ವದಲ್ಲಿ ಇಲಾಖೆ ಸಿಬ್ಬಂದಿ ತೆರಳಿ ಸಣ್ಣ ಜಾಲರಿ ಮೂಲಕ ಕೆರೆ ದಡದಲ್ಲಿ ಲಾರ್ವಾಹಾರಿ ಮೀನುಗಳನ್ನು, ಬಕೆಟ್ ಹಾಗೂ ಬಿಂದಿಗೆಗೆ ತುಂಬಿಕೊಂಡು ತಂದು ತೊಟ್ಟಿಗೆ ಬಿಡುವ ಪ್ರಕ್ರಿಯೆ ನಡೆಯುತ್ತಿದೆ.

ಅನಾಫಿಲಿಸ್ ಹೆಣ್ಣು ಸೊಳ್ಳೆ: ಮಲೇರಿಯಾ ಮೂಲ ಕಾರಣ ಅನಾಫಿಲಿಸ್ ಹೆಣ್ಣು ಸೊಳ್ಳೆ. ಇದು ಪ್ಲಾಸ್ಮೋಡಿಯಂ ಎಂಬ ಪ್ಯಾರಾಸೈಟ್‌ನಿಂದ ತಾನೂ ಸೋಂಕಿಗೆ ಒಳಗಾಗಿ ಮನುಷ್ಯರಿಗೂ ಹರಡಿಸುತ್ತಿದೆ. ಒಂದು ಸಲ ಈ ಸೊಳ್ಳೆಯು ಮನುಷ್ಯರಿಗೆ ಕಚ್ಚಿದ ಬಳಿಕ ಪ್ಲಾಸ್ಮೋರಿಯಾವು ಮನುಷ್ಯನ ಯಕೃತ್‌ನಲ್ಲಿ ಸಂತಾನಾಭಿವೃದ್ಧಿ ಮಾಡಿ, ಸೋಂಕು ಉಂಟು ಮಾಡುತ್ತದೆ. ಅಲ್ಲದೆ, ಕೆಂಪು ರಕ್ತದ ಕಣಗಳನ್ನು ನಾಶ ಮಾಡುತ್ತದೆ. ಇದರಿಂದ ಅನಾಫಿಲಿಸ್ ಹೆಣ್ಣು ಸೊಳ್ಳೆ ಸಂತತಿ ಹೆಚ್ಚಾಗದಂತೆ ತಡೆಗಟ್ಟುವ ಜವಾಬ್ದಾರಿ ಎಲ್ಲರದ್ದಾಗಿದೆ.

ಮಲೇರಿಯಾ ಲಕ್ಷಣ: ಮಲೇರಿಯಾಗೆ ತುತ್ತಾದವರಲ್ಲಿ ಜ್ವರ ಹೆಚ್ಚಾಗುತ್ತದೆ. ತಲೆನೋವು, ಭೇದಿ, ಮೈ–ಕೈ ನೋವು, ವಿಪರೀತ ಆಯಾಸ, ಅತೀವ ಜ್ವರ, ವಾಕರಿಕೆ ಮತ್ತು ವಾಂತಿ, ಮೈ ಬೆವರುವುದು, ಮೈ ನಡುಗಿಸುವ ಚಳಿ, ಕೈ ಕಾಲುಗಳು ಹಿಡಿದುಕೊಂಡಂತೆ ಆಗುವುದು, ಅನಿಮಿಯಾ, ಮಲದಲ್ಲಿ ರಕ್ತ ಮತ್ತು ಸೆಳೆತವುಂಟಾಗುತ್ತದೆ. ಮೂತ್ರಪಿಂಡಗಳಿಗೆ ಹಾನಿಯು ಆಗಬಹುದು.

ಮುನ್ನೆಚ್ಚರಿಕಾ ಕ್ರಮ: ಮನೆಯ ಸುತ್ತಮುತ್ತಲಿನ ವಾತಾವರಣವನ್ನು ಶುಚಿಯಾಗಿಡಬೇಕು. ಮಲಗುವ ವೇಳೆ ಮಸ್ಕಿಟೋ ಸ್ಪ್ರೇ, ಸೊಳ್ಳೆ ಬತ್ತಿ ಮತ್ತು ಸೊಳ್ಳೆ ಪರದೆ ಬಳಸಬೇಕು. ಮನೆಯ ಅಕ್ಕಪಕ್ಕ ಮತ್ತು ಮನೆಯ ಮುಂದಿನ ಚರಂಡಿಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ನಿಂತಿರುವ ನೀರಿನಲ್ಲಿ ಸೊಳ್ಳೆಗಳ ಸಂತಾನೋತ್ಪತ್ತಿ ಹೆಚ್ಚಾಗಿರುತ್ತದೆ.

ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ

ಪ್ರಗತಿಪರ ಸಂಘಟನೆಗಳ ಅಭ್ಯರ್ಥಿಯಾಗಿ ಪ್ರಸನ್ನ ಎನ್.ಗೌಡ ಕಣಕ್ಕೆ: ನಾಳೆ ನಾಮಪತ್ರ ಸಲ್ಲಿಕೆ



ಮೈಸೂರು,ಮೇ 23(ಎಂಟಿವೈ)– ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ ಹಾಗೂ ಪ್ರಗತಿಪರ ಸಂಘಟನೆಗಳ ಬೆಂಬಲಿತ ಅಭ್ಯರ್ಥಿ ಪ್ರಸನ್ನ ಎನ್.ಗೌಡ ಮೇ 25ರಂದು ನಾಮಪತ್ರ ಸಲ್ಲಿಸಲಿದ್ದಾರೆ ಎಂದು ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ಸಂಘ ಜನಪರ ಆಡಳಿತ ಹಾಗೂ ರೈತರಪರ ಧ್ವನಿ ಎತ್ತುವವರನ್ನು ನಿರೀಕ್ಷಿಸುತ್ತಿದೆ. ಈ ಹಿನ್ನೆಲೆಯಲ್ಲಿ ರೈತ ಸಂಘ, ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಬೆಂಬಲದೊಂದಿಗೆ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ರೈತಪರ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವ ಪ್ರಸನ್ನ ಗೌಡರನ್ನು ಕಣಕ್ಕಿಳಿಸಿದೆ ಎಂದರು.

ಮೇ 25ರಂದು ಬೆಳಗ್ಗೆ 11ಕ್ಕೆ ಪುರಭವನದ ಆವರಣದಲ್ಲಿ ಬಹಿರಂಗ ಸಭೆ ಆಯೋಜಿಸಿದ್ದು, ಹಿರಿಯ ಸಾಹಿತಿ ದೇವನೂರ ಮಹಾದೇವ ಹಿರಿಯ ಹೋರಾಟಗಾರ ಪ.ಮಲ್ಲೇಶ್ ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಪದವೀಧರರು ಭಾಗಿಯಾಗಲಿದ್ದಾರೆ. ಬಳಿಕ ಮೆರವಣಿಗೆ ಮೂಲಕ ಪ್ರಾದೇಶಿಕ ಆಯುಕ್ತರ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಲಾಗುವುದು. ಚಳವಳಿ ರಾಜಕಾರಣದ ಭಾಗವಾಗಿ ಪ್ರಸನ್ನ ಸ್ಪರ್ಧೆ ಮಾಡಿದ್ದಾರೆ. ಅವರಿಗೆ 48ಕ್ಕೂ ಹೆಚ್ಚು ಸಂಘಟನೆಗಳು ಬೆಂಬಲ ನೀಡಿವೆ. ಈ ಸಲ ಪದವೀಧರರು ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಲಿದ್ದಾರೆ ಎಂದು ತಿಳಿಸಿದರು.

ಸ್ವರಾಜ್ ಇಂಡಿಯಾ ಪಕ್ಷದ ಅಧ್ಯಕ್ಷ ಚಾಮರಾಜ ಮಾಲಿ ಪಾಟೀಲ್ ಮಾತನಾಡಿ, ರಾಜ್ಯ ರಾಜಕೀಯ ಸಂಪೂರ್ಣ ಹದಗೆಟ್ಟಿದೆ. ಗುಣಾತ್ಮಕ ರಾಜಕೀಯ ತರದಿದ್ದರೆ ಮುಂದಿನ ದಿನಗಳಲ್ಲಿ ಅಪಾಯ ನಿಶ್ಚಿತ. ಸಮಾಜವನ್ನು ವಿಭಜಿಸುವ ಶಕ್ತಿಗಳು ಪ್ರಬಲವಾಗುತ್ತಿವೆ. ಸಮಾಜಘಾತುಕ ಶಕ್ತಿಗಳ ವಿರುದ್ಧ ರೈತರು, ದಲಿತರು, ಕಾರ್ಮಿಕರು, ಮಹಿಳೆಯರು ಒಂದಾಗಿ ಒಮ್ಮತದಿಂದ ದನಿ ಎತ್ತಬೇಕಾಗಿದೆ ಜನಪರ ಹೋರಾಟದ ಭಾಗವಾಗಿ ಸ್ಪರ್ಧಿಸಿರುವ ಪ್ರಸನ್ನ ಎನ್.ಗೌಡ ಅವರನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರಲ್ಲದೆ, ರೈತ ಮುಖಂಡರಾದ ಪ್ರೊ.ನಂಜುಂಡಸ್ವಾಮಿ, ಭೀಮನಗೌಡ ಪಾಟೀಲ್, ಕೆ.ಎಸ್. ಪುಟ್ಟಣ್ಣಯ್ಯ ಅವರ ಬಳಿಕ ವಿಧಾನಸಭೆ, ಪರಿಷತ್ತಿನಲ್ಲಿ ರೈತರ, ದಲಿತರ, ಕಾರ್ಮಿಕರ ಪರ ಮಾತನಾಡುವವರು ಇಲ್ಲ. ಬರೀ ಕೆಲಸಕ್ಕೆ ಬಾರದ ಚರ್ಚೆಗೆ ಸದನದ ಸಮಯ ವ್ಯರ್ಥವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದಸಂಸ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು ಮಾತನಾಡಿ, ಪ್ರಸನ್ನ ಎನ್.ಗೌಡ ಪರ ದಕ್ಷಿಣ ಪದವೀಧರರ ಕ್ಷೇತ್ರ ವ್ಯಾಪ್ತಿಯ 4 ಜಿಲ್ಲೆಗಳಲ್ಲೂ ಪ್ರಚಾರ ಮಾಡಿದ್ದು, ಜಯಗಳಿಸುವುದು ನಿಶ್ಚಿತ ಎಂದರು.

ಅಭ್ಯರ್ಥಿ ಪ್ರಸನ್ನ ಎನ್.ಗೌಡ ಮಾತನಾಡಿ, ನಗರ ಕೇಂದ್ರಿತವಾಗಿದ್ದ ಪದವೀಧರರ ಚುನಾವಣೆಯನ್ನು ಹಳ್ಳಿಗಳಿಗೂ ವಿಸ್ತಾರ ಮಾಡಲಾಗಿದೆ ವೈಯಕ್ತಿಕವಾಗಿ 90 ಸಾವಿರಕ್ಕೂ ಹೆಚ್ಚು ಪದವೀಧರರನ್ನು ಭೇಟಿ ಮಾಡಿರುವೆ.

ಸುದ್ದಿಗೋಷ್ಠಿಯಲ್ಲಿ ದಸಂಸ ಸಂಚಾಲಕ ವಿ.ನಾಗರಾಜು, ಮುಖಂಡರಾದ ರವಿಶಂಕರ್ ಪೂಣಚ್ಚ ಕೆಂಪೂಗೌಡ, ಸರಗೂರು ನಟರಾಜ್, ಹೊಸೂರು ಕುಮಾರ್, ಆಲಗೂಡು ಶಿವಕುಮಾರ್, ನಾಗಪ್ಪ ಹುಂಡಿ ಇನ್ನಿತರರು ಇದ್ದರು.

ನಾದಮಂಟಪದಲ್ಲಿ ಹರಿಯಿತು ಗಾನಲಹರಿ



ಮೈಸೂರು, ಮೇ 23(ಎಂಕೆ)– ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಭಕ್ತಿ ಸುಧೆ ಹರಿಯಿತು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವ ಅಂಗವಾಗಿ ಏರ್ಪಡಿಸಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸೋಮವಾರ ಖ್ಯಾತ ಗಾಯಕ ವಿಜಯ್ ಪ್ರಕಾಶ್ ನೇತೃತ್ವದ 'ಲಯ ತರಂಗ' ತಂಡದಿಂದ ಭಜನೆ ಕಾರ್ಯಕ್ರಮ ನಡೆಯಿತು. ಹತ್ತಕ್ಕೂ ಹೆಚ್ಚು ಭಕ್ತಿಗೀತೆಗಳನ್ನು ಹಾಡಿದ ಗಾಯಕ ವಿಜಯ್ ಪ್ರಕಾಶ್ ಎಲ್ಲರ ಮನಗೆದ್ದರು.

ಕೊಳಲು ವಾದನದಲ್ಲಿ ವಿದ್ವಾನ್ ರವಿಚಂದ್ರ ಕುಲೂರು, ಮೃದಂಗದಲ್ಲಿ ವಿದ್ವಾನ್ ಜಯಚಂದ್ರ ರಾವ್, ಘಟಂನಲ್ಲಿ ವಿದ್ವಾನ್ ಗಿರಿಧರ ಉಡುಪ, ಡ್ರಮ್ಸ್‌ನಲ್ಲಿ ವಿದ್ವಾನ್ ಅರುಣ್ ಕುಮಾರ್ ಹಾಗೂ ತಳವಾದ್ಯದಲ್ಲಿ ವಿದ್ವಾನ್ ಪ್ರಮತ್ ಕಿರಣ್ ಉತ್ತಮ ಸಹಕಾರ ನೀಡಿದರು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸೇರಿದಂತೆ ಗಣ್ಯರು, ಸಾವಿರಾರು ಮಂದಿ ಭಕ್ತರು ಭಾಗವಹಿಸಿದ್ದರು.



ಬುಡಕಟ್ಟು ಮಕ್ಕಳ ಕಲಿಕೆಗೆ ಪೂರಕ ವಾತಾವರಣದ ಅನಿವಾರ್ಯತೆ

- ಸಾರ್ವಜನಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಭಾರತಿ ಸಲಹೆ
- ಉತ್ತಮ ಕಲಿಕಾ ವಾತಾವರಣ ಸೃಷ್ಟಿಸಲು ಶಿಕ್ಷಕರಿಗೆ ಕಿವಿಮಾತು

ಮೈಸೂರು,ಮೇ 23(ಎಂಟಿವೈ)– ಬುಡಕಟ್ಟು ಮಕ್ಕಳು ಸಾಮಾನ್ಯ ಶಾಲೆಯ ಮಕ್ಕಳ ನಡುವೆ ವ್ಯತ್ಯಾಸವಿದ್ದು, ಬುಡಕಟ್ಟು ಸಮುದಾಯದ ಮಕ್ಕಳ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸುವ ಅವಶ್ಯಕತೆ ಇದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಭಾರತಿ ಸಲಹೆ ನೀಡಿದ್ದಾರೆ.



ಮೈಸೂರಿನ ಟಿ.ಕೆ.ಲೇಔಟ್ ಪ್ರಾದೇಶಿಕ ದೂರವಾಣಿ ತರಬೇತಿ ಕೇಂದ್ರದಲ್ಲಿ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ ಪರಿಶಿಷ್ಟ ಪಂಗಡದ ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆಗಳಲ್ಲಿ ಇಂಗ್ಲಿಷ್, ಗಣಿತ ಹಾಗೂ ವಿಜ್ಞಾನ ವಿಷಯಗಳನ್ನು ಬೋಧಿಸುತ್ತಿರುವ ಶಿಕ್ಷಕರಿಗೆ ಆಯೋಜಿಸಿದ್ದ ಆರು ದಿನಗಳ ಪುನಶ್ಚೇತನ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಶಿಕ್ಷಕರು ಬೋಧನೆ ಮಾಡುವುದಕ್ಕೆ ಮಿತಿ ಹಾಕಿ ಮಕ್ಕಳಿಗೆ ಹೊಂದಿಕೊಳ್ಳುವಂತಹ ಕಲಿಕಾ ವಾತಾವರಣ ರೂಪಿಸುವಂತೆ ಸಲಹೆ ನೀಡಿದೆ. ಎಲ್ಲ ಹಂತದಲ್ಲೂ ಶಿಕ್ಷಕರು ಬೋಧನೆ ಮಾಡಲಾಗದು. ಮಕ್ಕಳ ಕಲಿಕೆಗೆ ಬೇಕಾದ ಪಠ್ಯಕ್ರಮಗಳನ್ನು ಮತ್ತು ಅದಕ್ಕೆ ಬೇಕಾದ ವಾತಾವರಣ ರೂಪಿಸಿದರೆ ಅವರಿಗೆ ಅನುಕೂಲವಾಗಲಿದೆ. ಆಶ್ರಮ ಶಾಲೆಯಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ 120ಕ್ಕೂ ಹೆಚ್ಚು ಮರಗಳ ಹೆಸರನ್ನು ಹೇಳುವ ಜ್ಞಾನವಿದೆ. ಗುರುತಿಸುವ ಸಾಮರ್ಥ್ಯವಿದೆ. ಆದರೆ, ವಿಜ್ಞಾನ, ಇಂಗ್ಲಿಷ್ ವಿಷಯದಲ್ಲಿ ಹಿನ್ನಡೆ ಅನುಭವಿಸುತ್ತಾರೆ. ಸಾಮಾನ್ಯ ಶಾಲೆಯ ಮಕ್ಕಳು ಈ ವಿಷಯಗಳಲ್ಲಿ ಜ್ಞಾನ ಹೊಂದಿದ್ದರೂ ಬೇರೆ ವಿಚಾರಗಳು ಗೊತ್ತಿರುವುದಿಲ್ಲ. ಹೀಗಾಗಿ, ಆಶ್ರಮ ಶಾಲೆಗಳಲ್ಲಿ ಬೋಧನೆ ಮಾಡುವ ಶಿಕ್ಷಕರು ಮಕ್ಕಳ ಮನಸ್ಸನ್ನು ಪರಿವರ್ತನೆ ಮಾಡಬೇಕು ಎಂದು ಸಲಹೆ ನೀಡಿದರು.

ಆಶ್ರಮ ಶಾಲೆಯ ಶಿಕ್ಷಕರು ಪಠ್ಯಕ್ರಮವನ್ನು ಮೊದಲು ಪರಿಚಯ ಮಾಡಿಸಿಕೊಡಬೇಕು. ಮಗುವಿನ ಜ್ಞಾನ ಚೆನ್ನಾಗಿರುತ್ತದೆ. ಅವರಲ್ಲಿ ಪ್ರೇರಣಾ ಶಕ್ತಿಯಾಗಿ ನಿಲ್ಲಬೇಕು. ವಿಜ್ಞಾನ, ಗಣಿತ, ಇಂಗ್ಲಿಷ್ ವಿಷಯದ ಬಗ್ಗೆ ಆತ್ಮವಿಶ್ವಾಸ, ಆತ್ಮಸ್ಥೈರ್ಯ ಮೂಡಿಸಬೇಕು. ಕಲಿಕಾ ಫಲಗಳನ್ನು ಗುರುತಿಸಿಕೊಳ್ಳಬೇಕು. ವಿಜ್ಞಾನ ಒಂದು ಸವಾಲು. ದೈನಂದಿನ ಅನ್ವಯಿಕ ಮತ್ತು ಕೌಶಲಕ್ಕೆ ಹೆಚ್ಚಿನ ಒತ್ತು ನೀಡಲಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕ ರಾಜೇಶ್ ಜಿ.ಗೌಡ ಮಾತನಾಡಿ, ಮೈಸೂರು, ಚಾಮರಾಜನಗರ ಜಿಲ್ಲೆ ಸೇರಿ ಆಶ್ರಮ ಶಾಲೆಗಳು ಹೆಚ್ಚು ಇರುವ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಈ ವರ್ಷ ಮೊದಲ ಹಂತದ ತರಬೇತಿ ಹಮ್ಮಿಕೊಳ್ಳಲಾಗಿದೆ. ಬುಡಕಟ್ಟು ಮಕ್ಕಳಿಗೆ ಗಣಿತ, ವಿಜ್ಞಾನ ಒಂದು ಸವಾಲಾಗಿದೆ. ಬುಡಕಟ್ಟು ಸಂಸ್ಕೃತಿ ಹೊಂದಿರುವ ಮಕ್ಕಳಿಗೆ ಬೋಧನೆ ಮಾಡುವ ಶಿಕ್ಷಕರಿಗೂ ಸವಾಲಿನ ಕೆಲಸವಾಗಿದೆ. ಕಳೆದ ಐದಾರು ವರ್ಷಗಳಿಗೆ ಹೋಲಿಸಿದರೆ ಆಶ್ರಮ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ದೊರೆಯುತ್ತಿದೆ. ಫಲಿತಾಂಶದಲ್ಲೂ ಹೆಚ್ಚಳವಾಗಿದೆ. ಸಾಮಾನ್ಯ ಶಾಲೆಯ ಶಿಕ್ಷಕರಿಗೆ ಆಗಿಂದಾಗ್ಗೆ ತರಬೇತಿ ಕೊಡಲಾಗುತ್ತಿದೆ. ಆದರೆ, ಆಶ್ರಮ ಶಾಲೆಯ ಶಿಕ್ಷಕರಿಗೆ ಅಂತಹ ಅವಕಾಶ ದೊರೆಯುತ್ತಿಲ್ಲ ಎನ್ನುವುದನ್ನು ಮನಗಂಡು ಬುಡಕಟ್ಟು ವ್ಯವಹಾರಗಳ ಮಂತ್ರಾಲಯದಿಂದ ಆಯೋಜಿಸಲಾಗಿದೆ ಎಂದು ನುಡಿದರು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಪ್ರಾಂಶುಪಾಲ ರಘುನಂದನ್ ಮಾತನಾಡಿ, ಪರಿಸರಕ್ಕೆ ಹೊಂದಿಕೊಂಡಂತೆ ಇರುವ ಮಕ್ಕಳಿಗೆ ಅವರದ್ದೇ ಆದ ಸಂಸ್ಕೃತಿ, ಭಾಷೆಯಲ್ಲಿ ಹೇಳಿಕೊಟ್ಟರೆ ಸಂಸ್ಕೃತಿ ಉಳಿಯುತ್ತದೆ. ಅದಕ್ಕಾಗಿಯೇ ಕೊಠಾರಿ ಶಿಕ್ಷಣ ಪದ್ಧತಿ ಬಂದಾಗ ಬುಡಕಟ್ಟು ಮಕ್ಕಳಿಗೆ ಅವರ ಭಾಷೆಯಲ್ಲೇ ಕಲಿಕೆಗೆ ಅವಕಾಶ ಮಾಡಿಕೊಡುವಂತೆ ಹೇಳಲಾಯಿತು ಎಂದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಸಂಶೋಧನಾಧಿಕಾರಿ ಸಿ.ಶಿವಕುಮಾರ್, ಸಂಪನ್ಮೂಲ ವ್ಯಕ್ತಿ ಶರತ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಗೆ ನಾಮಪತ್ರ ಸಲ್ಲಿಕೆ ಹಿನ್ನೆಲೆ

ಮನೆ ದೇವರು, ತಂದೆ ಸಮಾಧಿಗೆ ಪೂಜೆ ಸಲ್ಲಿಸಿದ ಮಧು ಜಿ.ಮಾದೇಗೌಡ



ಭಾರತೀನಗರ, ಮೇ 23(ಅಣ್ಣೂರು ಸತೀಶ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಗೆ ನಾಳೆ (ಮೇ 25) ನಾಮಪತ್ರ ಸಲ್ಲಿಕೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರು ಸೋಮವಾರ ಕಾರ್ಯಕರ್ತರೊಂದಿಗೆ ಮನೆ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಕಾರ್ಕಹಳ್ಳಿ ಶ್ರೀಬಸವೇಶ್ವರಸ್ವಾಮಿ ದೇವಾಲಯಕ್ಕೆ ಕುಟುಂಬ ಸಮೇತ ತೆರಳಿ ಪೂಜೆ ಸಲ್ಲಿಸಿ ಬಸವಪ್ಪನಿಂದ ಆಶೀರ್ವಾದ ಪಡೆದರು. ಇದಕ್ಕೂ ಮೊದಲು ಹನುಮಂತ ನಗರದ ಶ್ರೀಆತ್ಮಲಿಂಗೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ನಂತರ ದಿ.ಜಿ.ಮಾದೇಗೌಡರ ಸಮಾಧಿಗೂ ಪೂಜೆ ಸಲ್ಲಿಸಿ ತಂದೆ ಅವರ ಆಶೀರ್ವಾದ ಪಡೆದರು.

ನಂತರ ಮಾತನಾಡಿದ ಅವರು, ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದು, ಕಳೆದ ಕೆಲ ತಿಂಗಳಿಂದ ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಿಗೆ ತೆರಳಿ ಪದವೀಧರರನ್ನು ಸಂಪರ್ಕಿಸಿ ಮತಯಾಚಿಸಿದ್ದೇನೆ. ಜೊತೆಗೆ ಆಯಾ ಜಿಲ್ಲೆಗಳ ಕಾಂಗ್ರೆಸ್ ಶಾಸಕರು, ಕಾರ್ಯಕರ್ತರು, ಮುಖಂಡರು, ಸ್ಥಳೀಯ ಜನಪ್ರತಿನಿಧಿಗಳನ್ನು ಸಂಪರ್ಕಿಸಿ ಗೆಲುವಿಗೆ ಸಹಕರಿಸಬೇಕೆಂದು ಕೋರಿದ್ದೇನೆ. ರಾಜ್ಯದಲ್ಲಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಲು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪಕ್ಷ ಸಂಘಟನೆಗೆ ಮುಂದಾಗಿದ್ದಾರೆ ಎಂದರು.

60 ಸಾವಿರ ಪದವೀಧರರ ನೋಂದಣಿ: ದಕ್ಷಿಣ ಪದವೀಧರರ ಕ್ಷೇತ್ರದ 60 ಸಾವಿರಕ್ಕೂ ಹೆಚ್ಚು ಪದವೀಧರರನ್ನು ಕಾಂಗ್ರೆಸ್‌ನಿಂದ ನೋಂದಣಿ ಮಾಡಿಸಲಾಗಿದೆ. ಇವರನ್ನು ದೂರವಾಣಿ ಮೂಲಕ ಮತ್ತು ಖುದ್ದಾಗಿ ಸಂಪರ್ಕ ಮಾಡಲಾಗಿದೆ. ಮುಂದಿನ ದಿನಗಳಲ್ಲಿ 1.33 ಲಕ್ಷ ಪದವೀಧರರನ್ನು ಸಹ ಸಂಪರ್ಕಿಸಿ ಮತ ಕೇಳುವುದಾಗಿ ತಿಳಿಸಿದರು.

ತಂದೆ ಶ್ರೀರಕ್ಷೆ: ನಮ್ಮ ತಂದೆ ದಿ.ಜಿ.ಮಾದೇಗೌಡರು ಮಂಡ್ಯ ಜಿಲ್ಲೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಕೆ.ಎಂ.ದೊಡ್ಡಿ ಎಂಬ ಕುಗ್ರಾಮದಲ್ಲಿ ಭಾರತಿ ವಿದ್ಯಾಸಂಸ್ಥೆ ಕಟ್ಟಿ ಸಾವಿರಾರು ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದಾರೆ. ನಾನು ಯಾವ ಜಿಲ್ಲೆಗೆ ಹೋದರೂ ನಮ್ಮ ವಿದ್ಯಾಸಂಸ್ಥೆ ವಿದ್ಯಾರ್ಥಿಗಳು ಉನ್ನತ ಹುದ್ದೆಗಳನ್ನು ಅಲಂಕರಿಸಿರುವುದು ಕಾಣುತ್ತಿದೆ. ನನ್ನನ್ನು ಪ್ರೀತಿಯಾಗಿ ಮಾತನಾಡಿಸುತ್ತಿರುವುದು ಮತ್ತಷ್ಟು ಸಂತಸ ತಂದಿದೆ. ಹಾಗಾಗಿ ನನ್ನ ಗೆಲುವಿಗೆ ನಮ್ಮ ತಂದೆ ಶ್ರೀರಕ್ಷೆ ಇದೆ ಎಂದರು.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಗುರುಚರಣ್, ಕಾಂಗ್ರೆಸ್ ಮುಖಂಡ ವಿನಯ್ ರಾಮಕೃಷ್ಣ, ಆಶಯ್ ಮಧು ಮಾದೇಗೌಡ, ಭಾರತೀನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಲಿಂಗೇಗೌಡ, ಬಿಇಟಿ ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಸಿದ್ದೇಗೌಡ, ಬಸವೇಗೌಡ, ಜಿಪಂ ಮಾಜಿ ಸದಸ್ಯ ಪಾಪಣ್ಣ, ಮನ್‌ಮುಲ್ ಮಾಜಿ ನಿರ್ದೇಶಕ ಸತೀಶ್, ತಾಪಂ ಮಾಜಿ ಸದಸ್ಯ ಗಿರೀಶ್, ಭರತೇಶ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಆರ್.ಸಿದ್ದಪ್ಪ, ಗ್ರಾಪಂ ಸದಸ್ಯರು, ಕಾರ್ಯಕರ್ತರು, ಪದವೀಧರರು ಸೇರಿದಂತೆ ಹಲವರಿದ್ದರು.

ನಾಳೆ ನಾಮಪತ್ರ ಸಲ್ಲಿಕೆ

ಭಾರತೀನಗರ: ವಿಧಾನಪರಿಷತ್ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಮೈಸೂರಿನಲ್ಲಿ ಮೇ 25ರಂದು ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಭಾರತಿ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಬಿ.ಎಂ.ನಂಜೇಗೌಡ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಚುನಾವಣಾ ಪ್ರಚಾರ ಆರಂಭಗೊಂಡಿದ್ದು, ಮೇ 24 ರಂದು ಬೆಳಗ್ಗೆ 11 ಗಂಟೆಗೆ ಮಂಡ್ಯದ ಚಂದ್ರ ದರ್ಶನ್ ಕಲ್ಯಾಣ ಮಂಟಪದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ಆಯೋಜಿಸಲಾಗಿದೆ. ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪಾಲ್ಗೊಳ್ಳಲಿದ್ದಾರೆ ಎಂದರು.

ಮೇ 25ರಂದು ಮಧು ಜಿ.ಮಾದೇಗೌಡರು ಮೈಸೂರಿನಲ್ಲಿ ನಾಮಪತ್ರ ಸಲ್ಲಿಸಲಿದ್ದು, ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು.

ಚಿಕ್ಕಮಂಡ್ಯ ದ್ವಿಪಥ ರಸ್ತೆ ದುರಸ್ತಿಗೆ ಕ್ರಮ



ಮಂಡ್ಯ, ಮೇ 23– ನಗರದ ಚಿಕ್ಕಮಂಡ್ಯ ಕೆಎಚ್‌ಬಿ ಬಡಾವಣೆ ದ್ವಿಪಥ ರಸ್ತೆ ದುರಸ್ತಿಗೆ ಕ್ರಮ ವಹಿಸುವುದಾಗಿ ಸಂಸದ ಪ್ರತಾಪ್ ಸಿಂಹ ಭರವಸೆ ನೀಡಿದರು.

ಕೆಎಚ್‌ಬಿ ಬಡಾವಣೆಯಲ್ಲಿ ಅಧ್ವಾನಗೊಂಡಿರುವ ರಸ್ತೆ ಪರಿಶೀಲಿಸಿ ಮಾತನಾಡಿದ ಅವರು, ಮೈಸೂರು–ಬೆಂಗಳೂರು ಹೆದ್ದಾರಿ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಭರ್ತಿ ತುಂಬಿದ ಲಾರಿಗಳು ಸಾಮಗ್ರಿಯನ್ನು ಇದೇ ರಸ್ತೆಯಲ್ಲಿ ಸಾಗಿಸುತ್ತಿದ್ದರಿಂದ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಶೀಘ್ರ ರಸ್ತೆ ದುರಸ್ತಿಗೆ ಕ್ರಮ ವಹಿಸುವುದಾಗಿ ಹೇಳಿದರು.

ನಾಗಮಂಗಲ ರಸ್ತೆಗೆ ಸಂಪರ್ಕ ಕಲ್ಪಿಸುವ ಕೆಎಚ್‌ಬಿ ಬಡಾವಣೆಯ ದ್ವಿಪಥ ರಸ್ತೆಯನ್ನು ಡಿಬಿಎಲ್ ಅವರಿಂದ ದುರಸ್ತಿ ಮಾಡಿಸಲಾಗುವುದು ಎಂದ ಅವರು, ಇದೇ ವೇಳೆ ಸಂಬಂಧಪಟ್ಟ ಅಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ ರಸ್ತೆ ದುರಸ್ತಿ ಹಾಗೂ ನಾಲಾ ಏರಿ ಎತ್ತರಿಸಿ ಹಾಗೂ ಬಡಾವಣೆ ಮಧ್ಯೆ ಹಾದು ಹೋಗುವ ದೊಡ್ಡ ಹಳ್ಳವನ್ನು ಇಟಾಚಿ ಮೂಲಕ ಸ್ವಚ್ಛಗೊಳಿಸುವಂತೆ ಸೂಚಿಸಿದರು.

ಈ ವೇಳೆ ಬಿಜೆಪಿ ಮುಖಂಡ ಅಶೋಕ್ ಜಯರಾಂ, ಕೆಎಚ್‌ಬಿ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗೋವಿಂದರಾಜು, ಕಾರ್ಯದರ್ಶಿ ಕೆ.ಅಶೋಕ್, ಸಮಿತಿ ಸದಸ್ಯರಾದ ಹರೀಶ್, ರಾಜು, ಶ್ರೀಕಾಂತ್, ಜವರೇಗೌಡ ಸೇರಿದಂತೆ ಮತ್ತಿತರರಿದ್ದರು.

ತಾಲೂಕು ಕಚೇರಿ ಭ್ರಷ್ಟಾಚಾರ ಖಂಡಿಸಿ ಪ್ರತಿಭಟನೆ



ಶ್ರೀರಂಗಪಟ್ಟಣ, ಮೇ 23(ವಿನಯ್ ಕಾರೇಕುರ)– ಪಟ್ಟಣದ ತಾಲೂಕು ಕಚೇರಿ ಭ್ರಷ್ಟಾಚಾರ ಖಂಡಿಸಿ ತಾಲೂಕಿನ ವಿವಿಧ ಗ್ರಾಮಗಳ ರೈತರು ಸೋಮವಾರ ಪ್ರತಿಭಟನೆ ನಡೆಸಿದರು.

ರೈತ ಮುಖಂಡ ಕೆ.ಎಸ್.ನಂಜುಂಡೇಗೌಡರ ನೇತೃತ್ವದಲ್ಲಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿದ ರೈತರು, ಭೂ ಮಾಪನ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಮಾತನಾಡಿದ ರೈತ ಮುಖಂಡ ಕೆ.ಎಸ್. ನಂಜುಂಡೇಗೌಡ, ಇಲ್ಲಿನ ಭೂ ಮಾಪನ ಇಲಾಖೆಯಲ್ಲಿ ಅಧಿಕಾರಿಗಳ ಗೈರು ಸರ್ವೇ ಸಾಮಾನ್ಯವಾಗಿದೆ. ಒಂದು ಸಣ್ಣ ಕೆಲಸ ಮಾಡಿಕೊಡಲು ಅಧಿಕಾರಿಗಳು ರೈತರನ್ನು ವರ್ಷಗಟ್ಟಲೇ ಕಚೇರಿಗೆ ಅಲೆಸುತ್ತಾರೆ. ಉಳ್ಳವರ ಕೆಲಸ ಮಾಡಿಕೊಡುವ ಅಧಿಕಾರಿಗಳು ರೈತರ ಕೆಲಸ ಮಾಡಿಕೊಡದೇ ಕರ್ತವ್ಯ ಲೋಪ ಎಸಗಿದ್ದಾರೆ. ಕೆಲಸದ ವೇಳೆ ಅಧಿಕಾರಿಗಳು, ಮದುವೆ, ಗೃಹಪ್ರವೇಶ ಇನ್ನಿತರ ಸಭೆ ಸಮಾರಂಭಗಳಿಗೆ ತೆರಳಿ ದೂರದೂರಿನಿಂದ ಬರುವ ರೈತರು, ಬಡವರು ವೃದ್ಧರು ಅಂಗವಿಕಲರನ್ನು ಅಲೆಸುತ್ತಾರೆ. ಅಲ್ಲದೇ ಅಧಿಕಾರಿಗಳು ಸರ್ಕಾರಿ ನಿಯಮವನ್ನು ಗಾಳಿಗೆ ತೂರಿದ್ದಾರೆ ಎಂದು ಆರೋಪಿಸಿದ ಅವರು ಇಲ್ಲಿನ ತಾಲೂಕು ಕಚೇರಿಯಲ್ಲಿ ಭ್ರಷ್ಟಾಚಾರದ ಹಾವಳಿ ಮಿತಿ ಮೀರಿದೆ ಎಂದು ಆರೋಪಿಸಿದರು.

ನಂತರ ತಹಸೀಲ್ದಾರ್ ಕಚೇರಿಗೆ ಭೇಟಿ ನೀಡಿ ತಹಸೀಲ್ದಾರ್ ಶ್ವೇತ ಎನ್.ರವೀಂದ್ರ ಅವರನ್ನು ಭೇಟಿ ಮಾಡಿ, ಒಂದು ಪೌತಿ ಖಾತೆ ಮಾಡಿಕೊಲು ಅಧಿಕಾರಿಗಳು 50 ರಿಂದ ಲಕ್ಷ ರೂ.ವರೆಗೆ ಲಂಚದ ಬೇಡಿಕೆ ಇಡುತ್ತಿರುವ ಬಗ್ಗೆ ರೈತರಿಂದ ದೂರು ಕೇಳಿ ಬಂದಿದೆ. ಆದ್ದರಿಂದ ಅಂತಹ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ ಅವರು, ತಾಲೂಕು ಕಚೇರಿಗೆ ಬರುವ ಸಾರ್ವಜನಿಕರು ಕೂರಲು ಖುರ್ಚಿ, ಶೌಚಾಲಯ, ಕುಡಿಯಲು ನೀರು ಸೇರಿದಂತೆ ಇನ್ನಿತರ ಮೂಲ ಸೌಕರ್ಯ ಕಲ್ಪಿಸುವಂತೆ ಮನವಿ ಮಾಡಿದರು. ಇದೇ ವೇಳೆ ತಾಲೂಕಿನ ನೂರಾರು ರೈತರಿದ್ದರು.

ಪ್ರಜಾಪ್ರಭುತ್ವ ವ್ಯವಸ್ಥೆಗೆ ಮೌಲ್ಯ ತಂದುಕೊಟ್ಟ ಮಾಜಿ ಸ್ಪೀಕರ್ ಕೃಷ್ಣ

ಮೊದಲ ವರ್ಷದ ಪುಣ್ಯಸ್ಮರಣೆಯಲ್ಲಿ ಸಚಿವ ಡಾ.ನಾರಾಯಣಗೌಡ



ಕೆಆರ್.ಪೇಟೆ, ಮೇ 23– ಮಾಜಿ ಸ್ಪೀಕರ್ ಕೃಷ್ಣ ಅವರು ಸಜ್ಜನ ರಾಜಕಾರಣಿಯಾಗಿ ರಾಜಕೀಯ ಕ್ಷೇತ್ರಕ್ಕೆ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮೌಲ್ಯ ತಂದುಕೊಟ್ಟ ಮಂಡ್ಯದ ಗಾಂಧಿಯಾಗಿದ್ದಾರೆ. ಕೆಲವರು ಬದುಕಿದ್ದು ಸತ್ತಂತಿರುತ್ತಾರೆ. ಆದರೆ ಕೃಷ್ಣ ಅವರು ಸತ್ತ ಮೇಲೂ ಜನಮಾನಸದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ ಎಂದು ಸಚಿವ ಡಾ.ನಾರಾಯಣಗೌಡ ಬಣ್ಣಿಸಿದರು.

ತಾಲೂಕಿನ ಅಗ್ರಹಾರಬಾಚಹಳ್ಳಿ ಗೇಟ್ ಬಳಿಯ ಜಯಮ್ಮ ರಾಮಸ್ವಾಮಿ ಸಮುದಾಯ ಭವನದಲ್ಲಿ ಕೃಷ್ಣ ಪ್ರತಿಷ್ಠಾನ ಹಾಗೂ ಕೃಷ್ಣ ಅಭಿಮಾನಿಗಳ ಬಳಗ ಹಮ್ಮಿಕೊಂಡಿದ್ದ ಮಾಜಿ ಸ್ಪೀಕರ್ ಕೃಷ್ಣ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಹಾಗೂ ನುಡಿನಮನ ಕಾರ್ಯಕ್ರಮದಲ್ಲಿ ಕೃಷ್ಣ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಕೃಷ್ಣ ಅವರು ಪ್ರಜಾಪ್ರಭುತ್ವದ ಉಳಿವಿಗೆ ಹಾಗೂ ಭ್ರಷ್ಟಾಚಾರದ ನಿರ್ಮೂಲನೆಗೆ ಹೋರಾಟ ನಡೆಸಿ ನುಡಿದಂತೆ ನಡೆದ ಧೀಮಂತ ರಾಜಕಾರಣಿ. ಅವರಿಂದಾಗಿ ಕೆ.ಆರ್.ಪೇಟೆ ಗೌರವ ಹೆಚ್ಚಾಯಿತು. ಕೃಷ್ಣ ಅವರ ಹೆಸರನ್ನು ಚಿರಸ್ಥಾಯಿಯನ್ನಾಗಿಸುವ ನಿಟ್ಟಿನಲ್ಲಿ ಕೆ.ಆರ್.ಪೇಟೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗೆ ಕೃಷ್ಣ ಅವರ ಹೆಸರನ್ನಿಟ್ಟು ಅವರ ಪುತ್ಥಳಿಯನ್ನು ಕಾಲೇಜಿನ ಆವರಣದಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳುತ್ತೇನೆ. ಕೃಷ್ಣ ಪ್ರತಿಷ್ಠಾನದ ಶೈಕ್ಷಣಿಕ ಚಟುವಟಿಕೆ ಕಾರ್ಯಗತಗೊಳಿಸಲು ಅನುಕೂಲವಾಗುವಂತೆ ನನ್ನ ತಂದೆ ತಾಯಿ ಹೆಸರಿನಲ್ಲಿ ವೈಯಕ್ತಿಕವಾಗಿ 5 ಲಕ್ಷ ರೂ. ನೀಡುತ್ತೇನೆ ಎಂದು ಘೋಷಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ನನ್ನಂತ ರಾಜಕಾರಣಿಗಳಿಗೆ ಆದರ್ಶವಾಗಿದ್ದ ಕೃಷ್ಣ ಅವರು ಗಾಂಧಿವಾದಿಗಳಾಗಿದ್ದು ಜಿಲ್ಲೆಯ ಕೀರ್ತಿ ಬೆಳಗಿದ ಮಹಾಪುರುಷ. ಯುವಕರು ಕೃಷ್ಣ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಶಾಸಕ ಎ.ಟಿ.ರಾಮಸ್ವಾಮಿ, ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಮಾತನಾಡಿದರು. ಮಾಜಿ ಶಾಸಕರಾದ ರಮೇಶಬಾಬು, ಬಿ.ಪ್ರಕಾಶ್, ಮೂಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ. ಅಶೋಕ್, ಮನ್‌ಮುಲ್ ನಿರ್ದೇಶಕ ಹೆಚ್.ಟಿ. ಮಂಜು, ಡಾಲು ರವಿ, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಪತ್ರಕರ್ತ ರಾಮೇಗೌಡ, ಕೆಯುಐಡಿಎಫ್‌ಸಿ ನಿಗಮದ ಮಾಜಿ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ, ಸಮಾಜ ಸೇವಕ ವಿಜಯರಾಮೇಗೌಡ, ಬಸ್ ಕೃಷ್ಣೇಗೌಡ, ಕೃಷ್ಣ ಅಭಿಮಾನಿ ಬಳಗದ ಜವರಾಯಿಗೌಡ, ಬಿ.ಎಂ.ರಾಮಚಂದ್ರ್, ನಾಗರಾಜು, ಮಂಜುನಾಥ್, ಅಂಬರೀಶ್, ಎಂ.ಬಿ. ಹರೀಶ್, ವಿ.ಡಿ.ಹರೀಶ್, ಪರಮೇಶ್, ಜಯಣ್ಣ, ಎಂ.ಡಿ.ದೊಡ್ಡಸ್ವಾಮೀಗೌಡ, ಕೆ.ಟಿ.ಚಂದ್ರೇಗೌಡ, ಯು.ಧನಂಜಯ, ಮಹಾದೇವೇಗೌಡ, ಅಶೋಕ್, ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಜವರಾಯಿಗೌಡ, ಪದಾಧಿಕಾರಿಗಳಾದ ವಾಸು, ಅಂಚಿ ಸಣ್ಣಸ್ವಾಮಿಗೌಡ, ಆರ್.ಎಸ್. ಶಿವರಾಮೇಗೌಡ, ಬಿ.ಜವರಾಯಿಗೌಡ, ರಮೇಶ್, ಶಿವಣ್ಣ, ಡಿ.ಆರ್.ವೆಂಕಟೇಶ್, ಚೆಲುವೇಗೌಡ, ಎಂ.ಪಿ.ಲೋಕೇಶ್, ಬಲರಾಂ, ಕೃಷ್ಣರವರ ಪತ್ನಿ ಇಂದಿರಮ್ಮ, ಅಳಿಯ ಶ್ರೀಧರ್, ಪುತ್ರಿ ಮಂಜುಳಾ, ಡಿ.ಪಿ. ಪರಮೇಶ್ ಸೇರಿದಂತೆ ಇತರರಿದ್ದರು.

ಹತ್ಯೆಗೊಳಗಾದ ಮೋಹನ್ ಕುಟುಂಬಕ್ಕೆ ನೆರವು



ನಾಗಮಂಗಲ, ಮೇ 23– ಇತ್ತೀಚೆಗೆ ಹತ್ಯೆಗೊಳಗಾದ ತಾಲೂಕಿನ ನರಗಲು ಗ್ರಾಮದ ರೈತ ಎನ್.ಆರ್.ಮೋಹನ್ ಪತ್ನಿ ಯಮುನಾ ಅವರಿಗೆ ಮಲ್ಲನಕೊಪ್ಪಲಿನ ಉದ್ಯಮಿ, ಸಮಾಜ ಸೇವಕ ಫೈಟರ್ ರವಿ ಲಕ್ಷ ರೂ. ನೆರವು ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಈ ವೇಳೆ ಮಾತನಾಡಿದ ಅವರು, ಈ ಪ್ರಕರಣದಲ್ಲಿ ಪೊಲೀಸರ ನಿರ್ಲಕ್ಷ್ಯತೆ ಎದ್ದು ಕಾಣುತ್ತಿದ್ದು, ಕಾಣದ ಕೈಗಳ ಕೈವಾಡವಿರಬಹುದು ಎಂಬ ಶಂಕೆ ಇದೆ. ಹೀಗಾಗಿ ಪೊಲೀಸರ ವಿಶೇಷ ತಂಡ ಪಾರದರ್ಶಕ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮ ವಹಿಸಬೇಕು ಎಂದರಲ್ಲದೇ ಹತ್ಯೆಗೀಡಾದ ಮೋಹನ್‌ನ ಇಬ್ಬರೂ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಾಗಿ ಭರವಸೆ ನೀಡಿದರು. ಈ ವೇಳೆ ಪತ್ರಕರ್ತ ಶ್ರೀನಿವಾಸ್, ಸಿ.ಜೆ.ಕುಮಾರ್, ಪವನ್, ಪುನೀತ್‌ಗೌಡ, ಮಂಜುನಾಥ್, ಸೋಮು, ಕಂಸ ಕುಮಾರ್ ಇನ್ನಿತರರಿದ್ದರು.



ಭಾನುವಾರ 55ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಶಾಸಕ ರಮೇಶ್ ಬಂಡಿ ಸಿದ್ದೇಗೌಡರಿಗೆ ಶ್ರೀರಂಗಪಟ್ಟಣ ತಾಲೂಕಿನ ಅರಕೆರೆಯಲ್ಲಿ ಅಭಿಮಾನಿಗಳು ಹುಟ್ಟುಹಬ್ಬದ ಶುಭ ಕೋರಿ ಅಭಿನಂದಿಸಿದರು. ಈ ವೇಳೆ ಅಭಿಮಾನಿಗಳಾದ ಕಾಂತರಾಜು, ಹರೀಶ್, ಬಸವರಾಜು, ಹರಿ ಕುಮಾರ್, ರಾಜೇಂದ್ರ ಇತರರಿದ್ದರು.

ನ್ಯಾಯಾಧೀಶರ ವಿರುದ್ಧದ ದಾಳಿಗೆ 'ಸುಪ್ರೀಂ' ಖಂಡನೆ

ನವದೆಹಲಿ, ಮೇ 23– ನ್ಯಾಯಾಧೀಶರ ವಿರುದ್ಧ ಆರೋಪ ಮಾಡುವುದು ದುರದೃಷ್ಟವಶಾತ್ ಈಗ ಹೊಸ ಫ್ಯಾಶನ್ ಆಗುತ್ತಿದೆ. ನ್ಯಾಯಾಧೀಶರು ಗಟ್ಟಿಗರಾದಷ್ಟೂ ಅವರ ವಿರುದ್ಧ ಆರೋಪಗಳು ಹೆಚ್ಚಾಗುತ್ತವೆ ಎಂದು ಸುಪ್ರೀಂಕೋರ್ಟ್ ಸೋಮವಾರ ವಕೀಲರ ವಿರುದ್ಧ ಕಿಡಿಕಾರಿದೆ.

ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ತಪ್ಪಿತಸ್ಥರಾದ ವಕೀಲ ಪಿ.ಆರ್. ಆದಿಕೇಶವನ್ ಅವರಿಗೆ ಎರಡು ವಾರಗಳ ಸಾದಾ ಜೈಲು ಶಿಕ್ಷೆ ಮತ್ತು ರೂ. 2 ಸಾವಿರ ದಂಡದ ಜೊತೆಗೆ ಒಂದು ವರ್ಷ ವಕಾಲತ್ತು ವಹಿಸದಂತೆ ಕಳೆದ ಮಾರ್ಚ್‌ನಲ್ಲಿ ಶಿಕ್ಷೆ ವಿಧಿಸಿದ ಮದ್ರಾಸ್ ಹೈಕೋರ್ಟ್ ತೀರ್ಪಿನ ವಿರುದ್ಧದ ಮನವಿ ಪರಿಗಣಿಸಲು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಬೇಲಾ ಎಂ. ತ್ರಿವೇದಿ ಅವರಿದ್ದ ಪೀಠ ನಿರಾಕರಿಸಿತು. ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸುವುದಿಲ್ಲವೆಂದು ಖಡಕ್ಕಾಗಿ ಹೇಳಿತು.

ಜಿಲ್ಲಾ ನ್ಯಾಯಾಲಯಗಳಲ್ಲಿ ತಮ್ಮ ರಕ್ಷಣೆಗೆ ಪೊಲೀಸರು ಲಭ್ಯರಿಲ್ಲದೇ ಕೆಲವೊಮ್ಮೆ ಹಲ್ಲೆಗೂ ಒಳಗಾದ ನ್ಯಾಯಾಧೀಶರ ವಿರುದ್ಧ ವಕೀಲರು ವಿನಾಕಾರಣ ಆರೋಪ ಹೊರಿಸುವ ಚಾಳಿ ದೇಶದಾದ್ಯಂತ ನಡೆಯುತ್ತಿದೆ. ಇಂತಹ ಚಾಳಿ ಉತ್ತರ ಪ್ರದೇಶದಲ್ಲಿ ಹೆಚ್ಚಿದೆ. ಈಗ ಇದು ಬಾಂಬೆ ಹೈಕೋರ್ಟ್ ಮತ್ತು ಮದ್ರಾಸ್ ಹೈಕೋರ್ಟ್‌ನಲ್ಲಿಯೂ ವ್ಯಾಪಕವಾಗುತ್ತಿದೆ. ನೀವು (ವಕೀಲರು) ನ್ಯಾಯಾಧೀಶರ ಮೇಲೆ ಅನಗತ್ಯ ಆರೋಪ ಮಾಡಬಾರದು. ನೀವು ಸಹ ಕಾನೂನಿಗೆ ಅತೀತರಲ್ಲ ಎಂದು ಪೀಠ ಚಾಟಿ ಬೀಸಿತು.

ಮದ್ರಾಸ್ ಹೈಕೋರ್ಟ್ ನ್ಯಾಯಾಧೀಶರ ಏಕ ಸದಸ್ಯ ಪೀಠವು, ಮೇಲ್ಮನವಿದಾರ ವಕೀಲರ ವಿರುದ್ಧ ಹೊರಡಿಸಿದ ಜಾಮೀನು ರಹಿತ ವಾರೆಂಟ್ ನೀಡಲು ಹೋದ ಪೊಲೀಸರಿಗೂ ಕರ್ತವ್ಯಕ್ಕೆ ನೂರಾರು ವಕೀಲರೊಂದಿಗೆ ಅಡ್ಡಿಪಡಿಸಿ, ನೋಟಿಸ್ ನೀಡದಂತೆ ತಡೆದಿದ್ದಾರೆ. ಇದನ್ನು ಸಾಬೀತುಪಡಿಸುವ ಸಿಸಿ ಟಿವಿ ದೃಶ್ಯಗಳೂ ಇವೆ. ಮೇಲ್ಮನವಿದಾರರು ಸಂಪೂರ್ಣ ಸರಿಪಡಿಸಲಾಗದ ವಕೀಲರ ವರ್ಗಕ್ಕೆ ಸೇರಿದವರು ಮತ್ತು ಅವರು ವಕೀಲ ವೃತ್ತಿಗೆ ಕಳಂಕ. ನ್ಯಾಯಾಂಗದಲ್ಲಿ ಅವರಿಗೆ ಯಾವುದೇ ಗೌರವವಿಲ್ಲ. ಅವರ ವಿರುದ್ಧದ ಶಿಕ್ಷೆಯನ್ನು ಅಸಮಂಜಸವೆಂದು ಪರಿಗಣಿಸಲಾಗದು ಎಂದು ಪೀಠ ಕಟುವಾಗಿ ಹೇಳಿತು.

ನವಜೋತ್ ಸಿಂಗ್ ಸಿಧು ಜೈಲಿಂದ ಆಸ್ಪತ್ರೆಗೆ ಶಿಫ್ಟ್: ವಿಶೇಷ ಆಹಾರ ಕೇಳಿದ ಕಾಂಗ್ರೆಸ್ ನಾಯಕ

ಪಟಿಯಾಲ, ಮೇ 23– 1988ರ ರೋಡ್ ರೇಜ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಜಾಬ್‌ನ ಪಟಿಯಾಲಾ ಕೇಂದ್ರ ಕಾರಾಗೃಹದಲ್ಲಿ ಒಂದು ವರ್ಷ ಜೈಲು ಶಿಕ್ಷೆ ಅನುಭವಿಸುತ್ತಿರುವ ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಅವರನ್ನು ಸೋಮವಾರ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿದೆ. ಅವರನ್ನು ವೈದ್ಯಕೀಯ ಪರೀಕ್ಷೆಗಾಗಿ ಸೋಮವಾರ ಬೆಳಗ್ಗೆ ಭಾರೀ ಭದ್ರತೆಯಲ್ಲಿ ಪಟಿಯಾಲಾದ ರಾಜೇಂದ್ರ ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ನವಜೋತ್ ಸಿಧು ಜೈಲಿನಲ್ಲಿ ವಿಶೇಷ ಆಹಾರಕ್ರಮವನ್ನು ಬಯಸಿದ್ದಾರೆ ಎಂದು ಕ್ರಿಕೆಟಿಗ–ರಾಜಕಾರಣಿಯ ವಕೀಲ ಎಚ್‌ಪಿಎಸ್ ವರ್ಮಾ ಅವರು ಹೇಳಿದ್ದಾರೆ. ವೈದ್ಯರ ತಂಡ ಆಸ್ಪತ್ರೆಯಲ್ಲಿ ನವಜೋತ್ ಸಿಧು ಅವರ ವಿವರವಾದ ವೈದ್ಯಕೀಯ ಪರೀಕ್ಷೆಯನ್ನು ನಡೆಸುತ್ತದೆ ಎಂದು ಅವರು ತಿಳಿಸಿದ್ದಾರೆ.

ವೈದ್ಯರ ತಂಡ ಯಾವ ವಿಶೇಷ ಆಹಾರದ ಅಗತ್ಯವಿದೆ ಎಂಬುದನ್ನು ನೋಡುತ್ತದೆ ಮತ್ತು ನಂತರ ಅದು ಸ್ಥಳೀಯ ನ್ಯಾಯಾಲಯದಲ್ಲಿ (ಪಟಿಯಾಲದಲ್ಲಿ) ತನ್ನ ವರದಿಯನ್ನು ಸಲ್ಲಿಸುತ್ತದೆ ಎಂದು ಸಿಧು ಪರ ವಕೀಲರು ಹೇಳಿದ್ದಾರೆ.

ವಕೀಲರ ಪ್ರಕಾರ, ನವಜೋತ್ ಸಿಧು ಗೋಧಿ, ಸಕ್ಕರೆ, ಮೈದಾ ಮತ್ತು ಇತರ ಕೆಲವು ಆಹಾರ ಪದಾರ್ಥಗಳನ್ನು ಸೇವಿಸುವಂತಿಲ್ಲ. ಅವರು ಹಣ್ಣುಗಳು, ಪಪ್ಪಾಯಿ, ಪೇರಲ, ಡಬಲ್ ಟೋನ್ಡ್ ಹಾಲು, ಫೈಬರ್ ಮತ್ತು ಕಾರ್ಬೋಹೈಡ್ರೇಟ್‌ಗಳನ್ನು ಹೊಂದಿರದ ಆಹಾರ ಪದಾರ್ಥಗಳನ್ನು ಸೇವಿಸಬಹುದು ಎಂದಿದ್ದಾರೆ.

58 ವರ್ಷ ವಯಸ್ಸಿನ ಕಾಂಗ್ರೆಸ್ ನಾಯಕ ಎಂಬಾಲಿಸಮ್‌ನಂತಹ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ ಮತ್ತು ಯಕೃತ್ತಿನ ಕಾಯಿಲೆಯನ್ನು ಹೊಂದಿದ್ದಾರೆ. 2015ರಲ್ಲಿ ನವಜೋತ್ ಸಿಂಗ್ ಸಿಧು ಅವರು ದೆಹಲಿಯ ಆಸ್ಪತ್ರೆಯಲ್ಲಿ ತೀವ್ರವಾದ ರಕ್ತನಾಳದ ಥ್ರಂಬೋಸಿಸ್ (ಡಿವಿಟಿ) ಗಾಗಿ ಚಿಕಿತ್ಸೆಗೆ ಒಳಗಾಗಿದ್ದರು. ಡಿವಿಟಿ ರಕ್ತನಾಳದಲ್ಲಿ ರಕ್ತ ಹೆಪ್ಪುಗಟ್ಟುವಿಕೆಯಿಂದ ಉಂಟಾಗುತ್ತದೆ, ಇದು ಸಾಮಾನ್ಯ ರಕ್ತದ ಹರಿವನ್ನು ತಡೆಯುತ್ತದೆ.

ಸಿಧು ಅವರನ್ನು ಕರೆತಂದ ನಂತರ ಹಲವಾರು ಕಾಂಗ್ರೆಸ್ ಬೆಂಬಲಿಗರು, ರಾಜೇಂದ್ರ ಆಸ್ಪತ್ರೆಗೆ ಧಾವಿಸಿದರು. ಮೇ 20 ರಂದು ಪಂಜಾಬ್ ಮಾಜಿ ಕಾಂಗ್ರೆಸ್ ಮುಖ್ಯಸ್ಥರು ಸ್ಥಳೀಯ ನ್ಯಾಯಾಲಯದ ಮುಂದೆ ಶರಣಾದ ನಂತರ ಪಟಿಯಾಲ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಯಿತು. 1988 ರ ರೋಡ್ ರೇಜ್ ಸಾವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಅವರಿಗೆ ಒಂದು ವರ್ಷದ ಕಠಿಣ ಜೈಲು ಶಿಕ್ಷೆ ವಿಧಿಸಿದೆ.

ಲೋಕ ಕಲ್ಯಾಣ, ವಿಶ್ವಶಾಂತಿಗಾಗಿ ಅಹಿಂಸಾ ಮಾರ್ಗ ಅನುಸರಿಸಿ: ಗೆಹ್ಲೋಟ್



ಬೆಂಗಳೂರು, ಮೇ 23– ಲೋಕ ಕಲ್ಯಾಣ ಮತ್ತು ವಿಶ್ವಶಾಂತಿಗಾಗಿ ದೇಶದ ಪ್ರತಿಯೊಬ್ಬ ನಾಗರಿಕನೂ ಅಹಿಂಸಾ ಮಾರ್ಗ ಅನುಸರಿಸಬೇಕು ಎಂದು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಕರೆ ನೀಡಿದ್ದಾರೆ.

ನಗರದ ಚಿಕ್ಕಪೇಟೆಯಲ್ಲಿರುವ ಉದಯ ಭಾನು ಸಾರ್ವಜನಿಕ ಆಟದ ಮೈದಾನದಲ್ಲಿ ಜೈನ ಸಮುದಾಯದ ವತಿಯಿಂದ ಆಯೋಜಿಸಲಾಗಿದ್ದ ಸದ್ಗುರು ಸಮಾಗಮ, ರಾಜೋಹರಣ್ ಉತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಅಹಿಂಸಾ ಮಾರ್ಗ ಅನುಸರಿಸುವ ಮೂಲಕ ಶಾಂತಿ ಸಮಾಜ ನಿರ್ಮಾಣಕ್ಕೆ ಶ್ರಮಿಸಬೇಕು ಎಂದಿದ್ದಾರೆ.

ಜೈನ ಸಮಾಜವು ಮಾನವ ಸೇವೆಯ ಜೊತೆಗೆ ಅನೇಕ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ನೈತಿಕ, ದತ್ತಿ ಕಾರ್ಯಗಳ ಮೂಲಕ ಜೈನ ಧರ್ಮದ ಕೊನೆಯ ತೀರ್ಥಂಕರರಾದ ಮಹಾವೀರರ 'ಬದುಕು ಮತ್ತು ಬದುಕಲು ಬಿಡಿ? ಎಂಬ ಅಮರ ಸಂದೇಶವನ್ನು ಈಡೇರಿಸುತ್ತಿದೆ ಎಂದು ಹೇಳಿದ್ದಾರೆ.

ಜೈನ ಸಮಾಜದ ಗುರುಗಳ ಪ್ರವಚನಗಳಿಂದ ಪ್ರೇರಣೆ ಪಡೆದು ಮಾನವ ಸೇವೆ ಮಾಡುತ್ತಿರುವುದು ಸಂತಸದ ಸಂಗತಿ. ಧೀಕ್ಷೆ ಪಡೆದವರು ಕ್ರೋಧ, ಅಹಂಕಾರ, ಮೋಸ, ಆಸೆ ಇತ್ಯಾದಿಗಳನ್ನು ಜಯಿಸುತ್ತಿದ್ದಾರೆ. ಈ ಆದರ್ಶಗಳನ್ನು ಅನುಸರಿಸಲು 11 ಜನರು ರಾಜೋಹರಣ ಉತ್ಸವದಲ್ಲಿ ದೀಕ್ಷೆ ತೆಗೆದುಕೊಳ್ಳುತ್ತಿರುವುದು ಪುಣ್ಯದ ಕೆಲಸವಾಗಿದೆ ಎಂದು ಶ್ಲಾಘಿಸಿದ್ದಾರೆ.

ಅಹಿಂಸೆಯ ಬೆಳಕನ್ನು ಜಾಗೃತಗೊಳಿಸುವ ಮಹತ್ತರವಾದ ಕೆಲಸವನ್ನು ನಾವೆಲ್ಲರೂ ಮಾಡಬೇಕಾಗಿದೆ. ಅಹಿಂಸೆ ತತ್ವ ಪಾಲಿಸುವ ಮೂಲಕ ಶಾಂತಿ ಸಮಾಜ ನಿರ್ಮಿಸಬಹುದು. ಭಾರತದಲ್ಲಿ ಇಂದಿಗೂ ಕೆಲವು ಜ್ವಲಂತ ಸಮಸ್ಯೆಗಳಿವೆ. ಅವುಗಳನ್ನು ಬಗೆಹರಿಸಲು ಅಹಿಂಸಾ ಮಾರ್ಗ ಅನುಸರಿಸಬೇಕು. ವಸುಧೈವ ಕುಟುಂಬಕಂ (ಬ್ರಹ್ಮಾಂಡ ಪರಿವಾರ), ಸರ್ವೇ ಜನೋ ಸುಖಿನೋ ಭವಂತು, ಸರ್ವೇ ಸಂತು ಮಾರ್ಗಗಳನ್ನು ಅನುಸರಿಸಬೇಕಿದೆ. ಲೋಕ ಕಲ್ಯಾಣ ಮತ್ತು ವಿಶ್ವಶಾಂತಿಗಾಗಿ ಮುನ್ನಡೆಯಲು ರಾಷ್ಟ್ರವ್ಯಾಪಿ ಅಹಿಂಸಾ ಮಾರ್ಗವನ್ನು ಅನುಸರಿಸಬೇಕು ಎಂದು ಒತ್ತಿ ಹೇಳಿದ್ದಾರೆ.

ಶ್ರೀ ವರ್ಧಮಾನ್ ಸಾಗರ್ ಸುರೀಶ್ವರ್ ಮಹಾರಾಜ್, ವಿಜಯ್ ನರರತ್ನ ಸುರೀಶ್ವರ್ ಮಹಾರಾಜ್ ಸಾಹಿಬ್, ಸಚಿವ ಬಿ.ಸಿ.ನಾಗೇಶ್, ಸಂಸದ ಪಿ.ಸಿ.ಮೋಹನ್, ಶಾಸಕರಾದ ಉದಯ ಗರುಡಾಚಾರ್, ಜಮೀರ್ ಅಹ್ಮದ್ ಮೊದಲಾದವರು ಪಾಲ್ಗೊಂಡಿದ್ದರು.

ಪ್ರಥಮ ಪಿಯುಸಿ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಮೈಸೂರು, ಮೇ 23– ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ(ಕ್ರೈಸ್)ದ ಅಧೀನದಲ್ಲಿ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ಮೈಸೂರು ತಾಲೂಕಿನ ವರಕೋಡು ವಸತಿ ವಿಜ್ಞಾನ ಕಾಲೇಜು, ನಂಜನಗೂಡು ತಾಲ್ಲೂಕಿನ ಹೊಸಕೋಟೆಯ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಕಾಲೇಜು, ತಗಡೂರಿನ ಅಟಲ್ ಬಿಹಾರಿ ವಾಜ ಪೇಯಿ ವಸತಿ ಶಾಲೆ, ಹೆಚ್.ಡಿ.ಕೋಟೆ ತಾಲೂಕಿನ ಸೊಳ್ಳೇಪುರದ ಏಕಲವ್ಯ ಮಾದರಿ ವಸತಿ ಕಾಲೇಜು ಈ ಕಾಲೇಜುಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ 2022–23 ನೆ ಸಾಲಿಗೆ ಪ್ರಥಮ ಪಿಯುಸಿ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, SATS NO, ಆಧಾರ್ ಕಾರ್ಡ್ ಪ್ರತಿ, 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಕ್ರೈಸ್ ವಸತಿ ಶಾಲೆಯಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ. ಕ್ರೈಸ್ ವಸತಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಮಾಹಿತಿಗಾಗಿ ಹತ್ತಿರದ ಯಾವುದಾದರೂ ಕ್ರೈಸ್ ವಸತಿ ಶಾಲೆಯನ್ನು ಸಂಪರ್ಕಿಸಿ ಅಥವಾ ಮೊ.ಸಂ: 9108539913, 9591823318, 9008283837 ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ದೆಹಲಿ ನೂತನ ಲೆ.ಗವರ್ನರ್ ಆಗಿ ವಿನೈ ಕುಮಾರ್ ಸಕ್ಸೇನಾ



ನವದೆಹಲಿ, ಮೇ 23– ಅನಿಲ್ ಬೈಜಾಲ್ ರಾಜೀನಾಮೆಯಿಂದ ತೆರವಾಗಿದ್ದ ದೆಹಲಿ ಲೆಫ್ಟಿನೆಂಟ್ ಗವರ್ನರ್ ಸ್ಥಾನಕ್ಕೆ ಇದೀಗ ವಿನೈ ಕುಮಾರ್ ಸಕ್ಸೇನಾ ಅವರನ್ನು ನೇಮಕ ಮಾಡಲಾಗಿದೆ. ಅನಿಲ್ ಬೈಜಾಲ್ ರಾಜೀನಾಮೆಯನ್ನು ಅಂಗೀಕರಿಸಿದ ರಾಷ್ಟ್ರಪತಿ ರಾಮನಾಥ್ ಕೋವಿಂದ್, ವಿನೈ ಕುಮಾರ್ ಸಕ್ಸೇನಾ ಅವರನ್ನು ನೂತನ ಲೆಫ್ಟಿನೆಂಟ್ ಗವರ್ನರ್ ಆಗಿ ನೇಮಕ ಮಾಡಿದೆ.

ಮೇ 18 ರಂದು ಅನಿಲ್ ಬೈಜಾಲ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ವೈಯುಕ್ತಿ ಕಾರಣ ನೀಡಿ ರಾಜೀನಾಮೆ ನೀಡಿದ್ದರು. ಇದೀಗ ನೂತನವಾಗಿ ನೇಮಕಗೊಂಡಿರುವ ವಿನೈ ಕುಮಾರ್ ಸಕ್ಸೇನ್ ಶೀಘ್ರದಲ್ಲೇ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ.

ಮಾರ್ಚ್ 23, 1958ರಲ್ಲಿ ಹುಟ್ಟಿದ ವಿನೈ ಕುಮಾರ್ ಸಕ್ಸೇನಾ, ಸದ್ಯ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಾನ್ಪುರ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಯಾಗಿರುವ ವಿನೈ ಕುಮಾರ್ ಸಕ್ಸೇನಾ, ಪೈಲೆಟ್ ಲೆಸೆನ್ಸ್ ಹೊಂದಿದ್ದಾರೆ. ಭಾರತದ 75ನೇ ವಾರ್ಷಿಕೋತ್ಸವದ ಸ್ಮರಣಾರ್ಥ ಸಮಿತಿಯ ಸದಸ್ಯರಾಗಿದ್ದರು.

ಪಿರಿಯಾಪಟ್ಟಣದಲ್ಲಿ ಬಿಜೆಪಿ ಮುಖಂಡರ ಜಟಾಪಟಿ: ಭಾರೀ ಗದ್ದಲ

ಪಿರಿಯಾಪಟ್ಟಣ, ಮೇ 23– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಸಂಬಂಧ ಪಟ್ಟಣದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಬಿಜೆಪಿಯ ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಪಕ್ಷದ ಜಿಲ್ಲಾ ಸಹ ವಕ್ತಾರ ವಸಂತ್ ಕುಮಾರ್ ನಡುವೆ ಭಾರೀ ಚಟಾಪಟಿಯೇ ನಡೆದ ವಿಡಿಯೋ ವೈರಲ್ ಆಗಿದೆ.

ಚುನಾವಣೆ ಬಗ್ಗೆ ಚರ್ಚಿಸಲೆಂದು ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಪಕ್ಷದ ಮುಖಂಡರ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಸಿ.ಹೆಚ್.ವಿಜಯಶಂಕರ್, ಹಳೆಯ ವಿಚಾರಗಳನ್ನು ಪ್ರಸ್ತಾಪಿಸಿ ಮಾತನಾಡುತ್ತಿದ್ದರು. ಈ ವೇಳೆ ಮಧ್ಯ ಪ್ರವೇಶಿಸಿದ ವಸಂತ ಕುಮಾರ್, ಪ್ರಸಕ್ತ ವಿಚಾರಗಳ ಬಗ್ಗೆ ಮಾತನಾಡುವಂತೆ ತಿಳಿಸಿದರು. ಇದರಿಂದ ಸಿಟ್ಟಿಗೆದ್ದ ವಿಜಯ ಶಂಕರ್ ಹಾಗೂ ಅವರ ಬೆಂಬಲಿಗರು, ವೇದಿಕೆಯಲ್ಲೇ ಕುಳಿತಿದ್ದ ವಸಂತ್ ಕುಮಾರ್ ಮುಗಿಬಿದ್ದಿದ್ದಾರೆ. ಇದರಿಂದ ಭಾರೀ ಗದ್ದಲ ಉಂಟಾಗಿ ಅಲ್ಲಿದ್ದ ಮುಖಂಡರು ಇಬ್ಬರನ್ನೂ ಸಮಾಧಾನಪಡಿಸಿ, ಸಭೆಯನ್ನು ಅರ್ಧಕ್ಕೆ ಮೊಟಕುಗೊಳಿಸಲಾಗಿದೆ.



ಮೈಸೂರು ತಾಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ವಿತರಿಸಲಾಯಿತು. ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಟಿ. ಸತೀಶ್ ಜವರೇಗೌಡ, ಪ್ರಭಾರ ಮುಖ್ಯ ಶಿಕ್ಷಕ ಸುನೀಲ್ ಕುಮಾರ್ ಹಾಗೂ ಶಿಕ್ಷಕ–ಶಿಕ್ಷಕಿಯರು ಉಪಸ್ಥಿತರಿದ್ದರು.

6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 23– ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 2022–23 ನೇ ಶೈಕ್ಷಣಿಕ ಸಾಲಿಗೆ ಪ್ರತಿಷ್ಠಿತ ಶಾಲೆಗಳಲ್ಲಿ 6 ನೇ ತರಗತಿಗೆ ಪ್ರವೇಶ ಬಯಸುವ ಪ್ರತಿಭಾವಂತ ಪರಿಶಿಷ್ಟ ವರ್ಗದ ಬಾಲಕ ಹಾಗೂ ಬಾಲಕಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು 2022 ಜೂನ್ 4 ರೊಳಗಾಗಿ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಮೈಸೂರು ಹಾಗೂ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಮೈಸೂರು, ಹುಣಸೂರು, ಹೆಚ್.ಡಿ. ಕೋಟೆ, ಟಿ. ನರಸೀಪುರ ಮತ್ತು ನಂಜನಗೂಡು ತಾಲೂಕು ಹಾಗೂ ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ ಪಿರಿಯಾಪಟ್ಟಣ ಮತ್ತು ಕೆ.ಆರ್. ನಗರ ತಾಲೂಕು ಇವರಿಂದ ಅರ್ಜಿಗಳನ್ನು ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಸಂಬಂಧಿಸಿದ ಕಚೇರಿಗಳಿಗೆ ಸಲ್ಲಿಸುವಂತೆ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2427140 ಅನ್ನು ಸಂಪರ್ಕಿಸಬಹುದು ಎಂದು ಮೈಸೂರಿನ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ


ಮೈಸೂರು, ಮೇ 23– ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ 2022–23 ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದ ಅರ್ಹ ಅಭ್ಯರ್ಥಿಗಳಿಂದ ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಲಾಗಿದೆ. ಆಸಕ್ತ ಅಭ್ಯರ್ಥಿಗಳು 2022ರ ಜೂನ್ 7 ರೊಳಗಾಗಿ ಅರ್ಜಿಗಳನ್ನು ಸಲ್ಲಿಸಲು ತಿಳಿಸಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಿರಬೇಕು, Diploma in Tool & Diemaking,precission Manufacturing, ಸಂದರ್ಶನವು 2022ರ ಜೂನ್ 9 ರಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ನಂ.93/94 ಬೆಳಗೊಳ ಕೈಗಾರಿಕಾ ಪ್ರದೇಶ. ಕೆ.ಅರ್.ಎಸ್. ರೋಡ್ ಮೈಸೂರು ಇಲ್ಲಿ ನಡೆಯಲಿದೆ. ಅರ್ಜಿಗಳನ್ನು ವೆಬ್‌ಸೈಟ್ www.gttc.karnataka.gov.in ಮೂಲಕ ಪಡೆಯಬಹುದು ಅಥವಾ ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 155267 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 9980557205, 8660139259, 9141630315, 9880068986 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರು ಮಿತ್ರ ಮಂಗಳವಾರ 24 ಮೇ 2022

ರಸಗೊಬ್ಬರ ಹೆಚ್ಚಿನ ಬೆಲೆಗೆ ಮಾರಿದರೆ ಕ್ರಮ ಕೈಗೊಳ್ಳಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚನೆ

ಚಾಮರಾಜನಗರ, ಮೇ 23–ಜಿಲ್ಲೆಯಲ್ಲಿ ರಸಗೊಬ್ಬರ ಸೇರಿದಂತೆ ಕೃಷಿ ಪರಿಕರಗಳನ್ನು ಹೆಚ್ಚುವರಿ ಬೆಲೆಗೆ ಮಾರಾಟ ಮಾಡುವವರು ಹಾಗೂ ಕೃತಕ ಅಭಾವ ಸೃಷ್ಟಿಸುವವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚಿಸಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಮುಂಗಾರು ಹಂಗಾಮಿನ ಸಿದ್ಧತೆಗಳ ಸಂಬಂಧ ಕೃಷಿ ಇಲಾಖೆ ಅಧಿಕಾರಿಗಳು, ರಸಗೊಬ್ಬರ ಜಿಲ್ಲಾ ಮಾರಾಟಗಾರರು ಹಾಗೂ ಸರಬರಾಜು ಸಂಸ್ಥೆ ಪ್ರತಿನಿಧಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ರಸಗೊಬ್ಬರ, ಬಿತ್ತನೆ ಬೀಜ ಸೇರಿದಂತೆ ಯಾವುದೇ ಪರಿಕರಗಳನ್ನು ರೈತರಿಗೆ ಅಗತ್ಯ ಪ್ರಮಾಣದಲ್ಲಿ ಸರಬರಾಜು ಮಾಡಬೇಕು. ಕೃಷಿಗೆ ಪೂರಕವಾಗಿರುವ ಪರಿಕರಗಳಿಗೆ ಕೊರತೆ ಕಾಡಬಾರದು. ಈ ನಿಟ್ಟಿನಲ್ಲಿ ಅಧಿಕಾರಿಗಳು ವಿಶೇಷ ಗಮನಹರಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ರಸಗೊಬ್ಬರ ಅಂಗಡಿಗಳಿಗೆ ಕೃಷಿ ಇಲಾಖೆ ಅಧಿಕಾರಿಗಳು ವ್ಯಾಪಕವಾಗಿ ಭೇಟಿ ನೀಡಿ ಪರಿಶೀಲಿಸಬೇಕು. ಪಾಯಿಂಟ್ ಆಫ್ ಸೇಲ್ (ಪಿಓಎಸ್) ವ್ಯವಸ್ಥೆಯ ಮುಖಾಂತರವೇ ರಸಗೊಬ್ಬರ ವಿತರಣೆಯಾಗಬೇಕು. ಇದರಿಂದ ಭೌತಿಕ ದಾಸ್ತಾನು ಹಾಗೂ ಮಾರಾಟ ಇನ್ನಿತರ ಮಾಹಿತಿಗಳು ಪಾರದರ್ಶಕವಾಗಿರಲಿವೆ. ಈ ಹಿನ್ನೆಲೆಯಲ್ಲಿ ಇಂತಹ ವ್ಯವಸ್ಥೆಗೆ ಒತ್ತು ನೀಡಬೇಕು ಎಂದರು.

ಗುಣಮಟ್ಟದ ರಸಗೊಬ್ಬರ ಇನ್ನಿತರ ಪರಿಕರಗಳನ್ನು ಮಾರಾಟ ಮಾಡಬೇಕು. ಅನಧಿಕೃತ ಮಾರಾಟಕ್ಕೆ ಅವಕಾಶ ನೀಡಬಾರದು. ಹೆಚ್ಚುವರಿ ದರ ಪಡೆಯುವುದು, ಅಭಾವ ಸೃಷ್ಟಿಸುವುದು ಸೇರಿದಂತೆ ಯಾವುದೇ ನಿಯಮ ಉಲ್ಲಂಘನೆಗಳು ಕಂಡು ಬಂದರೆ ಅಂಗಡಿಗಳ ಪರವಾನಗಿ ಅಮಾನತುಪಡಿಸಬೇಕು. ಗಂಭೀರ ಪ್ರಕರಣಗಳಿದ್ದಲ್ಲಿ ಪರವಾನಗಿ ರದ್ದುಪಡಿಸಬೇಕು. ರೈತರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಕೃಷಿ ಇಲಾಖೆ ಅಧಿಕಾರಿಗಳು ರಸಗೊಬ್ಬರ, ಇತರೆ ಪರಿಕರಗಳ ಅಂಗಡಿಗಳಿಗೆ ಭೇಟಿ ನೀಡಿ, ಪರಿಶೀಲಿಸಬೇಕು. ಇನ್ನು 15 ದಿನಗಳೊಳಗೆ ಜಿಲ್ಲೆಯ ಎಲ್ಲಾ ಅಂಗಡಿಗಳ ಪರಿಶೀಲನಾ ವರದಿ ನೀಡಬೇಕು. ತಾಲೂಕು ಹಂತದಲ್ಲಿಯೂ ರಸಗೊಬ್ಬರ ಪರಿಕರಗಳ ಮಾರಾಟಗಾರರು ಹಾಗೂ ಸರಬರಾಜು ಸಂಸ್ಥೆಯ ಪ್ರತಿನಿಧಿಗಳ ಜೊತೆ ಸಭೆ ನಡೆಸಿ ಸುಗಮ ವ್ಯವಸ್ಥೆಗೆ ಮುಂದಾಗುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅಧಿಕಾರಿಗಳಿಗೆ ಸೂಚಿಸಿದರು.

ಇದೇ ವೇಳೆ ರಸಗೊಬ್ಬರ ಮಾರಾಟಗಾರರು ಹಾಗೂ ಸರಬರಾಜು ಸಂಸ್ಥೆಯ ಪ್ರತಿನಿಧಿಗಳ ಜೊತೆ ಜಿಲ್ಲಾಧಿಕಾರಿ ಸಮಾಲೋಚಿಸಿದರು. ಜಂಟಿ ಕೃಷಿ ನಿರ್ದೇಶಕ ಹೆಚ್.ಟಿ.ಚಂದ್ರಕಲಾ, ಉಪನಿರ್ದೇಶಕ ಸೋಮಶೇಖರ್, ತಾಲೂಕು ಕೃಷಿ ಸಹಾಯಕ ನಿರ್ದೇಶಕರು, ಜಿಲ್ಲಾ ರಸಗೊಬ್ಬರ ಮಾರಾಟಗಾರರು ಹಾಗೂ ಸರಬರಾಜು ಸಂಸ್ಥೆಯ ಪ್ರತಿನಿಧಿಗಳು ಸಭೆಯಲ್ಲಿದ್ದರು.

ವ್ಯಾಜ್ಯಗಳನ್ನು ಬಗೆಹರಿಸಲು ವಕೀಲರ ಸಹಕಾರ ಅಗತ್ಯ

ಯಳಂದೂರು, ಮೇ 23(ವಿ.ನಾಗರಾಜು)–ವ್ಯಾಜ್ಯಗಳನ್ನು ಶೀಘ್ರವಾಗಿ ಬಗೆಹರಿಸುವ ನಿಟ್ಟಿನಲ್ಲಿ ವಕೀಲರ ಪಾತ್ರ ಮುಖ್ಯವಾಗಿದ್ದು, ವಕೀಲರು ಸಹಕರಿಸಿದ್ದೇ ಆದಲ್ಲಿ ಮುಂದಿನ 6 ತಿಂಗಳ ಅವಧಿಯಲ್ಲಿ ಅತೀ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಪಡಿಸಲು ಪ್ರಯತ್ನಿಸಲಾಗುವುದು ಎಂದು ಪಟ್ಟಣದ ನೂತನ ಸಿವಿಲ್ ನ್ಯಾಯಾಧೀಶ ಎಂ.ಆಕಾಶ್ ಭರವಸೆ ನೀಡಿದರು.

ಸೋಮವಾರ ಪಟ್ಟಣದ ಸಿವಿಲ್ ನ್ಯಾಯಾಲಯದ ವಕೀಲರ ಸಂಘದ ಕಚೇರಿಯಲ್ಲಿ ವಕೀಲರು ಹಮ್ಮಿಕೊಂಡಿದ್ದ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು. ಪ್ರತಿ ಪ್ರಕರಣಗಳ ಇತ್ಯರ್ಥದಲ್ಲಿ ವಕೀಲರ ಪಾತ್ರ ಹಿರಿದಾಗಿದೆ. ನ್ಯಾಯಾಲಯದಲ್ಲಿ ಪ್ರಕರಣಗಳ ಸಂಖ್ಯೆಯೂ ಅಧಿಕವಾಗಿರುತ್ತದೆ. ಇದನ್ನು ಇತ್ಯರ್ಥಗೊಳಿಸಲು ಶ್ರಮ ವಹಿಸಲಾಗುವುದು. ಅಲ್ಲದೆ ನ್ಯಾಯಾಧೀಶರ ಪರೀಕ್ಷೆಗಳನ್ನು ಎದುರಿಸಲು ಸಿದ್ಧವಿರುವ ವಕೀಲರಿಗೆ ತರಬೇತಿ ನೀಡಲು ನಾನು ಸಿದ್ಧನಿದ್ದು, ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಇದೇ ಸಂದರ್ಭದಲ್ಲಿ ವಕೀಲರ ಸಂಘದಿಂದ ನ್ಯಾಯಾಧೀಶರನ್ನು ಸನ್ಮಾನಿಸಲಾಯಿತು. ವಕೀಲರ ಸಂಘದ ಅಧ್ಯಕ್ಷ ಅಂಬಳೆ ಕೃಷ್ಣ ಸದಸ್ಯರಾದ ಕೆ.ಬಿ.ಶಶಿಧರ್, ಪಿ. ಮಾದೇಶ್, ಬಸವಟ್ಟಿ ಮಹದೇವಸ್ವಾಮಿ, ಸಿ.ಆರ್.ನಾಗರಾಜು, ಶಾಂತರಾಜು, ಯರಿಯೂರು ಶಾಂತರಾಜು ಸೇರಿದಂತೆ ಅನೇಕರಿದ್ದರು.

ಬೈಕ್ ಕಳ್ಳನ ಬಂಧನ

ಬೇಗೂರು, ಮೇ 23(ಕಿರಣ್)–ಬೈಕ್‌ಗಳನ್ನು ಕಳವು ಮಾಡುತ್ತಿದ್ದ ಖದೀಮನನ್ನು ಬೇಗೂರು ಪೊಲೀಸರು ಬಂಧಿಸಿದ್ದು, ಎರಡು ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ.



ನಂಜನಗೂಡು ತಾಲೂಕಿನ ಎಲಚಗೆರೆ ನಿವಾಸಿ ರಂಗಸ್ವಾಮಿ ನಾಯಕ (30) ಬಂಧಿತ ಆರೋಪಿಯಾಗಿದ್ದು, ಈತ ಮೇ 13ರಂದು ಗುಂಡ್ಲುಪೇಟೆ ತಾಲೂಕಿನ ಕಬ್ಬಹಳ್ಳಿ ಗ್ರಾಮದ ಮಹದೇವಸ್ವಾಮಿ ಅವರು ಗ್ರಾಮದ ಬಾರ್ ಮುಂದೆ ನಿಲ್ಲಿಸಿದ್ದ ಬೈಕ್ ಹಾಗೂ ನಂಜನಗೂಡು ತಾಲೂಕಿನ ಮೆಲ್ಲಹಳ್ಳಿ ಗ್ರಾಮದಲ್ಲಿ ಬೈಕ್‌ವೊಂದನ್ನು ಮೇ 16ರಂದು ಕಳವು ಮಾಡಿದ್ದು, ಈ ಸಂಬಂಧ ಪ್ರಕರಣಗಳು ದಾಖಲಾಗಿದ್ದವು. ಈ ಎರಡೂ ಪ್ರಕರಣಗಳನ್ನು ಬೇಗೂರು ಠಾಣೆ ಪೊಲೀಸರು ಭೇದಿಸಿ, ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಸದ್ಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಾರ್ಯಾಚರಣೆಯಲ್ಲಿ ಬೇಗೂರು ವೃತ್ತ ನಿರೀಕ್ಷಕ ಕಿರಣ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್ ಜಗದೀಶ್ ಧೂಳ್‌ಶೆಟ್ಟಿ, ಎಎಸ್‌ಐ ನಾಗೇಂದ್ರರಾಜ್ ಅರಸ್, ಪೊಲೀಸ್ ಪೇದೆಗಳಾದ ಗಣೇಶ್, ಸ್ವಾಮಿ, ಶಂಭು, ಚಾಲಕ ನಾಗೇಂದ್ರ ಸೇರಿದಂತೆ ಇತರರು ಭಾಗವಹಿಸಿದ್ದರು.

ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ

ಬಿಜೆಪಿ ಅಭ್ಯರ್ಥಿ ಪರ ಶಾಸಕ ನಿರಂಜನಕುಮಾರ್ ಮತಯಾಚನೆ



ಗುಂಡ್ಲುಪೇಟೆ, ಮೇ 23(ಸೋಮ್.ಜಿ)–ಪದವೀಧರರ ಸಮಸ್ಯೆಗಳಿಗೆ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಧ್ವನಿಯಾಗಲಿದ್ದು, ಅವರಿಗೆ ಮತ ನೀಡಬೇಕು ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಮತದಾರರಲ್ಲಿ ಮನವಿ ಮಾಡಿದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಪಟ್ಟಣದಲ್ಲಿರುವ ಪದವೀಧರರ ಮನೆಗಳಿಗೆ ಭೇಟಿ ನೀಡಿ, ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರವಾಗಿ ಮತಯಾಚಿಸಿ, ಮಾತನಾಡಿದರು.

ಪದವೀಧರರ ಸಮಸ್ಯೆಗಳ ಬಗ್ಗೆ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗೆ ಸೂಕ್ಷ್ಮವಾಗಿ ತಿಳಿದಿದೆ. ಕಳೆದ ಬಾರಿ ಅತ್ಯಲ್ಪ ಮತಗಳಿಂದ ಸೋಲನ್ನು ಅನುಭವಿಸಿದ್ದರು. ಈ ಬಾರಿ ಅವರ ಗೆಲುವು ನಿಶ್ಚಿತ. ಅವರು ಪದವೀಧರರ ಧ್ವನಿಯಾಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪಟ್ಟಣದಲ್ಲಿ 418 ಪದವೀಧರ ಮತದಾರರಿದ್ದು, ಅವರನ್ನು ಭೇಟಿಯಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಭಿವೃದ್ಧಿ ಯೋಜನೆಗಳ ಬಗ್ಗೆ ವಿವರಿಸಿ ಮತಯಾಚನೆ ಮಾಡಿದ್ದೇವೆ ಎಂದರು. ಈ ವೇಳೆ ಮುಖಂಡರಾದ ಎನ್.ಮಲ್ಲೇಶ್, ದೇವರಹಳ್ಳಿ ನಾಗೇಂದ್ರ, ಹೊಸೂರು ಬಸವರಾಜು, ನವೀದ್, ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಉಪಾಧ್ಯಕ್ಷೆ ದೀಪಿಕಾ ಕಣ್ಣನ್, ಪುರಸಭೆ ಸದಸ್ಯರಾದ ಶಶಿಧರ್‌ದೀಪು ಸೇರಿದಂತೆ ವಿವಿಧ ಘಟಕಗಳ ಮುಖಂಡರು ಮತ್ತು ಕಾರ್ಯಕರ್ತರಿದ್ದರು.

ನವಿಲೂರಲ್ಲಿ ಉರುಕಾತೇಶ್ವರಿ ದೇಗುಲ ಲೋಕಾರ್ಪಣೆ





ಚಾಮರಾಜನಗರ, ಮೇ 23– ತಾಲೂಕಿನ ನವಿಲೂರು ಗ್ರಾಮ ಪಂಚಾಯಿತಿ ಸದಸ್ಯರು, ಗ್ರಾಮಸ್ಥರು ಹಾಗೂ ಸವಿತಾ ಸಮಾಜದ ಮುಖಂಡರ ಸಹಯೋಗದಿಂದ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ಶ್ರೀ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನ ಉದ್ಘಾಟನೆ ಹಾಗೂ ಕಳಶಾರೋಹಣ ಕಾರ್ಯಕ್ರಮ ಸೋಮವಾರ ಸಂಭ್ರಮದಿಂದ ನಡೆಯಿತು.

ದೇವಾಲಯದ ಉದ್ಘಾಟನೆಯ ಅಂಗವಾಗಿ ಬೆಳಗ್ಗೆಯಿಂದಲೇ ದೇವಾಲಯದಲ್ಲಿ ಹಾಲರವಿ ಉತ್ಸವ, ವಿಶೇಷ ಪೂಜೆ, ಮಹಾ ಮಂಗಳಾರತಿ, ಉರುಕಾತೇಶ್ವರಿ ಅಮ್ಮನವರ ಪ್ರಭಾವಳಿ ಸ್ಥಾಪನೆ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ನಂತರ ಪ್ರಸಾದ ವಿನಿಯೋಗ ಜರುಗಿತು.

ದೇವಾಲಯಕ್ಕೆ ವಿದ್ಯುತ್, ನೀರಿನ ಸೌಲಭ್ಯ: ಈ ವೇಳೆ ದೇವಸ್ಥಾನಕ್ಕೆ ಆಗಮಿಸಿದ ಕೊಳ್ಳೇಗಾಲ ಶಾಸಕ ಎನ್.ಮಹೇಶ್ ಮಾತನಾಡಿ, ಸವಿತಾ ಸಮಾಜದವರಿಂದ ಗ್ರಾಮದಲ್ಲಿ ಶ್ರೀ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನ ಉದ್ಘಾಟನೆಯಾಗಿದ್ದು, ಸಮುದಾಯದ ಮುಖಂಡರ ಬೇಡಿಕೆಯಂತೆ ದೇವಾಲಯಕ್ಕೆ ಸುಸಜ್ಜಿತ ರಸ್ತೆ, ವಿದ್ಯುತ್ ಹಾಗೂ ಕೊಳವೆ ಬಾವಿ ಕೊರೆಯಿಸಿ ನೀರಿನ ಸೌಲಭ್ಯ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಅತ್ಯಂತ ಹಿಂದುಳಿದಿರುವ ಸವಿತಾ ಸಮಾಜದವರು ಅಭಿವೃದ್ಧಿ ಹೊಂದುವ ಮೂಲಕ ಸಮಾಜ ಮುಖ್ಯವಾಹಿನಿಗೆ ಬರಬೇಕು. ಈ ನಿಟ್ಟಿನಲ್ಲಿ ನಾನು ಮುಂದಿನ ದಿನಗಳಲ್ಲಿ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.

ವಾಟಾಳು ಸೂರ್ಯಸಿಂಹಾಸನ ಮಠಾಧ್ಯಕ್ಷ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಸವಿತಾ ಸಮಾಜದವರು ಸಣ್ಣ ಸಮುದಾಯವಾಗಿದ್ದು, ಜನಪ್ರತಿನಿಧಿಗಳು ಹೆಚ್ಚಿನ ಸೌಲಭ್ಯ ಕಲ್ಪಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಕೊಳ್ಳೇಗಾಲ ತಾಲೂಕು ಸವಿತಾ ಸಮಾಜದ ಅಧ್ಯಕ್ಷ ಹಾಗೂ ನಗರಸಭೆ ನಾಮನಿರ್ದೇಶನ ಸದಸ್ಯ ಸೋಮಣ್ಣ, ಯಳಂದೂರು ತಾಲೂಕು ಸವಿತಾ ಸಮಾಜದ ಅಧ್ಯಕ್ಷ ಪಿ.ಸಿ.ಶ್ರೀಕಂಠಸ್ವಾಮಿ, ಮುಖಂಡರಾದ ಮಾದೇಗೌಡ, ಬಿಳಗಲಿ ಶಿವಣ್ಣ, ಅರ್ಚಕ ಬಸವಣ್ಣ ಸೇರಿದಂತೆ ನವಿಲೂರು ಗ್ರಾಮದ ಮುಖಂಡರು, ಯುವಕರು ಹಾಜರಿದ್ದರು.

ಲಾಟರಿ ಅಕ್ರಮ ಮಾರಾಟ; ವ್ಯಕ್ತಿ ಬಂಧನ

ಚಾಮರಾಜನಗರ, ಮೇ 23(ಎಸ್‌ಎಸ್)–ಕೇರಳ ರಾಜ್ಯದ ಲಾಟರಿ ಟಿಕೆಟ್‌ಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯೋರ್ವನನ್ನು ಸಂತೇಮರಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಾಮರಾಜನಗರ ತಾಲೂಕಿನ ಗೂಳೀಪುರ ಗ್ರಾಮದ ಮಹದೇವನಾಯಕರ ಪುತ್ರ ನಂಜುಂಡಸ್ವಾಮಿ ಬಂಧಿತ ಆರೋಪಿ.

ನಂಜುಂಡಸ್ವಾಮಿ ಕೇರಳ ರಾಜ್ಯದ ಲಾಟರಿ ಟಿಕೆಟ್‌ಗಳನ್ನು ತಂದು ಈ ಭಾಗದಲ್ಲಿ ಮಾರಾಟ ಮಾಡುತ್ತಿದ್ದ ಎನ್ನಲಾಗಿದೆ. ಈ ಬಗ್ಗೆ ಖಚಿತ ಮಾಹಿತಿ ಪಡೆದ ಸಂತೇಮರಳ್ಳಿ ಠಾಣೆ ಪೊಲೀಸರು, ಗೂಳಿಪುರ ಗ್ರಾಮದ ಪ್ರವೇಶದ್ವಾರದಲ್ಲಿ ಆತನನ್ನು ವಶಕ್ಕೆ ಪಡೆದರು. ಈ ವೇಳೆ ಆತನನ್ನು ಪರಿಶೀಲಿಸಿದಾಗ ಕೇರಳ ರಾಜ್ಯದ 1,607 ಲಾಟರಿ ಟಿಕೆಟ್‌ಗಳು (ಸುಮಾರು 67 ಸಾವಿರ ರೂ. ಮೌಲ್ಯ) ದೊರೆತವು.

ಕೂಡಲೇ ಆತನನ್ನು ಬಂಧಿಸಿ, ಕರ್ನಾಟಕ ರಾಜ್ಯ ಲಾಟರಿ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂತೇಮರಳ್ಳಿ ಠಾಣೆ ಇನ್ಸ್‌ಪೆಕ್ಟರ್ ಬಿ.ಮಹೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದಾಳಿಯಲ್ಲಿ ಬಿ.ಮಹೇಶ್, ಸಬ್‌ಇನ್ಸ್‌ಪೆಕ್ಟರ್ ತಾಜುದ್ದೀನ್, ಸಿಬ್ಬಂದಿ ರಮೇಶ್, ಪ್ರಭುಸ್ವಾಮಿ ಮಾದೇಶ್ ಇತರರು ಪಾಲ್ಗೊಂಡಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮೇ 23– ಸೆಸ್ಕ್‌ನ ಗುಂಡ್ಲುಪೇಟೆ ವ್ಯಾಪ್ತಿಯ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ನಿಮಿತ್ತ ಮೇ 25 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಗುಂಡ್ಲುಪೇಟೆ, ಬರಗಿ, ಕೋಡಿಹಳ್ಳಿ, ಬೇರಂಬಾಡಿ, ನೇನೇಕಟ್ಟೆ ವೀರನಪುರ ಹಾಗೂ ಸುತ್ತಮುತ್ತಲ ಪ್ರದೇಶ, ಬೊಮ್ಮಲಾಪುರ ವಿಭಾಗದ ಬೆಳವಾಡಿ, ಬಾಚಳ್ಳಿ, ಬೊಮ್ಮಲಾಪುರ, ದಾರಿಬೇಗೂರು, ಕೊಡಸೋಗೆ, ಹೆಗ್ಗವಾಡಿ, ಹಂಗಳ ವಿಭಾಗದ ಹಂಗಳ, ಶಿವಪುರ, ಕಲ್ಲಿಗೌಡನಹಳ್ಳಿ ಎನ್‌ಜೆವೈ, ಎಲಚಟ್ಟಿ ಗೋಪಾಲಪುರ ಎನ್‌ಜೆವೈ, ದೇವರಹಳ್ಳಿ, ಹೊನ್ನೇಗೌಡನಹಳ್ಳಿ, ಮಲ್ಲಯ್ಯನಪುರ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕೊಡಗಿನ ಜಿಲ್ಲಾಧಿಕಾರಿ ತಂದೆಯ ಸರಳತೆ ಪಾಠ

ಇಳಿವಯಸ್ಸಲ್ಲಿ ಸಾಮಾನ್ಯ ಸಾರಿಗೆ ಬಸ್‌ಯೇರಿ ಮಗನ ಕಾಣಲು ನೂರಾರು ಮೈಲಿ ಸಾಗಿ ಬಂದರು!

ಮಡಿಕೇರಿ, ಮೇ 23 – ಮಕ್ಕಳು ಉನ್ನತ ಹುದ್ದೆಯಲ್ಲಿದ್ದರೆ ಮುಗಿಯಿತು. ಐಷಾರಾಮಿ ಜೀವನಕ್ಕೆ ಅದೂ ಸರ್ಕಾರಿ ಕೋಟಾದಲ್ಲಿ ಜೋತು ಬೀಳುವವರೇ ನಮ್ಮ ಸುತ್ತಮುತ್ತ ಲಿದ್ದಾರೆ. ದಿನನಿತ್ಯ ನೋಡುತ್ತಲೂ ಇದ್ದೇವೆ. ಆದರೆ ಸೇವೆಗೆ ಸರ್ಕಾರದ ಸವಲತ್ತು ಎಂಬ ಭಾವನೆ ಬಲು ಅಪರೂಪ. ಅಂತಹ ಒಂದು ನಿದರ್ಶನ ಇಲ್ಲಿದೆ. ಕೊಡಗಿನ ಜಿಲ್ಲಾಧಿಕಾರಿ ಡಾ.ಸತೀಶ್ ಅವರನ್ನು ನೋಡಲು ಅವರ ತಂದೆ ಕೆಎಸ್‌ಆರ್‌ಟಿಸಿ ಸಾಮಾನ್ಯ ಬಸ್‌ನಲ್ಲಿ ನೂರಾರು ಕಿಲೋ ಮೀಟರ್ ಪ್ರಯಾಣಿಸಿ, ಪ್ರಯಾಸ ಪಟ್ಟು ಬಂದು ಮಗನ ಕಂಡು ಮಂದ ಹಾಸ ಬೀರಿದ್ದಾರೆ.

ನಿವೃತ್ತ ಶಿಕ್ಷಕರೂ ಆದ 82 ವರ್ಷದ ಬಿ.ಸಿ. ಚಂದ್ರಪ್ಪ ಅವರೇ ಪುತ್ರ ಕೊಡಗಿನ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಅವರನ್ನು ನೋಡಲು ಶಿವಮೊಗ್ಗದಿಂದ ಸುಮಾರು 8 ಗಂಟೆಗಳ ಕಾಲ ಬಸ್‌ನಲ್ಲಿ ಪ್ರಯಾಣಿಸಿದ್ದಾರೆ.

ಸಾವಿರಾರು ಮಕ್ಕಳಿಗೆ ಆದರ್ಶದ ಪಾಠ ಹೇಳಿಕೊಟ್ಟು ಬದುಕು ರೂಪಿಸಿದ ಈ ಶಿಕ್ಷಕರು, ನಿವೃತ್ತರಾದ ನಂತರ ತಮ್ಮ 6 ಎಕರೆ ಅಡಿಕೆ ತೋಟ ನೋಡಿಕೊಂಡು ಶಿವಮೊಗ್ಗದಲ್ಲೇ ವಾಸವಿದ್ದಾರೆ. ಹೃದಯಕ್ಕೆ ಸ್ಟೆಂಟ್ ಅಳವಡಿಸಿ ಕೊಂಡಿದ್ದಾರೆ. ಮಂಡಿ ಚಿಪ್ಪುಗಳ ಆಪರೇಷನ್ ಕೂಡ ಆಗಿದೆ. ಜೊತೆಗೆ ಇನ್ನೊಂದಿಷ್ಟು ವಯೋಸಹಜ ಆರೋಗ್ಯದ ತೊಂದರೆಗಳೂ ಇವೆ. ಇಷ್ಟಿದ್ದರೂ ಶಿವಮೊಗ್ಗದಲ್ಲಿ ಬಸ್ ಹತ್ತಿ ಸುಮಾರು 8 ಗಂಟೆಗಳ ಕಾಲ ಪ್ರಯಾಣ ಮಾಡಿ ಒಬ್ಬರೇ ಮಡಿಕೇರಿಗೆ ಬಂದಿದ್ದಾರೆ. ತಮ್ಮವರೊಬ್ಬರು ಉನ್ನತ ಹುದ್ದೆಯಲ್ಲಿ ಇದ್ದಾರೆ ಎಂದರೆ ಸಕಲ ಸವಲತ್ತನ್ನು ಸರ್ಕಾರದಿಂದ ಬಯಸುವವರೇ ಹೆಚ್ಚು. ಚಂದ್ರಪ್ಪ ಅವರು ಪುತ್ರನಿಗೆ ಒಂದು ಮಾತೂ ತಿಳಿಸದೆ ದಿಢೀರ್ ಮಡಿಕೇರಿಗೆ ಆಗಮಿಸಿದ್ದಾರೆ. ತಾವೊಬ್ಬರೇ ಸುರಕ್ಷಿತವಾಗಿ ಬಂದು ಮಗನ ಮನೆ ಸೇರಿಕೊಂಡಿದ್ದಾರೆ.



ಇಡೀ ಜಿಲ್ಲೆಯ ಆಡಳಿತ ಒಡೆಯರಾಗಿರುವ ಒಬ್ಬ ಜಿಲ್ಲಾಧಿಕಾರಿಯ ತಂದೆಯಾಗಿ ಯಾವ ನಿರೀಕ್ಷೆಯೂ ಇಲ್ಲದೆ, ಯಾರ ಸಹಾಯವನ್ನೂ ಪಡೆಯದೇ ಈ ಇಳಿ ವಯಸ್ಸಿನ, ಒಬ್ಬ ನಿವೃತ್ತ ಶಿಕ್ಷಕರ ಮಾದರಿ ನಡೆ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸದ ಗೇಟ್ ಬಳಿ ಇವರು ಬಂದಾಗ, ಅಲ್ಲಿನ ಭದ್ರತಾ ಸಿಬ್ಬಂದಿ ಇವರನ್ನು ಯಾರು ಬೇಕು ಎಂದು ಕೇಳಿದ್ದಾರೆ. ಅವರು ತಮ್ಮ ಮಗ ಜಿಲ್ಲಾಧಿಕಾರಿ ಎಂದು ಹೇಳುತ್ತಿದ್ದಂತೆ ಅವರಿಗೂ ನಂಬಿಕೆ ಬಾರದೆ, ತಮ್ಮೊಂದಿಗೆ ಅವರನ್ನು ಒಳಗೆ ಕರೆದುಕೊಂಡು ಹೋಗಿ ಜಿಲ್ಲಾಧಿಕಾರಿಗಳ ಮುಂದೆ ನಿಂತಿದ್ದಾರೆ. ಆಗ ತಮ್ಮ ತಂದೆ ತನ್ನ ಮುಂದೆ ದಿಢೀರ್ ಪ್ರತ್ಯಕ್ಷರಾಗಿದ್ದನ್ನು ಕಂಡು ಡಿಸಿ ಡಾ. ಸತೀಶ್, ಆಶ್ಚರ್ಯ ಹಾಗೂ ಸಂತೋಷಗೊಂಡು ತಂದೆ ಬರಮಾಡಿಕೊಂಡಿದ್ದಾರೆ. ಭದ್ರತಾ ಸಿಬ್ಬಂದಿಯ ಅನುಮಾನಕ್ಕೆ ಕಾರಣ ಅವರು ಬಂದದ್ದು ಕೈಯ್ಯಲ್ಲಿ ಒಂದು ಸಣ್ಣ ಬ್ಯಾಗ್ ಹಿಡಿದು ಸಾಮಾನ್ಯರಲ್ಲಿ ಸಾಮಾನ್ಯರಂತೆ.

ಮುಂಗಾರು ಎದುರಿಸಲು ಜಿಲ್ಲಾಡಳಿತ ಅಗತ್ಯ ಸಿದ್ಧತೆ



ಮಡಿಕೇರಿ ಮೇ 23–'ಮುಂಗಾರು' ಎದುರಿಸಲು ಜಿಲ್ಲಾಡಳಿತ ಅಗತ್ಯ ಸಿದ್ಧತೆ ಮಾಡಿಕೊಂಡಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮುಂಗಾರು ಸಂದರ್ಭದಲ್ಲಿ ಸಂಭವಿಸಬಹುದಾದ ಪ್ರಾಕೃತಿಕ ವಿಕೋಪ ಎದುರಿಸಲು ಜಿಲ್ಲಾಡಳಿತ ಈಗಾಗಲೇ ಗ್ರಾಪಂ, ತಾಲೂಕು ಆಡಳಿತ ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಯಪಡೆ ಸಮಿತಿಯನ್ನು ರಚಿಸಿ, ಈಗಾಗಲೇ ಸಭೆಗಳನ್ನು ನಡೆಸಲಾಗಿದೆ. ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿಯೂ ಸಭೆ ನಡೆದಿದ್ದು, ಮುಂಗಾರು ಸಂದರ್ಭದಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸುವ ನಿಟ್ಟಿನಲ್ಲಿ ನಿರ್ದೇಶನ ನೀಡಲಾಗಿದೆ ಎಂದು ಡಾ.ಬಿ.ಸಿ.ಸತೀಶ ತಿಳಿಸಿದರು.

ಈಗಾಗಲೇ ಪ್ರಾಕೃತಿಕ ವಿಕೋಪ ಎದುರಿಸಲು ಪ್ರತೀ ಗ್ರಾಪಂಗಳಿಗೆ 50 ಸಾವಿರ ರೂ. ಹಾಗೂ ತಹಶೀಲ್ದಾರರಿಗೆ 25 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ. ಹೋಬಳಿ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಪಂ ಸಿಇಒ ನೇತೃತ್ವದಲ್ಲಿ ಸಮನ್ವಯ ಸಮಿತಿ ರಚಿಸಲಾಗಿದೆ. ಜೊತೆಗೆ ಸೆಸ್ಕ್, ಲೋಕೋಪಯೋಗಿ, ರಾಷ್ಟ್ರೀಯ ಹೆದ್ದಾರಿ, ಅರಣ್ಯ, ಅಗ್ನಿಶಾಮಕದಳ, ಪೊಲೀಸ್ ಇಲಾಖೆ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಪ್ರತ್ಯೇಕ ತಂಡವನ್ನು ರಚಿಸಿಕೊಂಡು ಕಾರ್ಯ ಪ್ರವೃತ್ತರಾಗುವಂತೆ ತಿಳಿಸಲಾಗಿದೆ ಎಂದರು.

ಪ್ರಾಕೃತಿಕ ವಿಕೋಪ ಸಂದರ್ಭದಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಲ್ಲಿ ಮುಂದಿನ ವಾರ ಎನ್‌ಡಿಆರ್‌ಎಫ್ ತಂಡ ಜಿಲ್ಲೆಗೆ ಆಗಮಿಸಲಿದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ 2018, 2019 ಮತ್ತು 2020 ರಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪ ಸಂಬಂಧ ಸೂಕ್ಷ್ಮ, ಅತಿ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಲಾಗಿದೆ. ಇಂತಹ ಪ್ರದೇಶಗಳಲ್ಲಿ ಮುಂಗಾರು ಸಂದರ್ಭದಲ್ಲಿ ಹೆಚ್ಚಿನ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು. ಹಾರಂಗಿ ಜಲಾಶಯ ಭರ್ತಿ ಆಗಲು 5 ಅಡಿ ಬಾಕಿ ಇರುವುದಕ್ಕೆ ಮೊದಲು ಜಲಾಶಯ ನೀರನ್ನು ಕಾಲುವೆ, ನದಿಗೆ ಬಿಡುವುದು, ಮತ್ತಿತರ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಕಾವೇರಿ ನದಿ ಪಾತ್ರದಲ್ಲಿ ಕಾಡು ಕಡಿಯುವ ಕೆಲಸ ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ಜಿಲ್ಲಾಧಿಕಾರಿ ಬಿ.ಸಿ.ಸತೀಶ ಮಾಹಿತಿ ನೀಡಿದರು.

ಮುಂಜಾಗ್ರತಾಕ್ರಮ ಕೈಗೊಳ್ಳಲು ಪಿಡಿಓಗಳಿಗೆ ಸೂಚನೆ

ಸಿದ್ದಾಪುರ, ಮೇ 23– ಜಿಲ್ಲೆಯಾದ್ಯಂತ ಸುರಿಯುತ್ತಿರುವ ಮಳೆ ಹಿನ್ನೆಲೆ ಕಾವೇರಿ ನದಿ ಪಾತ್ರದ ನಿವಾಸಿಗಳಿಗೆ ನೋಟಿಸ್ ನೀಡಿ ಜಾಗೃತಿ ಮೂಡಿಸುವ ಮೂಲಕ ಮುನ್ನೆಚ್ಚರಿಕೆ ವಹಿಸಲು ಗ್ರಾಮ ಪಂಚಾಯಿತಿ ಪಿಡಿಓಗಳಿಗೆ ಜಿಪಂ ಮುಖ್ಯಕಾರ್ಯನಿರ್ವಹಣಾಧಿಕಾರಿ ಭನ್ವರ್ ಸಿಂಗ್ ಮೀನಾ ಸೂಚನೆ ನೀಡಿದರು.



ನೆಲ್ಯಹುದಿಕೇರಿ, ಬೆಟ್ಟದಕಾಡು, ಕುಂಬಾರಗುಂಡಿ, ಸಿದ್ದಾಪುರ, ಕರಡಿಗೋಡು, ಕೂಡುಗದ್ದೆ, ಗುಹ್ಯ ಭಾಗದ ನದಿ ದಡ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಳೆ ಪ್ರಾರಂಭವಾಗಿದ್ದು ಕಾವೇರಿ ನದಿ ನೀರಿನ ಮಟ್ಟ ಏರಿಕೆಯಾಗುತ್ತಿದ್ದು, ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುವುದರೊಂದಿಗೆ ನದಿ ದಡದ ನಿವಾಸಿಗಳಿಗೆ ಸುರಕ್ಷಿತ ಸ್ಥಳಕ್ಕೆ ತೆರಳಲು ಹೇಳಿ ಅಗತ್ಯವಿದ್ದಲ್ಲಿ ಕಾಳಜಿ ಕೇಂದ್ರ ತೆರೆಯಲು ಸೂಚನೆ ನೀಡಿದರು.

ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವುದರೊಂದಿಗೆ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸಲಹೆ ನೀಡಿದರು. ಕಾಳಜಿ ಕೇಂದ್ರ ತೆರೆಯಲು ಸಿದ್ದಾಪುರ, ನೆಲ್ಯಹುದಿಕೇರಿ ಶಾದಿಮಹಲ್, ಸರ್ಕಾರಿ ಶಾಲೆ, ಕಲ್ಯಾಣಮಂಟಪ, ಸಮುದಾಯ ಭವನಗಳನ್ನು ಪರಿಶೀಲನೆ ನಡೆಸಿದರು. 3 ವರ್ಷಗಳ ಹಿಂದೆ ಪ್ರವಾಹ ಸಂದರ್ಭದಲ್ಲಿ ಉಂಟಾದ ನದಿ ದಡ ನಿವಾಸಿಗಳ ಆಸ್ತಿಪಾಸ್ತಿಗಳನ್ನು ಪರಿಶೀಲನೆ ನಡೆಸಿದರು.

ನೆಲ್ಯಹುದಿಕೇರಿ ಭಾಗದ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಅಭ್ಯತ್ ಮಂಗಲ ಬಳಿ ನಿಗದಿಪಡಿಸಿದ ಜಾಗದ ಮಾಹಿತಿ ಪಡೆದರು. ಈ ಸಂದರ್ಭ ನೆಲ್ಯಹುದಿಕೇರಿ ಗ್ರಾಪಂ ಅಧ್ಯಕ್ಷ ಸಾಬು ವರ್ಗೀಸ್, ಅಭಿವೃದ್ಧಿ ಅಧಿಕಾರಿ ಅನಿಲ್ ಕುಮಾರ್ ಸಿದ್ದಾಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮೋಹನ್ ಸೇರಿದಂತೆ ಮತ್ತಿತರರು ಇದ್ದರು.

ಕಕ್ಕಬ್ಬೆಯಲ್ಲಿ ಕಾಡಾನೆ ಹಾವಳಿ: ಗ್ರಾಮಸ್ಥರ ಆತಂಕ

ಮಡಿಕೇರಿ, ಮೇ 23– ಕೊಡಗು ಜಿಲ್ಲೆಯ ವಿವಿಧೆಡೆ ಕಾಡುತ್ತಿದ್ದ ಕಾಡಾನೆಗಳು ಇದೀಗ ಕೊಡಗಿನ ಕುಲದೇವರ ಸನ್ನಿಧಿಗೇ ಬಂದು ತಲುಪಿವೆ. ಮಡಿಕೇರಿ ತಾಲೂಕಿನ ಕಕ್ಕಬ್ಬೆ ಗ್ರಾಮದಲ್ಲಿರುವ ಇಗ್ಗುತಪ್ಪ ದೇವಸ್ಥಾನದ ಸುತ್ತಮುತ್ತಲಿನ ನಿವಾಸಿಗಳು ಕಾಡಾನೆ ಹಾವಳಿಯಿಂದ ತತ್ತರಿಸಿದ್ದಾರೆ. ದೇವಸ್ಥಾನದಿಂದ ಕೂಗಳತೆ ದೂರದಲ್ಲಿರುವ ಬೊಳ್ಳನ ಮಂಡ ದೇವಮ್ಮ ನಿವಾಸದ ಅಂಗಳಕ್ಕೆ ಬಂದಿರುವ ಕಾಡಾನೆ ಹಿಂಡು ತೆಂಗಿನ ಗಿಡಗಳನ್ನು ಉರುಳಿಸಿವೆ. ಕಳೆದ ಎಂಟು ವರ್ಷಗಳಿಂದ ಬೆಳೆಸಿದ್ದ ತೆಂಗಿನ ಸಸಿಗಳು ಕಣ್ಣೆದುರೇ ನಾಶವಾಗಿದ್ದನ್ನು ಕಂಡು ದೇವಮ್ಮ ಕಣ್ಣೀರಿಡುತ್ತಿದ್ದಾರೆ.



ಇತಿಹಾಸದಲ್ಲಿ ಎಂದೂ ಈ ಗ್ರಾಮಕ್ಕೆ ಕಾಡಾನೆ ಕಾಟವಿರಲಿಲ್ಲ ಎಂದು ಹೇಳಿದ ಗ್ರಾಮಸ್ಥರು, ಇತ್ತೀಚೆಗೆ ಎರಡು ವರ್ಷಗಳಿಂದ ಗ್ರಾಮದ ಬೆಟ್ಟ ಪ್ರದೇಶಗಳಲ್ಲಿ ಕಾಡಾನೆಗಳು ಕಾಣಿಸಿಕೊಳ್ಳಲಾರಂಭಿಸಿದ್ದವು. ಇದೀಗ ಗಜಪಡೆ ಮನೆ ಅಂಗಳಕ್ಕೇ ಬಂದು ತಲುಪಿವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಈ ಗ್ರಾಮದ ಬಹುತೇಕ ಮಕ್ಕಳು ನಡೆದೇ ಶಾಲೆ ಕಾಲೇಜಿಗೆ ತೆರಳುತ್ತಿದ್ದು, ಪೋಷಕರು ಆನೆ ಆಗಮನದಿಂದ ಆತಂಕಕ್ಕೆ ಸಿಲುಕಿದ್ದಾರೆ. ಈ ಗ್ರಾಮದ ಕಾಫಿ ತೋಟಗಳಲ್ಲೇ ಬೀಡು ಬಿಟ್ಟಿರುವ ಕಾಡಾನೆಗಳಿಂದಾಗಿ ತೆಂಗು, ಅಡಿಕೆ, ಬಾಳೆ, ಹಲಸು ಬೆಳೆಗಳೂ ಸಹ ಕೈಗೆ ಸಿಗದಂತಾಗಿದೆ.

ಅತಿಕ್ರಮಣವೇ ಕಾರಣ: ಈ ಗ್ರಾಮಸ್ಥರ ಪ್ರಕಾರ ಕಕ್ಕಬ್ಬೆ, ಯವಕಪಾಡಿ ಗ್ರಾಮ ವ್ಯಾಪ್ತಿಯಲ್ಲಿ ಆನೆ ಕಾರಿಡಾರ್‌ಗಳಿದ್ದವು. ಆದರೆ ಈ ಭಾಗದಲ್ಲಿ ಅಕ್ರಮ ರೆಸಾರ್ಟ್‌ಗಳು ಹೋಂಸ್ಟೇಗಳು ತಲೆ ಎತ್ತಿ ತಮ್ಮ ಗಡಿಗೆ ಸೋಲಾರ್ ಬೇಲಿ ಹಾಕಿಕೊಂಡಿದ್ದಾರೆ. ಇದೂ ಕೂಡ ಆನೆಗಳು ಜನ ವಸತಿ ಪ್ರದೇಶಗಳತ್ತ ಬರಲು ಕಾರಣ ಎಂದು ಗ್ರಾಮಸ್ಥರು ಆರೋಪಿಸಿದ್ದು, ಪಡಿನಾಲ್ಕುಮೀಸಲು ಅರಣ್ಯ, ಬ್ರಹ್ಮಗಿರಿ ವನ್ಯಧಾಮ ಮತ್ತು ಕೇರಳದಿಂದಲೂ ಆನೆಗಳು ಈ ಭಾಗದತ್ತ ಬರುತ್ತಿದ್ದು, ಈ ಬಗ್ಗೆ ಅರಣ್ಯ ಇಲಾಖೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಅಂಬಟ್ಟಿಯಲ್ಲಿ ಹುಲಿ ದಾಳಿ: ಕರು ಸಾವು

ವಿರಾಜಪೇಟೆ, ಮೇ 23– ವಿರಾಜಪೇಟೆ ಬಳಿಯ ಅಂಬಟ್ಟಿ ಗ್ರಾಮದಲ್ಲಿ ಹುಲಿ ಪ್ರತ್ಯಕ್ಷವಾಗಿ ಗದ್ದೆಯಲ್ಲಿ ಮೇಯಲು ಕಟ್ಟಿಹಾಕಿದ್ದ ಕರುವನ್ನು ತಿಂದು ಹಾಕಿದೆ. ಹಾಲು ಕೊಡುವ ಹಸುವನ್ನು ಗಾಯಗೊಳಿಸಿದ ಹುಲಿಯ ಆರ್ಭಟಕ್ಕೆ ಸ್ಥಳೀಯ ನಿವಾಸಿಗಳು ಭಯಭೀತರಾಗಿದ್ದಾರೆ. ಅರಣ್ಯ ಇಲಾಖೆ ಕೂಡಲೇ ಕ್ರಮ ಕೈಗೊಂಡು ಹುಲಿಯ ಸೆರೆಗೆ ಕಾರ್ಯಾಚರಣೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಅಂಬಟ್ಟಿ ಗ್ರಾಮದ ತೌಸೀಬ್ ಎಂಬವರು ಗದ್ದೆಯಲ್ಲಿ ಮೇಯಲು ಕರುವನ್ನು ಕಟ್ಟಿಹಾಕಿದ್ದರು. ನಂತರ ನೋಡುವಾಗ ಕರು ಕಾಣೆಯಾಗಿತ್ತು, ಹಾಲು ಕೊಡುವ ಹಸು ಗಾಯಗೊಂಡು ಮನೆಗೆ ಹಿಂತಿರುಗಿತ್ತು. ಈ ಹಿನ್ನೆಲೆಯಲ್ಲಿ ಹುಡುಕಾಟ ನಡೆಸಿದಾಗ, ಕಟ್ಟಿದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಕರುವಿನ ಕಳೇಬರ ಪತ್ತೆಯಾಗಿದ್ದು, ಆ ಸ್ಥಳದಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆಯಾಗಿದೆ. ಈ ಸಂಬಂಧ ಅರಣ್ಯ ಇಲಾಖೆಗೆ ವಿಚಾರ ತಿಳಿಸಲಾಯಿತು. ಬಳಿಕ ಪರಿಹಾರ ಕೋರಿ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿದಾಗ ವಲಯಾಧಿಕಾರಿ ದೇವಯ್ಯ ಪರಿಹಾರದ ಭರವಸೆ ನೀಡಿದ್ದಾರೆ. ಈಗಾಗಲೆ ಹಲವು ಗ್ರಾಮಗಳಲ್ಲಿ ಹುಲಿಯೊಂದು ಓಡಾಡುತ್ತಿದ್ದು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಭಯದಿಂದ ಓಡಾಡುವಂತಾಗಿದೆ.

ತಂಬಾಕು ದುಷ್ಪರಿಣಾಮ ಜಾಗೃತಿಗೆ ಚಾಲನೆ

ಸೋಮವಾರಪೇಟೆ, ಮೇ 23– ವಿಶ್ವ ತಂಬಾಕು ರಹಿತ ದಿನಾಚರಣೆ ಮೇ 31ರಂದು ನಡೆಯಲಿದ್ದು, ಜಿಲ್ಲೆಯ ತಂಬಾಕು ಬಳಕೆದಾರರಲ್ಲಿ ತಂಬಾಕಿನ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸುವ ಜಾಗೃತಿ ಕಾರ್ಯಕ್ರಮಕ್ಕೆ ಶಾಸಕ ಅಪ್ಪಚ್ಚು ರಂಜನ್ ತಮ್ಮ ಕಚೇರಿಯಲ್ಲಿ ಚಾಲನೆ ನೀಡಿದರು.



ನಂತರ ಮಾತನಾಡಿ, ತಂಬಾಕು ಮುಕ್ತ ಕೊಡಗು ಜಿಲ್ಲೆಯನ್ನಾಗಿ ಮಾಡುವ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯ ಇಲಾಖೆ ಮುಂದಾಗಿದೆ. ಈ ಕೆಲಸಕ್ಕೆ ಜನರು ಸಹಕಾರ ನೀಡಬೇಕು. ತಂಬಾಕು ಬಳಕೆ ಆರೋಗ್ಯಕ್ಕೆ ಹಾನಿಕರ. ಇದರ ಬಳಕೆಯಿಂದಲೇ ಸಾಕಷ್ಟು ಜನರು ಕ್ಯಾನ್ಸರ್ ಪೀಡಿತರಾಗಿರುವುದನ್ನು ನಾವು ಕಾಣಬಹುದು. ಈ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯ ಇಲಾಖೆಯಿಂದ ಹಾಡಿಗಳು ಸೇರಿದಂತೆ ಹಲವೆಡೆ ತೆರಳಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಮಾತನಾಡಿ, ಮೇ 23ರಿಂದ 31ರ ವರೆಗೆ ಜನರಲ್ಲಿ ತಂಬಾಕಿನ ಬಳಕೆಯಿಂದಾಗುವ ಅಡ್ಡ ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ. ಈಗಾಗಲೇ ಸಿಗರೇಟ್ ಮಾರುವ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗುತ್ತಿದೆ. ಶಾಲಾ ಆವರಣದಿಂದ 100 ಮೀಟರ್ ಒಳಗೆ ಸಿಗರೇಟ್ ಮಾರುವಂತಿಲ್ಲ. ಅಂಗಡಿಗಳಲ್ಲಿ 18 ವರ್ಷಕ್ಕಿಂತ ಕೆಳಗಿನ ವಯೋಮಾನದವರಿಗೆ ತಂಬಾಕು ಉತ್ಪನ್ನಗಳನ್ನು ಮಾರುವಂತಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಯಾರೂ ಧೂಮಪಾನ ಮಾಡಬಾರದು. ಅಂತಹ ಘಟನೆಗಳು ಕಂಡುಬಂದಲ್ಲಿ ಮಾರುವವರು ಮತ್ತು ಬಳಸುವವರ ಮೇಲೆ ದಂಡ ವಿಧಿಸಲಾಗುವುದು ಎಂದು ಹೇಳಿದರು. ಈ ಸಂದರ್ಭ ಆರೋಗ್ಯ ರಕ್ಷಾ ಸಮಿತಿ ಸದಸ್ಯ ಕೆ.ಜಿ. ಸುರೇಶ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶಾಂತಿ, ಇಲಾಖೆಯ ಸಿಬ್ಬಂದಿಗಳಾದ ಮಂಜುನಾಥ್ ಹಾಗೂ ಪುನೀತ ಇದ್ದರು.

ಮೇ 30 ರಿಂದ ಸರಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟ

ವಿರಾಜಪೇಟೆ, ಮೇ 23– ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದಿಂದ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿಜೇತರಾದವರು ಮೇ 30–31 ಮತ್ತು ಜೂನ್ 1 ರಂದು ಬೆಂಗಳೂರು ಶ್ರೀಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ರಾಜ್ಯ ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗೆ ಭಾಗವಹಿಸುವಂತೆ ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಬಿ.ಎಸ್.ಗುರುರಾಜ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದು, ಕ್ರೀಡಾಕೂಟದಲ್ಲಿ ಭಾಗವಹಿಸುವವರಿಗೆ ಟ್ರ್ಯಾಕ್ ಸೂಟ್ ನೀಡಲಾಗುತ್ತದೆ, ಊಟದ ವ್ಯವಸ್ಥೆ ಹಾಗೂ ವಿಜೇತ ಕ್ರೀಡಾಪಟುಗಳಿಗೆ ಆಕರ್ಷಕ ಬಹುಮಾನ ನೀಡಲಾಗುವುದು. ಮೇ 30 ರಂದು ಸಂಜೆ 6 ಗಂಟೆಗೆ ಖ್ಯಾತ ಗಾಯಕ ವಿಜಯಪ್ರಕಾಶ್ ಅವರಿಂದ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಲಿದೆ, ಮೇ 31 ರಂದು ಸಂಜೆ 6 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಾಯೋಜಿತ ಜಾನಪದ ಕಲಾ ತಂಡಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಪದ್ಮಕುಮಾರ್, ಕಾರ್ಯದರ್ಶಿ ಬಿ.ಟಿ. ದೇವರಾಜ್, ಖಜಾಂಚಿ ಎ.ಬಿ. ಲಲಿತಾ, ರಾಜ್ಯ ಪರಿಷತ್ ಸದಸ್ಯ ಇ ಸುರೇಂದ್ರಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಮೇ 23– ಕಾನೂರು ಫೀಡರ್‌ನಲ್ಲಿ ಜಂಗಲ್ ಕಟ್ಟಿಂಗ್ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಮೇ 24 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯ ವರೆಗೆ ಕಾನೂರು, ಕೋತೂರು, ನಾಲ್ಕೇರಿ, ಹರಿಹರ, ಕುಮಟೂರು, ಚೂರಿಕಾಡು ಮತ್ತು ಪಲ್ಲೇರಿ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಕೋರಿದ್ದಾರೆ.

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2,859 ಅಡಿ
ಭಾನುವಾರ	2850.34 ಅಡಿ
ಒಳ ಹರಿವು	140 ಕ್ಯೂಸೆಕ್
ಹೊರ ಹರಿವು	320 ಕ್ಯೂಸೆಕ್

ವಿದೇಶಿ ಬಂಡವಾಳ ಹೂಡಿಕೆ: ಕರ್ನಾಟಕಕ್ಕೆ ಮೊದಲ ಸ್ಥಾನ

ನವದೆಹಲಿ: 2021–22ನೇ ಹಣಕಾಸು ವರ್ಷದಲ್ಲಿ ಅತೀ ಹೆಚ್ಚು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಆಕರ್ಷಿಸಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಭಾರತವು 2021–22ನೇ ಹಣಕಾಸು ವರ್ಷದಲ್ಲಿ ದಾಖಲೆಯ ರೂ. 6.48 ಲಕ್ಷ ಕೋಟಿ ಎಫ್‌ಡಿಐ ಆಕರ್ಷಿಸಿದೆ. ಇದರಲ್ಲಿ ಎಫ್‌ಡಿಐ ಇಕ್ವಿಟಿ ಒಳಹರಿವು ಪಡೆದ ರಾಜ್ಯಗಳಲ್ಲಿ ಕರ್ನಾಟಕದ್ದೇ ಸಿಂಹಪಾಲಾಗಿದೆ. ಕರ್ನಾಟಕವು ಶೇ. 53ರಷ್ಟು ಎಫ್‌ಡಿಐ ಇಕ್ವಿಟಿ ಒಳಹರಿವನ್ನು ದಾಖಲಿಸಿದೆ. ಕರ್ನಾಟಕದ ಬಹುಪಾಲು ಇಕ್ವಿಟಿ ಒಳಹರಿವು ಕಂಡ ವಲಯಗಳನ್ನು ನೋಡುವುದಾದರೆ ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್, ಒಟ್ಟು ಎಫ್‌ಡಿಐ ಈಕ್ವಿಟಿ ಒಳಹರಿವಿನ ಶೇ.35ರಷ್ಟು ಪಾಲನ್ನು ಹೊಂದಿದೆ. ಆಟೋಮೊಬೈಲ್ ಉದ್ಯಮದಲ್ಲಿ ಇದು 20 ಶೇಕಡಾ ಮತ್ತು ಶೈಕ್ಷಣಿಕ ವಲಯದಲ್ಲಿ 12 ಶೇಕಡಾ ಪಾಲನ್ನು ಹೊಂದಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಾಹಿತಿ ನೀಡಿದೆ. ಈ ಕುರಿತು ನಿನ್ನೆ ಟ್ವೀಟ್ ಮಾಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಭಾರತವು 2021–22ರ ಆರ್ಥಿಕ ವರ್ಷದಲ್ಲಿ $83.57 ಶತಕೋಟಿಯಷ್ಟು ವಾರ್ಷಿಕ ವಿದೇಶಿ ನೇರ ಹೂಡಿಕೆ ಒಳಹರಿವನ್ನು ದಾಖಲಿಸಿದೆ. ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ವಲಯದಲ್ಲಿ, ಕರ್ನಾಟಕವು ಎಫ್‌ಡಿಐ ಒಳಹರಿವಿನ (53%) ಅತಿ ಹೆಚ್ಚು ಪಾಲನ್ನು ಪಡೆದುಕೊಂಡಿದೆ ಮತ್ತು ನಂತರದ ಸ್ಥಾನ ದೆಹಲಿ ಮತ್ತು ಮಹಾರಾಷ್ಟ್ರ (ತಲಾ ಶೇ.17) ಪಡೆದುಕೊಂಡಿದೆ ಎಂದು ಹೇಳಿದ್ದರು.

ಒಂದನೇ ಪುಟದಿಂದ

ನೈತಿಕ ಶಿಕ್ಷಣ ಅಳವಡಿಕೆ

ತರುತ್ತಿದ್ದು, ರಾಷ್ಟ್ರೀಯವಾದಿ ಸಮಾಜ ನಿರ್ಮಿಸಲು ಪ್ರತಿಯೊಬ್ಬರಿಗೂ ದೇಶಪ್ರೇಮ ಮೂಡಿ ಸುವ ಶಿಕ್ಷಣ ಅಗತ್ಯವಾಗಿದೆ. ನಾವು ಬ್ರಿಟಿಷ್ ಮಾದರಿ ಶಿಕ್ಷಣ ವ್ಯವಸ್ಥೆಯಿಂದ ಇನ್ನೂ ಮುಕ್ತವಾಗಿಲ್ಲ. ಹೀಗಾಗಿ ಒಂದು ಅಥವಾ ಎರಡನೇ ತರಗತಿಯಲ್ಲಿ ನೈತಿಕ ಶಿಕ್ಷಣದ ಪಾಠಗಳನ್ನು ಅಳವಡಿಸುತ್ತೇವೆ. ಹೀಗಾಗಿ ರಾಷ್ಟ್ರೀಯವಾದಿ ಶಿಕ್ಷಣ ವ್ಯವಸ್ಥೆ ಅಳವಡಿಸಲು ತೀರ್ಮಾನಿಸಿದ್ದೇವೆ ಎಂದರು. ಶಿಕ್ಷಣ ವ್ಯವಸ್ಥೆಯನ್ನು ಬದಲಾವಣೆ ಮಾಡದಿದ್ದರೆ ಜನ ಜೀವನದಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ ಎಂಬುದು ಪ್ರಧಾನಿ ಮೋದಿ ಅವರ ಪ್ರತಿಪಾದನೆಯಾಗಿದ್ದು, ಇದೇ ಹಾದಿಯಲ್ಲಿ ರಾಜ್ಯ ಸರ್ಕಾರ ಮುನ್ನಡೆಯುತ್ತಿದೆ.

ನಮಗೆ ದೇಶದಲ್ಲಿ ಔಪಚಾರಿಕ ಶಿಕ್ಷಣ ಬಹಳಷ್ಟು ಕಡೆಗಳಲ್ಲಿ ಸಿಗುತ್ತದೆ. ತಾಯಿ, ನಂತರ ಗುರುಗಳಿಂದಲೂ ಶಿಕ್ಷಣ ದೊರೆಯುತ್ತಿದೆ. ಆದರೆ ನೈತಿಕ ಶಿಕ್ಷಣ ಮತ್ತು ರಾಷ್ಟ್ರೀಯವಾದಿ ಶಿಕ್ಷಣ ದೊರೆಯುವುದಿಲ್ಲ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರ ಸ್ವಾವಲಂಬಿ ಭಾರತ ನಿರ್ಮಾಣ ಮಾಡಲು ಧಾರ್ಮಿಕ ಸಮುದಾಯ ಒಳಗೊಂಡಂತೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು. ದೇಶದಲ್ಲಿ ಹಲವಾರು ಸಮಸ್ಯೆಗಳಿದ್ದು, ಇವೆಲ್ಲವುಗಳಿಗೂ ಪರಿಹಾರಗಳಿವೆ. ಜೈನ ಧರ್ಮ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸ್ವಾವಲಂಬಿ ಭಾರತದ ಚಿಂತನೆಗಳನ್ನು ನೀಡಿದ್ದಾರೆ. ಇಂತಹ ಚಿಂತನೆಗಳನ್ನು ಸಾಕಾರಗೊಳಿಸಲು ಧಾರ್ಮಿಕ ವರ್ಗ ಕೈಜೋಡಿಸಬೇಕು ಎಂದರು.

ಹಿಂಸೆಯಿಂದ ಯಾವುದೇ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ. ಅಹಿಂಸೆಯೇ ಎಲ್ಲದಕ್ಕೂ ಮದ್ದು ಎಂದು ಜೈನ ಧರ್ಮ ನಮಗೆ ಕಲಿಸಿಕೊಟ್ಟಿದೆ. ಇದೇ ಉದ್ದೇಶದಿಂದ ನಮ್ಮ ಪೂರ್ವಜರು ವಸುದೈವ ಕುಟುಂಬಕಂ ಎಂಬ ಪರಿಕಲ್ಪನೆಯನ್ನು ನೀಡಿದ್ದಾರೆ. ಇಡೀ ವಿಶ್ವ, ಇಡೀ ಬ್ರಹ್ಮಾಂಡ ನಮ್ಮ ಪರಿವಾರವಾಗಿದ್ದು, ನಾವು ಕೇವಲ ಪರಿವಾರದ ಸದಸ್ಯರು. ಇದೇ ಮಾರ್ಗದಲ್ಲಿ ನಡೆಯುವುದು ನಮ್ಮ ದ್ಯೇಯವಾಗಿದೆ. ಎಲ್ಲರೂ ಸುಖಿಯಾಗಿದ್ದರೆ, ಎಲ್ಲರೂ ನಿರೋಗಿಯಾಗುತ್ತಾರೆ. ನಾವು ಬದುಕಬೇಕು. ಮತ್ತೊಬ್ಬರಿಗೂ ಬದಕಲು ಬಿಡಬೇಕು. ನಮ್ಮ ಬದುಕು ಪ್ರೇಮ ಭಾವನೆಯಿಂದ ಕೂಡಿರಬೇಕು. ಇಂತಹ ಮನೋಭಾವನೆಗಳಿಂದ ತೊಂದರೆಗಳು ದೂರಾಗಲಿವೆ ಎಂದು ಹೇಳಿದರು.

ಸಂಸದ ಪಿ.ಸಿ.ಮೋಹನ್ ಮಾತನಾಡಿ, ಕಳೆದ 70 ವರ್ಷಗಳಲ್ಲಿ ಆಗದ ಬದಲಾವಣೆ ಕೇವಲ 8 ವರ್ಷಗಳಲ್ಲಿ ಆಗಿದೆ. ದೇಶದ ಗೌರವ ಎತ್ತಿ ಹಿಡಿಯುವ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಎಂಟು ವರ್ಷಗಳಲ್ಲಿ ಮಾಡಿದ್ದಾರೆ. ಇವರ ಸಾಧನೆಯಿಂದಾಗಿ ಇಂದು ಜಗತ್ತಿನ ನಾಯಕರಾಗಿ ಹೊರ ಹೊಮ್ಮಿದ್ದಾರೆ ಎಂದರು.

ಕಾಲ ಬದಲಾಗುತ್ತಿದೆ. ಸಣ್ಣ ಮಗು ಕೂಡ ಹತ್ತು ನಿಮಿಷ ಮೊಬೈಲ್ ಇಲ್ಲದೇ ಇರಲು ಸಾಧ್ಯವಾಗುತ್ತಿಲ್ಲ. ಸನ್ಯಾಸ ಸ್ವೀಕರಿಸಲು ಆಗಮಿಸಿರುವವರು ಶ್ರೀಮಂತ ಕುಟುಂಬದವರು. ಇವರು ನಾಳೆಯಿಂದ ವಾಹನಗಳಲ್ಲಿ ಓಡಾಡುವಂತಿಲ್ಲ. ಯಾರೋ ಕೊಟ್ಟಿರುವುದನ್ನು ತಿನ್ನಬೇಕಾಗುತ್ತದೆ. ಇದೊಂದು ಕಠೋರವಾದ ತಪಸ್ಸು ಎಂದರು.

ಉದಯ್ ಗರುಡಾಚಾರ್ಯ. ಆಚರಿಯಾ ನಾರಥಸ್ಸುರಿಜಿ, ಆಚಾರ್ಯ ವರ್ಧ ಮಾನ್ ಸಾಗರ್ ಜೀ, ಮಿಥಾಲಾಲ್ ಜೈನ್ ಆಂಕೋರ್ ಅವರು ಪ್ರವಚನ ನೀಡಿದರು. ಸಮಾರಂಭದಲ್ಲಿ ಶಾಸಕರಾದ ಜಮೀರ್ ಅಹಮದ್ ರಾಜಸ್ಥಾನ್ ಜೈನ ಶ್ವೇತಾಂಬರ ಮೂರ್ತಿ ಪೂಜಕ್ ಸಂಘ ಟ್ರಸ್ಟ್ ನ ಮುಖಂಡರಾರದ ಇಂದರ್ ಚಂದ್ ನಹಾರ್, ಪ್ರಕಾಶ್ ಪಿರ್ಗಲ್, ಪ್ರವೀಣ್ ಚೌಹಾನ್, ಕಿಶೋರ್ ಜೈನ್, ಇಂದರ್ ಚಂದ್ ನಹಾರ್, ಹೀರಾ ಲಾಲ್ ಕೊಠಾರಿ, ಸುಶೀಲ್ ತಲೇಸಾರಾ, ಸಿದ್ದಾರ್ಥ್ ಬೋಹ್ರಾ, ತಾರಾಚಂದ್ ಜೈನ್ ಮತ್ತಿತರರು ಉಪಸ್ಥಿತರಿದ್ದರು. ಸಮಿತಿ ಸಂದೇಶ ನಿಡಗುಂಡ, ಶಿವಯೋಗಿ, ಸಾ.ಶಿ. ಮರುಳಯ್ಯ, ಸಿದ್ದಯ್ಯ ಪುರಾಣಿಕರನ್ನ ಪಠ್ಯ ಕೈ ಬಿಟ್ಟಿದ್ದರು. ಅದನ್ನೂ ಈಗ ಸೇರಿಸಲಾಗಿದೆ.

ರಾಜಕೀಯ ಲಾಭಕ್ಕೆ ಕಾಂಗ್ರೆಸ್ ಯತ್ನ

ಯಾರೂ ಪ್ರಶ್ನೆ ಮಾಡಿರುವುದಿಲ್ಲ. ವಿವಾದವಿಲ್ಲದೆ, ಹೊಸ ಪಠ್ಯಪುಸ್ತಕ ರಚನೆಯಾಗಿದೆ. ಪಿಯು ಪಠ್ಯ ಪರಿಷ್ಕರಣೆಗೂ ಶಿಕ್ಷಣ ಇಲಾಖೆ ಸ್ಪಂದಿಸಿದೆ ಎಂದರು.

ಮೊಗಲರು ಅಕ್ರಮಣ ಮಾಡಿದ್ದು ಏಕೆ ಅಂತ ಹೇಳಲೇ ಇಲ್ಲ. ಮೊಗಲರು ಆಡಳಿತ ಮಾಡಿದ್ದಾರೆ ಅಂತ ಹೇಳುತ್ತಲೇ ಇರುತ್ತಾರೆ. ಮೊಗಲರು, ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದನ್ನು ಪಠ್ಯದಲ್ಲಿ ಅಳವಡಿಸಿದ್ದೇವೆ. ಕಾಶ್ಮೀರದ ಮಹಾರಾಜ ಅಸ್ಸಾಂ, ತಮಿಳುನಾಡು ರಾಜರ ಪಠ್ಯವೂ ಇದೆ ಎಂದು ಸಮರ್ಥನೆ ಮಾಡಿಕೊಂಡರು.

ಸಂಗೊಳ್ಳಿರಾಯಣ್ಣ, ಮದಕರಿ ನಾಯಕ, ಕಿತ್ತೂರು ರಾಣಿಚೆನ್ನಮ್ಮ, ರಾಣಿ ಅಬ್ಬಕ್ಕ, ಹತ್ತನೇ ತರಗತಿ ಪುಸ್ತಕದಲ್ಲಿ ಒಂದು ಸಾಲೂ ಇಲ್ಲ. ಆದರೆ ಟಿಪ್ಪುವಿನ ಬಗ್ಗೆ ವಿಸ್ತಾರವಾದ ಪಠ್ಯವಿದೆ. ಹಿಂದಿನ ಕಾಂಗ್ರೆಸ್ ಸರ್ಕಾರ ಮಕ್ಕಳ ತಲೆಯಲ್ಲಿ ಹಿಂದೂ, ಮುಸ್ಲಿಂ ವರ್ಗಭೇದ ಮಾಡಿದೆ. ಹಿಂದೂ ನಾಯಕರಿದ್ದರೆ, ಅದನ್ನು ತೆಗೆಯುವ ಕೆಲಸ ಮಾಡಿದ್ದಾರೆ ಎಂದು ದೂರಿದರು. ಮೇ 16ರಿಂದ ಶಾಲೆಗಳು ಆರಂಭವಾಗಿವೆ. ಯಾವುದೇ ಅಡೆತಡೆಗಳಿಲ್ಲದೆ ನಡೆಯುತ್ತಿವೆ. ಶಾಲೆ ಆರಂಭವಾಗುವುದಕ್ಕೂ ಮುನ್ನವೇ 24 ಸಾವಿರ ಅತಿಥಿ ಶಿಕ್ಷಕರನ್ನು ಲೋಪವಿಲ್ಲದೇ ನೇಮಕ ಮಾಡಿದ್ದೇವೆ. ಈ ಶಿಕ್ಷಕರು ಯಾರ ಮನೆಯ ಬಾಗಿಲಿಗೂ ಬರಲಿಲ್ಲ. ಇಂತಹ ಸನ್ನಿವೇಶ ಕೆಲವರಿಗೆ ಸಹಿಸಲಾಗುತ್ತಿಲ್ಲ. ಮಕ್ಕಳು ಕಲಿಕೆ ಮಾಡಲಾಗದ್ದನ್ನು ತೆಗೆದಿದ್ದೇವೆ. ಅವರ ಭವಿಷ್ಯದ ದೃಷ್ಟಿಯಿಂದ ಕೆಲವು ಪಠ್ಯಗಳನ್ನು ಸೇರಿಸಿದ್ದೇವೆ ಎಂದರು.

ಕಾಂಗ್ರೆಸ್ ಅಭ್ಯರ್ಥಿಗಳು


ಅವರಿಗೆ ಅವಕಾಶ ನೀಡಿದೆ. ಆ ಮೂಲಕ ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಹಗ್ಗ ಜಗ್ಗಾಟಕ್ಕೆ ಬೇಸತ್ತ ಹೈಕಮಾಂಡ್ ಹೊಸ ಅಭ್ಯರ್ಥಿಗಳಿಗೆ ಮಣೆ ಹಾಕಿದೆ. ರಾಜ್ಯ ಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ವಿಧಾನಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಕೈ ಚಳಕ ಇಲ್ಲಿ ಕೆಲಸ ಮಾಡಿದೆ ಎನ್ನಲಾಗಿದೆ. ಬಿ.ಕೆ.ಹರಿಪ್ರಸಾದ್ ಅವರು ಇತ್ತೀಚೆಗೆ ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ ಸಿದ್ದರಾಮಯ್ಯ ಅವರ ಅಭ್ಯರ್ಥಿ ಎಂ.ಆರ್.ಸೀತಾರಾಂ ಅವರಿಗೆ ಈ ಬಾರಿ ಮಣೆ ಹಾಕಬಾರದು ಎಂದು ಒತ್ತಡ ಹೇರಿದ್ದರು ಎನ್ನಲಾಗಿದೆ. ಈ ನಡುವೆ ಏಕಾಏಕಿ ದೆಹಲಿಯಲ್ಲಿ ಮಧ್ಯ ಪ್ರವೇಶ ಮಾಡಿದ ಮಲ್ಲಿಕಾರ್ಜುನ ಖರ್ಗೆ ಅಭ್ಯರ್ಥಿಗಳ ಆಯ್ಕೆಯಲ್ಲಿ ಮಹತ್ವದ ಪಾತ್ರ ವಹಿಸಿದರು ಎಂದು ತಿಳಿದು ಬಂದಿದೆ. ನಾಮಪತ್ರ ಸಲ್ಲಿಸಲು ನಾಳೆ (ಮೇ 24) ಕಡೆಯ ದಿನವಾಗಿದ್ದು, ಈ ಇಬ್ಬರೂ ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆ ಸಲ್ಲಿಸಲಿದ್ದಾರೆ.

'ಅನಾಥ' ಮಾಡಿದ ಮಹಾ ಪ್ರೇಯಸಿ!

ಎಂದು ಪೊಲೀಸರ ವಿಚಾರಣೆ ವೇಳೆ ತಿಳಿದುಬಂದಿದೆ. ಇವರ ಸಂಚಿನಂತೆ ಕಳೆದ ಮೇ 8ರಂದು ಕಾರ್ಯನಿಮಿತ್ತ ತಾನು ರಾಯಚೂರಿಗೆ ತೆರಳಿದ್ದು, ಮೈಸೂರಿಗೆ ಹಿಂದಿರುಗಲು ಬಸ್ ನಿಲ್ದಾಣದಲ್ಲಿ ಕುಳಿತಿದ್ದಾಗ ಮಹಿಳೆ ಯೋರ್ವಳು ಮಗುವನ್ನು ತನ್ನ ಕೈಗಿತ್ತು, ಶೌಚಾಲಯಕ್ಕೆ ಹೋಗಿ ಬರುವುದಾಗಿ ಹೋದವಳು 2–3 ಗಂಟೆ ಕಾದರೂ ಹಿಂದಿರುಗಲಿಲ್ಲ. ಹೀಗಾಗಿ ತಾನು ಮೈಸೂರಿಗೆ ಮಗುವನ್ನು ತಂದಿರುವುದಾಗಿ ಹೆಚ್.ಡಿ.ಕೋಟೆ ತಾಲೂಕಿನ ರಘು ಮೇ 9ರಂದು ಲಷ್ಕರ್ ಪೊಲೀಸ್ ಠಾಣೆಗೆ ಮಗುವನ್ನು ಒಪ್ಪಿಸಿದ್ದ. ಈ ಮಗುವಿನ ಪೋಷಣೆ ಮತ್ತು ರಕ್ಷಣೆಗಾಗಿ ಲಷ್ಕರ್ ಠಾಣೆ ಪೊಲೀಸರು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಒಪ್ಪಿಸಿದ್ದು, ಮಂಡ್ಯದ ಕ್ಯಾತಂಗೆರೆಯಲ್ಲಿರುವ ವಿಶೇಷ ದತ್ತು ಕೇಂದ್ರವಾದ ವಿಕಸನ ಜೋಗುಳ ದತ್ತು ಸೇವಾ ಸಂಸ್ಥೆಯಲ್ಲಿ ಮಗುವನ್ನು ಪೋಷಿಸಲಾಗುತ್ತಿತ್ತು. ಮೇ 11ರಂದು ಸದರಿ ಸೇವಾಕೇಂದ್ರದ ಘಟಕಾಧಿಕಾರಿ ಶ್ರೀಮತಿ ಎನ್.ಅಪೇಕ್ಷಿತಾ, ಮಗುವನ್ನು ತ್ಯಜಿಸಿ, ಅದನ್ನು ನಿರಾಶ್ರಿತರನ್ನಾಗಿ ಮಾಡಿದ ಮಗುವಿನ ಪೋಷಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರು ನೀಡಿದ ಮೇರೆಗೆ ಲಷ್ಕರ್ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 317ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು. ಅದೇ ವೇಳೆ ಯಾದಗಿರಿಯ ಯೇಸುರಾಜ್ ಅವರು ಯಾದಗಿರಿ ಗ್ರಾಮಾಂತರ ಠಾಣೆಯಲ್ಲಿ ತನ್ನ ಪತ್ನಿ ಮತ್ತು ಮಗು ನಾಪತ್ತೆಯಾಗಿರುವ ಬಗ್ಗೆ ದೂರು ದಾಖಲಿಸಿದ್ದರು. ಆ ಮಾಹಿತಿ ಪಡೆದು ಲಷ್ಕರ್ ಠಾಣೆ ಪೊಲೀಸರು ತನಿಖೆ ನಡೆಸಿದಾಗ ಪ್ರೇಮಿಗಳು ಆಡಿದ ಕಳ್ಳಾಟ ಬಯಲಾಗಿದ್ದು, ಮಗುವಿನ ತಾಯಿ ರೇಣುಕಾ ಅಲಿಯಾಸ್ ಮಮತಾ ಮತ್ತು ಮಗುವನ್ನು ಠಾಣೆಗೆ ತಂದು ಬಿಟ್ಟಿದ್ದ ಆಕೆಯ ಪ್ರಿಯಕರ ಬಿ. ರಘು ಅವರಿಗೆ ಸಿಆರ್‌ಪಿಸಿ ಕಲಂ 41ಎ ಪ್ರಕಾರ ನೋಟೀಸ್ ಜಾರಿ ಮಾಡಿ ವಿಚಾ ರಣೆ ನಡೆಸಿದ ನಂತರ ಬಾಂಡ್ ಬರೆಸಿಕೊಂಡು ಬಿಡುಗಡೆ ಮಾಡಿದ್ದಾರೆ.

ಮೈಸೂರಿಗೆ ಮುಕುಟಪ್ರಾಯವಾದ ಗಣಪತಿ ಸಚ್ಚಿದಾನಂದ ಆಶ್ರಮ

ಕೂಡ್ಲಿ ಶೃಂಗೇರಿ ಮಠಾಧೀಶ ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತಿ ಸ್ವಾಮೀಜಿ ಹೇಳಿಕೆ



ಮೈಸೂರು, ಮೇ 23 (ಆರ್‌ಕೆಬಿ)– ಸಂಪದ್ಭರಿತ ಐತಿಹಾಸಿಕ, ಪಾರಂಪರಿಕ ಮತ್ತು ಸಂಸ್ಕೃತಿ ಹೊಂದಿರುವ ಮೈಸೂರಿಗೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಮುಕುಟಪ್ರಾಯವಾಗಿದೆ ಎಂದು ಕೂಡ್ಲಿ ಶೃಂಗೇರಿ ಮಠಾಧೀಶ ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ಅವಧೂತ ದತ್ತಪೀಠದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ಜಯಂತಿ ಮಹೋತ್ಸವದಲ್ಲಿ ನಡೆದ ಧರ್ಮಸಭೆಯಲ್ಲಿ ಮಾತನಾಡಿದ ಅವರು, ಸಂಗೀತ ಪರಂಪರೆಯಲ್ಲೂ ಮೈಸೂರು ಪ್ರಸಿದ್ಧಿ ಹೊಂದಿದೆ. ಸಾಹಿತ್ಯ, ಸಂಗೀತ ಕ್ಷೇತ್ರದಲ್ಲಿ ಗುರುವೊಬ್ಬರು ಬೇಕಿತ್ತು ಆ ಸ್ಥಾನವನ್ನು ಗಣಪತಿ ಸಚ್ಚಿದಾನಂದ ಶ್ರೀಗಳು ತುಂಬಿದ್ದಾರೆ ಎಂದರು.

ಶ್ರೀಗಳು ದತ್ತನ ಮಹಾನ್ ಉಪಾಸಕರು, ಅವರು ಉಸಿರಾಡುವುದೇ ದತ್ತಾ ಎಂದು. ದತ್ತನ ದರ್ಶನ ಮಾಡಲು ಬಹಳ ದೂರದ ಗಾಣಗಾಪುರಕ್ಕೆ ಹೋಗಬೇಕಿಲ್ಲ. ಆ ಕ್ಷೇತ್ರದ ಮಾದರಿಯಲ್ಲಿಯೇ ಮೈಸೂರಿನ ದತ್ತಕ್ಷೇತ್ರ ಮಾಡಿದ್ದಾರೆ. ಇಲ್ಲಿ ದತ್ತಾತ್ರೇಯನ ವಿರಾಟ್ ರೂಪವನ್ನೇ ಕಣ್ತುಂಬಿಕೊಳ್ಳಬಹುದಾಗಿದೆ. ಹಾಗೆಯೇ ತಿರುಪತಿಗೆ ಹೋಗಲಾಗದವರಿಗೆ ಇಲ್ಲಿಯೇ ವೆಂಕಟೇಶ್ವರನ ದರ್ಶನ ಮಾಡಿಸುತ್ತಿದ್ದಾರೆ ಎಂದರು.

ಶ್ರೀಗಳ ಸಾಧನೆಯನ್ನು ನಾವೆಲ್ಲ ಸ್ಮರಣೆ ಮಾಡಬೇಕು. ಅವರು ಸಾಮಾಜಿಕ, ಧಾರ್ಮಿಕ ಕಾರ್ಯ ಮಾಡಿದ್ದಾರೆ. ವೇದ ಸಂರಕ್ಷಣೆ ಮಾಡುತ್ತಿದ್ದಾರೆ, ಸಂಸ್ಕೃತಿ ಶಿಕ್ಷಣ ನೀಡುತ್ತಿದ್ದಾರೆ. ಹೈದರಾಬಾದ್ ಬಳಿ ಆರೋಗ್ಯ ಕೇಂದ್ರ ಮಾಡಿ ಜನರಿಗೆ ನೆರವಾಗುತ್ತಿದ್ದಾರೆ. ಬೇರೆ, ಬೇರೆ ಕಡೆ ದತ್ತಪೀಠ ಸ್ಥಾಪನೆ ಮಾಡಿದ್ದಾರೆ. ವಿಶ್ವದಲ್ಲೇ ವಿಶೇಷವಾದ ಮೊದಲ ನಾದಮಂಟಪ ನಿರ್ಮಿಸಿದ್ದಾರೆ. ಇದೆಲ್ಲವೂ ಸಾಮಾನ್ಯ ಕೆಲಸವಲ್ಲ ಎಂದು ತಿಳಿಸಿದರು. ಶ್ರೀಗಳ ಅತ್ಯಂತ ವಿಶೇಷ ಧಾರ್ಮಿಕ ಕಾರ್ಯವೆಂದರೆ ಅವರಿಗೆ ಆರು ಬಾರಿ ಗಿನ್ನಿಸ್ ದಾಖಲೆ ಬಂದಿದೆ. 2015ರಲ್ಲಿ ಒಂದೇ ವರ್ಷ ಮೂರು ಬಾರಿ ಗಿನ್ನಿಸ್ ದಾಖಲೆ ಮಾಡಿರುವುದು ಅತ್ಯಂತ ವಿಶೇಷ ಎಂದು ಶ್ಲಾಘಿಸಿದರು.

ಇಲ್ಲಿ ಹನುಮಾನ್ ಚಾಲೀಸ ಪಠಣ ಮಾಡುತ್ತಿರುವುದರಿಂದಲೇ ಆ ಹನುಮನ ಅನುಗ್ರಹದಿಂದ ಕೊರೊನಾ ಹೆದರಿ ಓಡಿ ಹೋಗಿದೆ. ಕೊರೊನಾ ಹೋಗಿದೆ ಎಂದು ನಿರ್ಲಕ್ಷ್ಯ ಮಾಡದೆ ಎಚ್ಚರದಿಂದ ಮುಂದೆಯೂ ಹನುಮಾನ್ ಚಾಲಿಸಾ ಪಠಣ ನಡೆಯಲಿ ಎಂದು ತಿಳಿಸಿದರು.

ಭೀಮನಕಟ್ಟೆ ಮಠದ ಶ್ರೀ ರಘುವರೇಂದ್ರ ತೀರ್ಥ ಶ್ರೀಪಾದರು ಮಾತನಾಡಿ, ಗಣಪತಿ ಸಚ್ಚಿದಾನಂದ ಶ್ರೀಗಳಿಗೆ ಅರ್ಕ ಗಣಪತಿ ಸಿಕ್ಕಿ, ನಂತರ ಅವರು ಮಹತ್ತರದ ಸಾಧನೆ ಮಾಡಿದರು. ಸಂಗೀತದಲ್ಲಿ ಅಪಾರ ಸಾಧನೆ ಮಾಡಿದ್ದಾರೆ ಎಂದು ನುಡಿದರು.

ಶ್ರೀಗಳು ಇಲ್ಲಿ ನಿರ್ಮಿಸಿರುವ ಶುಖವನದಲ್ಲಿ ಗಿಳಿಗಳು ಗಾಯತ್ರಿ ಮಂತ್ರ ಪಠಿಸುತ್ತವೆ. ಇದೆಲ್ಲಾ ಅಸಾಮಾನ್ಯವಾದುದು, ಮನುಷ್ಯರಾದ ನಾವೂ ಕೂಡಾ ಇದನ್ನು ಅನುಸರಿಸಬೇಕು. ಭಕ್ತರು ಶ್ರೀಗಳನ್ನು ಅಪ್ಪಾಜಿ ಎಂದೇ ಕರೆಯುತ್ತಾರೆ. ಆ ರೀತಿಯ ಅಂತಃಕರಣ ಸ್ವಾಮೀಜಿಯವರಲ್ಲಿದೆ. ಹಾಗಾಗಿ ಇಲ್ಲಿಗೆ ಭಕ್ತರು ಬಂದು ಸಮಸ್ಯೆಗಳನ್ನು ಪರಿಹರಿಸಿಕೊಂಡು ಹೋಗುತ್ತಿದ್ದಾರೆ, ಮತ್ತೆ ಮತ್ತೆ ಇಲ್ಲಿಗೆ ಭೇಟಿ ನೀಡಿ ಅವರ ಕೃಪೆಗಳಿಸುತ್ತಿದ್ದಾರೆ ಎಂದು ಹೇಳಿದರು.

ಸಚ್ಚಿದಾನಂದ ತಪೋವನ ಮಠದ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಅವರು ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳಿಗೆ ಶುಭ ಕೋರಿದರು. ಇದೇ ವೇಳೆ ಕೇಂದ್ರ ಸರ್ಕಾರದ ಯೋಗ ವಿಭಾಗದ ವತಿಯಿಂದ 'ಯೋಗ ಮ್ಯಾನ್ಯುಯಲ್' ಹಾಗೂ 'ತೆಲುಗು ಅವತರಣಿಕೆ ನಿವೃತ್ತಿ ಮಾರ್ಗಾಲು' ಪುಸ್ತಕಗಳನ್ನು ಗಣಪತಿ ಶ್ರೀಗಳು ಬಿಡುಗಡೆ ಮಾಡಿದರು. ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಯತಿವರೇಣ್ಯರಿಗೆ ನಮನ ಸಲ್ಲಿಸಿದರು. ನಂತರ ಮೂವರು ಶ್ರೀಗಳು ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಗೌರವ ಸಮರ್ಪಿಸಿದರು.

ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ 80ನೇ ಜಯಂತಿ ಮಹೋತ್ಸವ

ವಿವಿಧ ಕ್ಷೇತ್ರದ ಆಸ್ಥಾನ ಸಾಧಕರಿಗೆ ಸನ್ಮಾನ, ಗೌರವ



ಮೈಸೂರು, ಮೇ 23 (ಆರ್‌ಕೆಬಿ)– ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ಜಯಂತಿ ಮಹೋತ್ಸವದ ಹಿನ್ನೆಲೆಯಲ್ಲಿ 2ನೇ ದಿನವಾದ ಸೋಮವಾರ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ನಡೆದ ಚೈತನ್ಯಾರ್ಚನೆ ಕಾರ್ಯಕ್ರಮದಲ್ಲಿ ಶ್ರೀಗಳು ವಿವಿಧ ಕ್ಷೇತ್ರಗಳ ಹಲವು ಆಸ್ಥಾನ ವಿದ್ವಾಂಸರನ್ನು ಸನ್ಮಾನಿಸಿದರು. ವೇದನಿಧಿ– ವಿ.ಎಸ್.ಗುರುನಾಥ ಘನಪಾಠಿ, ಚೆನ್ನೈ (ಯಜುರ್ವೇದ ಮೀಮಾಂಸ), ಶಾಸ್ತ್ರನಿಧಿ– ಶ್ರೀ ದೆಂದುಕೂರಿ ನಾರಾಯಣ ಶರ್ಮ, ವಿಜಯವಾಡ (ವ್ಯಾಕರಣ, ವೇದಾಂತ, ಮೀಮಾಂಸ, ನ್ಯಾಯಶಾಸ್ತ್ರ), ನಾದನಿಧಿ– ವಿದ್ವಾನ್ ಮಧುರೈ ಟಿ.ಎನ್. ಶೇಷಗೋಪಾಲನ್, ಚೆನ್ನೈ (ಕರ್ನಾಟಕ ಸಂಗೀತ), ನಾದನಿಧಿ– ವಿ.ಮನ್ನಾರ್ ಗುಡಿ ಎ ಈಶ್ವರನ್, ಚೆನ್ನೈ (ಮೃದಂಗ), ಆಸ್ಥಾನ ವಿದ್ವಾನ್– ಮಾಮಿಳ್ಳಪಲ್ಲಿ ಮೃತ್ಯುಂಜಯ ಪ್ರಸಾದ್, ತೆನಾಲಿ (ಶೈವಾಗಮ), ಆಸ್ಥಾನ ರಚಯಿತ– ನಾಗತಿಹಳ್ಳಿ ರಮೇಶ್, ಬೆಂಗಳೂರು (ಬರಹಗಾರರು) ಇವರನ್ನು ಗಣಪತಿ ಸಚ್ಚಿದಾನಂದ ಶ್ರೀಗಳು ಸನ್ಮಾನಿಸಿ, ಗೌರವಿಸಿದರು.

ಪರಮಾತ್ಮನನ್ನು ನೋಡಿದರೆ ಅವರ ಕೃಪೆ ದೊರೆಯುತ್ತದೆ: ಬಳಿಕ ಆಶೀರ್ವಚನ ನೀಡಿದ ಅವರು, ಪರಮಾತ್ಮನನ್ನು ನೋಡಿದರೆ ಗುರುವಿನ ಕೃಪೆ ಸದಾ ನಮ್ಮ ಮೇಲೆ ಇರುತ್ತದೆ ಎಂದು ತಿಳಿಸಿದರು. ನಮ್ಮ ಆಶ್ರಮದಲ್ಲಿ ನಾದ, ವೇದ, ಯಾಗ ನಡೆಯುತ್ತಿದೆ. ವಿದ್ಯೆ, ಅನ್ನ, ಪ್ರಾಣದಾನ ನಡೆಯುತ್ತಿದೆ ನಾವು ಸೂರ್ಯನನ್ನು ನೋಡಿದಾಗ ಅವನ ಕಿರಣ ನಮ್ಮ ಮೇಲೆ ಬೀಳುತ್ತದೆ ಚಂದ್ರನನ್ನು ನೋಡಿದಾಗಲೂ ಅವನ ಕಿರಣ ನಮ್ಮ ಮೇಲೆ ಬೀಳುತ್ತದೆ. ಆ ಬೆಳಕಿನ ಬಿಂಬ ನಮ್ಮನ್ನು ಪಾವನಗೊಳಿಸುತ್ತದೆ ಇದನ್ನು ಭಕ್ತರು ಅರಿತುಕೊಳ್ಳಬೇಕು ಎಂದು ನುಡಿದರು. ದತ್ತಪೀಠದ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಇನ್ನಿತರರು ಉಪಸ್ಥಿತರಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ

ಬಿಜೆಪಿ ಅಭ್ಯರ್ಥಿ ಪರ ಶಾಸಕ ರಾಮದಾಸ್ ಮತಯಾಚನೆ



ಮೈಸೂರು, ಮೇ 23 (ಆರ್‌ಕೆಬಿ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಪರವಾಗಿ ಶಾಸಕ ಎಸ್.ಎ. ರಾಮದಾಸ್, ಕೃಷ್ಣರಾಜ ಕ್ಷೇತ್ರದಲ್ಲಿ ನಾಲ್ಕು ದಿನಗಳ ಪ್ರಚಾರ ಆರಂಭಿಸಿದ್ದು, ಸೋಮವಾರ ಅವರು ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಎಸ್.ಎಲ್.ಭೈರಪ್ಪ ಅವರ ಮನೆಗೆ ಭೇಟಿ ನೀಡಿ, ಮತ ಯಾಚಿಸಿದರು.

ತಮ್ಮ ಬೆಂಬಲಿಗರೊಂದಿಗೆ 57, 59, 47, 57ನೇ ವಾರ್ಡ್‌ಗಳಲ್ಲಿ ಮತಯಾಚಿಸಿದರು. ಗೌರಿಶಂಕರ ಫಂಕ್ಷನ್ ಹಾಲ್‌ನಲ್ಲಿ ನಡೆದ ಪ್ರಮುಖರ ಸಭೆಯಲ್ಲಿ ಮಾತನಾಡಿದ ಶಾಸಕ ಎಸ್.ಎ.ರಾಮದಾಸ್, ಜೂ.13ರಂದು ನಡೆಯಲಿರುವ ಚುನಾವಣೆಗೆ ಸಂಬಂಧಿಸಿದಂತೆ ಕ್ಷೇತ್ರದಲ್ಲಿ ಬೂತ್ ಮಟ್ಟದಲ್ಲಿ ಒಬ್ಬೊಬ್ಬರಿಗೆ 2 ಮತಗಳ ಜವಾಬ್ದಾರಿ ನೀಡಲಾಗಿದೆ. ಕಳೆದ ಬಾರಿ ಶೇ.47ರಷ್ಟು ಮತದಾನವಾಗಿತ್ತು. ಆಗ ಸಣ್ಣ ಅಂತರದಲ್ಲಿ ಪಕ್ಷಕ್ಕೆ ಜಯ ಕೈತಪ್ಪಿತ್ತು. ಈಗ ಹಾಗಾಗದಂತೆ ನಾವು ಚುನಾವಣೆ ಮುಗಿಯುವವರೆಗೂ ಮಹಿಸಿರುವ ಮನೆಗಳಿಗೆ ತೆರಳಿ, ನಮ್ಮ ಪಕ್ಷದ ಕಾರ್ಯಕ್ರಮಗಳ ಬಗ್ಗೆ ಗಮನ ಸೆಳೆದು, ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗೆ ಮತ ಯಾಚಿಸುವಂತೆ ತಿಳಿಸಿದರು.

ಕೃಷ್ಣರಾಜ ಕ್ಷೇತ್ರದಲ್ಲಿ ಪ್ರಮುಖರನ್ನು ಆಯ್ಕೆ ಮಾಡಿದ್ದು, ಅವರ ಮೂಲಕ ನಾವು ಈ ಚುನಾವಣೆಯಲ್ಲಿ ಅತೀ ಹೆಚ್ಚು ಮತವನ್ನು ರವಿಶಂಕರ್ ಅವರಿಗೆ ಕೊಡಿಸಲು ಶ್ರಮಿಸಬೇಕಿದೆ ಎಂದರು.

ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಮಾತನಾಡಿ, ಸಾಮಾನ್ಯ ಕಾರ್ಯಕರ್ತನಾಗಿ ಬೆಳೆದು ಬಂದ ನನಗೆ ಪಕ್ಷ ಎರಡು ಬಾರಿ ಟಿಕೆಟ್ ನೀಡಿದೆ. ನಾನೂ ಕೂಡ ಕೆ.ಆರ್.ಕ್ಷೇತ್ರದವನೇ ಆಗಿದ್ದು, ಕಾರ್ಯಕರ್ತರು ಮುಂಚೂಣಿಯಲ್ಲಿ ನಿಂತು ಕೆಲಸ ನಿರ್ವಹಿಸಿ, ತಮ್ಮ ಗೆಲುವಿಗೆ ಸಹಕರಿಸುವಂತೆ ಮನವಿ ಮಾಡಿದರು.

57, 59, 47, 57ನೇ ವಾರ್ಡ್ ವ್ಯಾಪ್ತಿಯ ಗೋಕುಲ್ ಸ್ಕೂಲ್, ಕೆಪಿಯು ಕಾಲೇಜ್, ಜ್ಯೋತಿ ಸ್ಕೂಲ್ , ಕುವೆಂಪು ಶಾಲೆ, ಬಾಸುದೇವ ಸೋಮಾನಿ ಕಾಲೇಜು, ಸರ್ಕಾರಿ ಪದವಿಪೂರ್ವ ಕಾಲೇಜು ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳು ಹಾಗೂ ಸರ್ಕಾರಿ ಕಚೇರಿಗಳು, ಬ್ಯಾಂಕ್‌ಗಳಿಗೆ ತೆರಳಿ ಮತ ಯಾಚಿಸಿದರು.

ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಮೈಸೂರು ನಗರ ಪ್ರಭಾರಿ ಹೀರೇಂದ್ರ ಶಾ, ಕೆ.ಆರ್. ಕ್ಷೇತ್ರದ ಬಿಜೆಪಿ ಅಧ್ಯಕ್ಷ ಎಂ.ವಡಿವೇಲು, ಪ್ರಧಾನ ಕಾರ್ಯದರ್ಶಿಗಳಾದ ಓಂ ಶ್ರೀನಿವಾಸ್, ನಾಗೇಂದ್ರಕುಮಾರ್, ನಗರ ಪ್ರಧಾನ ಕಾರ್ಯದರ್ಶಿ ವಾಣೀಶ್, ಪಾಲಿಕೆ ಸದಸ್ಯ ಶಿವಕುಮಾರ್, ದಕ್ಷಿಣ ಪದವೀಧರ ಕೆ.ಆರ್.ಕ್ಷೇತ್ರದ ಚುನಾವಣಾ ಸಂಚಾಲಕ ರವಿ, ಸಹ ಸಂಚಾಲಕ ನಾಗಶಂಕರ್, ಮುಖಂಡರಾದ ಪ್ರಸಾದ್‌ಬಾಬು, ಹೇಮಂತ್ ಕುಮಾರ್, ಜಗದೀಶ್, ಅನ್ನಪೂರ್ಣ, ರವಿ, ಸಂತೋಷ್ ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಪರ ವಾಯುವಿಹಾರಿಗಳಲ್ಲಿ ಮಾಜಿ ಶಾಸಕ ಎಂ.ಕೆ.ಎಸ್ ಮನವಿ



ಮೈಸೂರು, ಮೇ 23 (ಆರ್‌ಕೆಬಿ)– ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಪರ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸೋಮವಾರ ಕುಕ್ಕರಳ್ಳಿ ಕೆರೆ ವಾಯುವಿಹಾರಿಗಳಲ್ಲಿ ಮತಯಾಚಿಸಿದರು.

ಸೋಮಶೇಖರ್ ಅವರೊಂದಿಗೆ ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಅವರು ವಾಯುವಿಹಾರಿ ಪದವೀಧರರನ್ನು ಭೇಟಿ ಮಾಡಿ, ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರಿಗೆ ಮತ ನೀಡುವ ಮೂಲಕ ಉತ್ತಮ ಅಭ್ಯರ್ಥಿಯ ಗೆಲುವಿಗೆ ಸಹಕರಿಸುವಂತೆ ಮನವಿ ಮಾಡಿದರು. ಮಂಡ್ಯ ಜಿಲ್ಲೆಯ ಗ್ರಾಮೀಣ ಪ್ರದೇಶದ ಕೆ.ಎಂ.ದೊಡ್ಡಿ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರು ಪದವೀಧರ ಬಂಧುಗಳಲ್ಲಿ ಹಾಗೂ ಸುಶಿಕ್ಷಿತ ಮತದಾರರಲ್ಲಿ ಉತ್ತಮ ಅಭಿಪ್ರಾಯ ಹೊಂದಿದ್ದು, ಅವರ ಆಯ್ಕೆ ಖಚಿತವಾಗಲಿದೆ ಎಂದು ಸೋಮಶೇಖರ್ ಮಾಧ್ಯಮಗಳಿಗೆ ತಿಳಿಸಿದರು.

ಮಂಡ್ಯ ಜಿಲ್ಲೆಯ ಗ್ರಾಮೀಣ ಪ್ರದೇಶದ ಕೆ.ಎಂ.ದೊಡ್ಡಿಯ ಭಾರತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಶಿಕ್ಷಣ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮಂಡ್ಯ ಗಾಂಧಿ ಭವನದ ಅಧ್ಯಕ್ಷರಾಗಿ, ಭಾರತಿ ಸಹಕಾರ ಪತ್ತಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಂದೆ ಜಿ.ಮಾದೇಗೌಡ ಕರ್ನಾಟಕ ಕಂಡ ಅಪರೂಪದ ರಾಜಕಾರಣಿ ಹಾಗೂ ಹೋರಾಟಗಾರ. ಇಂದು ಅವರ ಸುಪುತ್ರ ಮಧು ಜಿ.ಮಾದೇಗೌಡರ ಆಯ್ಕೆ ಬಗ್ಗೆ ಎಲ್ಲೆಡೆ ಪದವೀಧರರ ಒಲವು ವ್ಯಕ್ತವಾಗಿದೆ. ಹಾಗಾಗಿ ಅವರ ಆಯ್ಕೆಗೆ ಸಹಕರಿಸುವಂತೆ ಸೋಮಶೇಖರ್ ಮತದಾರರಲ್ಲಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ಮುಖಂಡರಾದ ರಾಮು, ರವಿ ಇನ್ನಿತರರು ಉಪಸ್ಥಿತರಿದ್ದರು.

ನವಿಲೂರು ಶಾಲೆಗೆ ಶೇ.96ರಷ್ಟು ಫಲಿತಾಂಶ



ಎಂ.ಸಿ.ಮಮತ

ಮೈಸೂರು,ಮೇ 23(ಎಂಟಿವೈ)– ನಂಜನಗೂಡು ತಾಲೂಕಿನ ನವಿಲೂರಿನ ಸರ್ಕಾರಿ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.96ರಷ್ಟು ಫಲಿತಾಂಶ ಲಭಿಸಿದ್ದು, 50 ಮಂದಿಯಲ್ಲಿ 48 ಮಂದಿ ಉತ್ತೀರ್ಣ, ಇಬ್ಬರು ಅನುತ್ತೀರ್ಣರಾಗಿದ್ದಾರೆ ಎಂದು ಶಾಲೆಯ ಮುಖ್ಯಶಿಕ್ಷಕರು ತಿಳಿಸಿದ್ದಾರೆ ಪಾಸಾದವರಲ್ಲಿ ಎಂ.ಸಿ.ಮಮತ ಚಂದ್ರಶೇಖರ್ 625ಕ್ಕೆ 606 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಶಾಲೆಗೆ ಮೊದಲ ಸ್ಥಾನ ಪಡೆದಿದ್ದಾರೆ. 10 ಮಂದಿ ಅತ್ಯುನ್ನತ ಶ್ರೇಣಿಯಲ್ಲಿ, 34 ಪ್ರಥಮ ದರ್ಜೆ, ಇಬ್ಬರು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಹತ್ತನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ

ಮೈಸೂರು, ಮೇ 23– ಮೈಸೂರಿನ ಕುವೆಂಪುನಗರದ ಪಂಚಮಂತ್ರ ರಸ್ತೆಯಲ್ಲಿರುವ ಜ್ಞಾನಗಂಗಾ ಪದವಿ ಪೂರ್ವ ಕಾಲೇಜಿಗೆ 2021–22ನೇ ಸಾಲಿನಲ್ಲಿ ಹತ್ತನೇ ತರಗತಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 580ಕ್ಕಿಂತ ಮೇಲ್ಪಟ್ಟು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಅರ್ಹತಾ ಪ್ರವೇಶ ಪರೀಕ್ಷೆಯ ಮೂಲಕ ಉಚಿತವಾಗಿ ಪ್ರಥಮ ಪಿಯುಸಿಗೆ (ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಿಗೆ) ದಾಖಲು ಮಾಡಿಕೊಳ್ಳಲಾಗುತ್ತದೆ. ಪ್ರವೇಶ ಪರೀಕ್ಷೆಯು ಮೇ 26ರಂದು ಕಾಲೇಜಿನ ಆವರಣದಲ್ಲಿ ನಡೆಯಲಿದೆ. ಮಾಹಿತಿಗೆ ಸಂಪರ್ಕಿಸಿ ಮೊ.: ಸಂಖ್ಯೆ: 8867320033, 9611012411.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ

ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಗೆಲುವಿಗೆ ಪಣ ತೊಡಿ: ಸಾರಾ

● ಪಕ್ಷದ ಪ್ರಚಾರ ಕಚೇರಿ ಉದ್ಘಾಟನೆ ● ಕಾರ್ಯಕರ್ತರು, ಮುಖಂಡರಿಗೆ ಸಾರಾ ಕಿವಿಮಾತು



ಮೈಸೂರು,ಮೇ 23(ಎಂಟಿವೈ)– ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಪಕ್ಷದ ಅಭ್ಯರ್ಥಿ ಹೆಚ್.ಕೆ.ರಾಮು ಗೆಲುವಿಗೆ ಶಕ್ತಿ ಮೀರಿ ಶ್ರಮಿಸಬೇಕು ಎಂದು ಶಾಸಕ ಸಾ.ರಾ.ಮಹೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಆಲಮ್ಮನವರ ಛತ್ರದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಗೆ ಜೆಡಿಎಸ್ ಪ್ರಚಾರ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ದುರಾಡಳಿತದಿಂದಾಗಿ ಇಂದು ರಾಜ್ಯದಲ್ಲಿ ಜೆಡಿಎಸ್‌ಗೆ ವ್ಯಾಪಕ ಬೆಂಬಲ ದೊರೆಯುತ್ತಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ನಾಯಕತ್ವದಲ್ಲಿ ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತವಾಗಿದ್ದು, ಅದಕ್ಕಾಗಿ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯನ್ನು ಗೆಲ್ಲಲೇಬೇಕಾಗಿದೆ. ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಪಣತೊಟ್ಟರೆ ಪಕ್ಷದ ಅಭ್ಯರ್ಥಿ ಹೆಚ್.ಕೆ.ರಾಮು ಗೆಲುವು ಖಚಿತ ಎಂದರು.

ಪ್ರಸ್ತುತ ಸಂದರ್ಭದಲ್ಲಿ ಇಂಧನ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಬಿಸಿ ಜನ ಸಾಮಾನ್ಯರು ತತ್ತರಿಸುವಂತೆ ಮಾಡಿದೆ. ರಾಜ್ಯ ಸರ್ಕಾರದ ಮಿತಿಮೀರಿದ ಭ್ರಷ್ಟಾಚಾರದಿಂದಲೂ ಜನ ಬೇಸತ್ತಿದ್ದಾರೆ. ಕೇಂದ್ರ ಸರ್ಕಾರದ ಹೊಸ ನೀತಿಗಳಿಂದ ಅನೇಕರು ನೌಕರಿ ಕಳೆದುಕೊಂಡಿದ್ದಾರೆ. ಈ ಚುನಾವಣೆಯಲ್ಲಿ ಮತ ಹಾಕುವವರು ಪದವೀಧರರಾಗಿದ್ದಾರೆ. ಅವರು ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಎರಡು ರಾಷ್ಟ್ರೀಯ ಪಕ್ಷಗಳನ್ನು ಧಿಕ್ಕರಿಸಿ, ಜೆಡಿಎಸ್ ಅಭ್ಯರ್ಥಿ ಕೈ ಹಿಡಿಯುವ ವಿಶ್ವಾಸ ಇದೆ. ನಮ್ಮ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಶ್ರಮಪಟ್ಟು ಕೆಲಸ ಮಾಡುವ ಮೂಲಕ ನಮ್ಮ ಅಭ್ಯರ್ಥಿ ಗೆಲುವಿಗೆ ಸಹಕರಿಸಬೇಕು. ರೈತ ಸಂಘ, ಕಾಂಗ್ರೆಸ್, ಬಿಎಸ್‌ಪಿ, ಎಸ್‌ಡಿಪಿಐ ಸೇರಿದಂತೆ ಪಕ್ಷೇತರ ಅಭ್ಯರ್ಥಿಗಳಿಗೆ ಮೊದಲ ಪ್ರಾಶಸ್ತ್ಯ ಮತ ನೀಡುವವರೆಲ್ಲ ಜೆಡಿಎಸ್‌ಗೆ ಎರಡನೇ ಪ್ರಾಶಸ್ತ್ಯ ನೀಡಲಿದ್ದಾರೆ. ಆದರೆ, ಬಿಜೆಪಿಗೆ ಎರಡನೇ ಪ್ರಾಶಸ್ತ್ಯ ನೀಡುವವರೇ ಇಲ್ಲ. ಕಳೆದ ಬಾರಿ ಶ್ರೀಕಂಠೇಗೌಡರು ಎರಡನೇ ಪ್ರಾಶಸ್ತ್ಯ ಮತಗಳಿಂದಲೇ ಗೆದ್ದಿದ್ದರು ಎಂದು ತಿಳಿಸಿದರು.

ಕಾಂಗ್ರೆಸ್ ನಾಯಕರು ಹೇಳುತ್ತಿರುವಂತೆ ಬಿಜೆಪಿಯಲ್ಲಿ ಬಂಡಾಯ ಇರುವುದು ನಿಜ. ಆದರೆ, ಬಿಜೆಪಿ ಬಗ್ಗೆ ನಾನು ಮಾತನಾಡಲ್ಲ. ಹಿಂದೆ ಇದೇ ಕ್ಷೇತ್ರದಲ್ಲಿ ಗೆಲುವು ಪಡೆದಿದ್ದ ಬಿಜೆಪಿಯ ಮಾಜಿ ಎಂಎಲ್‌ಸಿಗೆ ಟಿಕೆಟ್ ಕೈ ತಪ್ಪಿಸಲಾಗಿದೆ. ಆದರೆ, ಕಾಂಗ್ರೆಸ್‌ನವರು ಎಷ್ಟು ಗುಂಪಾಗಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ರಾಜ್ಯ ಮಟ್ಟದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮೂಲ ಕಾಂಗ್ರೆಸ್, ವಲಸೆ ಕಾಂಗ್ರೆಸ್ ಹೀಗೆ ಹಲವು ಗುಂಪುಗಳಿವೆ. ಆದರೆ ಜೆಡಿಎಸ್‌ನಲ್ಲಿ ಇರುವುದು ಹೆಚ್‌ಡಿಕೆ ಗುಂಪು ಮಾತ್ರ ಎಂದರು.

ಮೇ26ರಂದು ದೇವೇಗೌಡರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಕೆ

ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಮೇ 26ರಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಮತ್ತೊಂದು ಸೆಟ್ ನಾಮಪತ್ರ ಸಲ್ಲಿಸಲಿದ್ದಾರೆ. ಅಂದು ಬೆಳಗ್ಗೆ 10.30ಕ್ಕೆ ಆಲಮ್ಮನವರ ಛತ್ರದ ಮುಂಭಾಗದಿಂದ ಪ್ರಾದೇಶಿಕ ಆಯುಕ್ತರ ಕಚೇರಿವರೆಗೆ ಮೆರವಣಿಗೆ ಮೂಲಕ ತೆರಳಿ ನಾಮಪತ್ರ ಸಲ್ಲಿಸಲಾಗುತ್ತದೆ. ಈ ಸಂದರ್ಭದಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ದಕ್ಷಿಣ ಪದವೀಧರ ಕ್ಷೇತ್ರ ವ್ಯಾಪ್ತಿಯ ಜೆಡಿಎಸ್ ಶಾಸಕರು, ವಿಧಾನಪರಿಷತ್ ಸದಸ್ಯರು, ಮುಖಂಡರು, ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ನಗರಾಧ್ಯಕ್ಷ ಚೆಲುವೆಗೌಡ, ಮುಖಂಡರಾದ ಕೆ.ವಿ.ಮಲ್ಲೇಶ್, ಗಂಗಾಧರ್ ಗೌಡ, ಶೈಲೇಂದ್ರ, ರಾಮು, ಹೇಮಾವತಿ, ಕುಮಾರಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಇಂದಿರಾನಗರ-ಪಡುಕೋಟೆ ಕಾವಲ್ ಗ್ರಾಮದಲ್ಲಿ ಮದ್ಯದಂಗಡಿ ತೆರೆಯಲು ವಿರೋಧ

● ಗ್ರಾಮಸ್ಥರು, ಸ್ತ್ರೀ ಶಕ್ತಿ ಸಂಘದವರಿಂದ ಪ್ರತಿಭಟನೆ ● ಇಂದಿರಾನಗರ ಗ್ರಾಪಂ ಪಿಡಿಓಗೆ ಮನವಿ



ಹೆಚ್.ಡಿ.ಕೋಟೆ, ಮೇ 23(ಮಂಜು)– ತಾಲೂಕಿನ ಇಂದಿರಾನಗರ-ಪಡುಕೋಟೆ ಕಾವಲ್ ಗ್ರಾಮದಲ್ಲಿ ಗ್ರಾಪಂ ಸದಸ್ಯರೊಬ್ಬರು ಮದ್ಯದಂಗಡಿ ತೆರೆಯುವ ಹುನ್ನಾರ ನಡೆಸಿದ್ದು, ಇದಕ್ಕೆ ಗ್ರಾಮ ಪಂಚಾಯಿತಿ ವತಿಯಿಂದ ನಿರಾಕ್ಷೇಪಣಾ ಪತ್ರ ನೀಡಬಾರದು ಎಂದು ಆಗ್ರಹಿಸಿ ಗ್ರಾಮದ ಮುಖಂಡರು, ಯುವಕರು ಮತ್ತು ಸ್ತ್ರೀ ಶಕ್ತಿ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

ಇಂದಿರಾನಗರದ ಗ್ರಾಮ ಪಂಚಾಯಿತಿ ಕಚೇರಿ ಸಭಾಂಗಣದ ಮುಂಭಾಗ ಸೋಮವಾರ ಸಮಾವೇಶಗೊಂಡ ಪ್ರತಿಭಟನಾಕಾರರು, ಮದ್ಯದಂಗಡಿ ತೆರೆಯಲು ಅವಕಾಶ ನೀಡಬಾರದು ಎಂದು ಘೋಷಣೆ ಕೂಗಿ, ಪಿಡಿಓ ಅಂಕಪ್ಪ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಗ್ರಾಮದ ಮುಖಂಡ ಸುರೇಶ್ ಮಾತನಾಡಿ, ಕಳೆದ ಮೂರು ವರ್ಷಗಳ ಹಿಂದೆ ತಾಲೂಕಿನ ಇಂದಿರಾನಗರ-ಪಡುಕೋಟೆ ಗ್ರಾಮದ ಪ್ರಮುಖ ರಸ್ತೆಯಲ್ಲಿ ಮದ್ಯದಂಗಡಿ ತೆರೆಯಲಾಗಿದೆ. ಈ ಅಂಗಡಿ ತೆರೆಯುವ ಸಂದರ್ಭದಲ್ಲಿಯೂ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ್ದರು. ಆದರೆ, ಗ್ರಾಮಸ್ಥರ ಮಾತಿಗೆ ಮನ್ನಣೆ ನೀಡದೆ ಮದ್ಯದಂಗಡಿ ತೆರೆಯಲು ಅವಕಾಶ ನೀಡಲಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

ಮದ್ಯದಂಗಡಿ ತೆರೆದ ನಂತರ ಗ್ರಾಮದಲ್ಲಿ ಶಾಂತಿ ಕದಡಿದೆ. ಮದ್ಯದಂಗಡಿ ಸುತ್ತಮುತ್ತ ಅನೇಕ ಮನೆಗಳಿದ್ದು, ಮಹಿಳೆಯರು ಮತ್ತು ಮಕ್ಕಳ ಎದುರಿನಲ್ಲಿಯೇ ಮದ್ಯದಂಗಡಿಗೆ ಬರುವ ಕೆಲವರು ಕುಡಿದು ಅವಾಚ್ಯ ಶಬ್ದಗಳನ್ನು ಬಳಸಿ ಮಾತನಾಡುವುದು ದಿನ ನಿತ್ಯ ನಡೆಯುತ್ತಿದೆ. ಕೆಲವರಂತೂ ಕುಡಿದು ಅಕ್ಕ-ಪಕ್ಕದ ಮನೆ ಕಾಂಪೌಂಡ್ ಹಾಗೂ ಮನೆ ಗೋಡೆ ಬಳಿಯೇ ಮೂತ್ರ ವಿಸರ್ಜನೆ ಮಾಡುತ್ತಾರೆ ಎಂದು ದೂರಿದರು.

ಮದ್ಯದಂಗಡಿ ಇರುವ ರಸ್ತೆ ಅಕ್ಕಪಕ್ಕ ಒತ್ತುವರಿಯಾಗಿದೆ. ಇದರಿಂದ ಮುಖ್ಯ ರಸ್ತೆ ಕಿರಿದಾಗಿದ್ದು, ಕುಡಿದ ವಾಹನ ಚಾಲನೆ ಮಾಡಿ ಹಲವು ಅಪಘಾತಗಳು ನಡೆದಿವೆ. ಕಳೆದ ತಿಂಗಳಲ್ಲಿ ಹಿಟ್ ಅಂಡ್ ರನ್ ಪ್ರಕರಣ ಕೂಡ ನಡೆದಿದ್ದು, ಹಾಡಿಯ ವ್ಯಕ್ತಿಯೊಬ್ಬ ಮೃತಪಟ್ಟಿದ್ದಾರೆ. ಇಷ್ಟಾದರೂ, ಗ್ರಾಪಂ ಸದಸ್ಯರೊಬ್ಬರು ಗ್ರಾಮಸ್ಥರ ವಿರೋಧದ ನಡುವೆಯೂ ಗ್ರಾಮದಲ್ಲಿ ಮತ್ತೊಂದು ಮದ್ಯದಂಗಡಿ ಪ್ರಾರಂಭಿಸಲಾಗುವುದು ಎನ್ನುತ್ತಿದ್ದಾರೆ. ಇದಕ್ಕೆ ಅಧಿಕಾರಿಗಳು ಅವಕಾಶ ನೀಡಬಾರದು ಎಂದು ಆಗ್ರಹಿಸಿದರು.

ಈ ಸಂಬಂಧ ಶಾಸಕ ಅನಿಲ್ ಚಿಕ್ಕಮಾದು, ತಾಲೂಕಿನ ಅಬಕಾರಿ ಇಲಾಖೆ, ತಹಸೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳಿಗೆ ಮನವಿ ನೀಡಲಾಗಿದೆ. ಒಂದು ವೇಳೆ ಗ್ರಾಮದಲ್ಲಿ ಮದ್ಯದಂಗಡಿ ತೆರೆದರೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಗ್ರಾಮದ ಮುಖಂಡರಾದ ಆರ್.ಪಿ.ಬಾಲಕೃಷ್ಣ, ತಂಗವೇಲು, ಹೆಚ್.ಡಿ.ಸುರೇಶ್, ಟಿ.ಆರ್.ವಿನೋದನ್, ಅನಿಲ್, ಪಿ.ಎಂ.ಶ್ರೀನಿವಾಸ್, ಆರ್.ಜಯಶಂಕರ್, ಎಸ್.ಶೇಖರ್, ಶಾಜು, ಚಂದ್ರಬೋಸ್, ಹರಿದಾಸ್, ಪ್ರಿಯದರ್ಶಿನಿ, ನಾರಾಯಣಗುರು, ಚೈತನ್ಯ, ಲಕ್ಷ್ಮೀ, ಮಹಿಳಾ ಸಂಘದ ಸದಸ್ಯರು, ಅರಳೀಕಟ್ಟೆ ಹಾಡಿ, ಪಡುಕೋಟೆ, ಮುಂಟಿಹಾಡಿ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರುಗಳ ರಕ್ಷಣೆ



ನಂಜನಗೂಡು, ಮೇ 23(ಸುದರ್ಶನ್)– ಅಕ್ರಮವಾಗಿ ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರುಗಳನ್ನು ತಾಲೂಕಿನ ಹುಲ್ಲಹಳ್ಳಿ ಸಮೀಪ ರಕ್ಷಿಸಿರುವ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಎಸ್‌ಐ ಮಹೇಶ್ ಕುಮಾರ್ ನೇತೃತ್ವದ ಸಿಬ್ಬಂದಿ ಐಚರ್ ವಾಹನವನ್ನು ತಡೆದು ಪರಿಶೀಲಿಸಿದಾಗ ವಾಹನದಲ್ಲಿ 1.35 ಲಕ್ಷ ರೂ. ಮೌಲ್ಯದ 4 ಎಮ್ಮೆ, 1 ಹಸು ಹಾಗೂ 24 ಕರುಗಳನ್ನು ವಶಕ್ಕೆ ಪಡೆದು ರಕ್ಷಿಸಿ ಮೈಸೂರಿನ ಪಿಂಜರಾಪೋಲ್‌ಗೆ ಕಳುಹಿಸಿದರು. ಅಲ್ಲದೇ ವಾಹನದಲ್ಲಿದ್ದ ಅಬ್ದುಲ್, ವಹೀದ್ ಹಾಗೂ ರಿಯಾಜ್ ಅವರನ್ನು ಬಂಧಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ದೊಡ್ಡಯ್ಯ, ಮಹೇಂದ್ರ, ಜೀಪ್ ಚಾಲಕ ನಜೀರ್ ವಾಲೇಕರ್ ಭಾಗಿಯಾಗಿದ್ದರು.

ಮೋದಿ ಜನಪರ ಕಾರ್ಯ ಬಿಜೆಪಿ ಗೆಲುವಿಗೆ ಸಹಕಾರಿ



ತಿ.ನರಸೀಪುರ, ಮೇ 23(ಎಸ್‌ಕೆ)– ಪ್ರಧಾನಿ ಮೋದಿ ಅವರ ನೇತೃತ್ವದ ಸರ್ಕಾರದ ಜನಪರ ಕಾರ್ಯಕ್ರಮಗಳು ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವಿಗೆ ಸಹಕಾರಿಯಾಗಲಿದೆ ಎಂದು ಮಾಜಿ ಶಾಸಕ ಎನ್.ಎಲ್.ಭಾರತೀಶಂಕರ್ ಹೇಳಿದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿರುವ ಮೈ.ವಿ.ರವಿಶಂಕರ್ ಪರವಾಗಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿದ್ಯೋದಯ ಕಾಲೇಜು, ಪಿಆರ್‌ಎಂ ಕಾಲೇಜು, ನ್ಯಾಯಾಲಯದಲ್ಲಿ ಮತಯಾಚಿಸಿ ಅವರು ಮಾತನಾಡಿದರು.

ತಿ.ನರಸೀಪುರ ಕ್ಷೇತ್ರ ಮೊದಲಿನಿಂದಲೂ ಬಿಜೆಪಿ ವಶದಲ್ಲಿದ್ದು, ಮೊದಲಿಗೆ ಎ.ಕೆ.ಸುಬ್ಬಯ್ಯ, ಬಿ.ಆರ್.ಕೃಷ್ಣಮೂರ್ತಿ, ಗೋ.ಮಧುಸೂದನ್ ಪಕ್ಷದಿಂದ ಗೆಲುವು ಸಾಧಿಸಿದ್ದಾರೆ. ಈ ನಡುವೆ ಎರಡು ಬಾರಿ ಜೆಡಿಎಸ್‌ನ ಶ್ರೀಕಂಠೇಗೌಡರು ಗೆಲುವು ಸಾಧಿಸಿರುವುದನ್ನು ಬಿಟ್ಟರೆ ಇದು ಬಹುತೇಕ ಬಿಜೆಪಿ ಕ್ಷೇತ್ರ. ಕಳೆದ ಬಾರಿ 180 ಮತಗಳ ಅಂತರದಿಂದ ಪರಾಭವಗೊಂಡಿದ್ದ ಮೈ.ವಿ.ರವಿಶಂಕರ್ ಅವರನ್ನು ಪಕ್ಷ ಮತ್ತೆ ಅಭ್ಯರ್ಥಿಯನ್ನಾಗಿ ಮಾಡಿದ್ದು, ಈ ಬಾರಿ ಅವರ ಗೆಲುವು ಖಚಿತವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರ ಸಿಲಿಂಡರ್ ಬೆಲೆಯನ್ನು 200 ರೂ. ಹಾಗೂ ಪೆಟ್ರೋಲ್, ಡೀಸೆಲ್ ದರವನ್ನು ಇಳಿಕೆ ಮಾಡುವ ಮೂಲಕ ಜನರ ಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡಿದೆ. ಮೋದಿ ಅವರು ಮಾಡಿರುವ ಜನಪರ ಕಾರ್ಯಕ್ರಮಗಳು, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪ್ರತಿಷ್ಠೆ ಹೆಚ್ಚಿಸಿದೆ. ಬಸವರಾಜ್ ಬೊಮ್ಮಾಯಿ ಹಾಗೂ ಯಡಿಯೂರಪ್ಪ ಸರ್ಕಾರದಲ್ಲಿ ಆಗಿರುವ ಕೆಲಸಗಳು ಮತದಾರರಿಗೆ ತಲುಪಿದ್ದು, ಇದು ನಮ್ಮ ಅಭ್ಯರ್ಥಿಯ ಗೆಲುವಿಗೆ ಸಹಕಾರಿಯಾಗುತ್ತದೆ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾತನಾಡಿ, ಪಕ್ಷದ ಅಭ್ಯರ್ಥಿ ರವಿಶಂಕರ್ ಮೊದಲಿನಿಂದಲೂ ಸಂಘಟನೆ ಮಾಡಿಕೊಂಡು ಬಂದಿದ್ದು, ಪಕ್ಷದಲ್ಲಿ ಕೆಲಸ ಮಾಡಿದವರಿಗೆ ಆದ್ಯತೆ ನೀಡಲಾಗಿದೆ. ಈ ನಿಟ್ಟಿನಲ್ಲಿ ನಮ್ಮ ಅಭ್ಯರ್ಥಿ ಹೆಚ್ಚಿನ ಮತಗಳ ಅಂತರದಿಂದ ಜಯ ಗಳಿಸಲಿದ್ದಾರೆ ಎಂದರು. ಈ ವೇಳೆ ಜಿಲ್ಲಾ ಕಾರ್ಯದರ್ಶಿ ಕರೋಹಟ್ಟಿ ಬಸವರಾಜು, ಹಿರಿಯ ಮುಖಂಡ ಕರೋಹಟ್ಟಿ ಮಹದೇವಯ್ಯ, ಪುರಸಭಾ ಸದಸ್ಯರಾದ ಎಸ್.ಕೆ.ಕಿರಣ್, ಅರ್ಜುನ್, ರಮೇಶ್, ಎನ್.ಲೋಕೇಶ್, ಅಕ್ಕಿ ನಂಜುಂಡಸ್ವಾಮಿ, ಎಸ್‌ಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ್, ದಾಸಯ್ಯ, ಚೌಹಳ್ಳಿ ಸಿದ್ದರಾಜು, ರಾಜಣ್ಣ, ಸಿದ್ದಮಲ್ಲಪ್ಪ(ಕಿಟ್ಟಿ), ಮಲಿಯೂರು ಶಂಕರ್ ಮತ್ತಿತರರಿದ್ದರು.

ನಾಳೆ ಅತ್ತಿಗೋಡಿನಲ್ಲಿ ಈಶ್ವರ ದೇವಾಲಯ ಉದ್ಘಾಟನೆ

ಬೆಟ್ಟದಪುರ, ಮೇ 23 (ಶಿವದೇವ್)– ಪಿರಿಯಾಪಟ್ಟಣ ತಾಲೂಕಿನ ಅತ್ತಿಗೋಡು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಈಶ್ವರ ದೇವಾಲಯದ ಉದ್ಘಾಟನೆ ಮೇ 25 ರಂದು ನಡೆಯಲಿದೆ.



ಬೆಳಗ್ಗೆ 10 ಗಂಟೆಗೆ ಸಭಾ ಕಾರ್ಯಕ್ರಮ ಶಾಸಕ ಕೆ.ಮಹದೇವ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಬಾಳೆಹೊನ್ನೂರು ಮಠದ ವೀರಸಿಂಹಾಸನಾಧೀಶ್ವರ ಜಗದ್ಗುರು ಶ್ರೀವೀರಸೋಮೇಶ್ವರ, ರಾಜದೇಶಿ ಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಅರಮನೆ ಜಪದಕಟ್ಟೆ ಮಠದ ಮೈಸೂರು ಬೆಟ್ಟದಪುರದ ಚನ್ನಬಸವದೇಶಿಕೇಂದ್ರ ಸ್ವಾಮೀಜಿ, ರಾವಂದೂರು ಮಠದ ಶ್ರೀಮೋಕ್ಷಪತಿ ಸ್ವಾಮೀಜಿ, ಗುರುಲಿಂಗ ಜಂಗಮದೇವರ ಮಠದ ಗಾವಡಗೆರೆಯ ನಟರಾಜ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಪ್ರತಾಪ್‌ಸಿಂಹ, ಮಾಜಿ ಶಾಸಕರಾದ ಕೆ.ವೆಂಕಟೇಶ್, ಎಚ್.ಸಿ.ಬಸವರಾಜ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಡೊಳ್ಳು ಕುಣಿತ ವಾದ್ಯಗೋಷ್ಠಿ ಹಾಗೂ ವಿವಿಧ ಕಲಾತಂಡಗಳು, ಗ್ರಾಮದ ಮಹಿಳೆಯರು ಕುಂಭ ಕಳಸದೊಂದಿಗೆ ಮಂಗಳವಾರ ಬಾಳೆಹೊನ್ನೂರು ಶ್ರೀಗಳ ಪಲ್ಲಕ್ಕಿ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ.

ತಾಲೂಕಿನ ಎಲ್ಲಾ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಅತ್ತಿಗೋಡು ಗ್ರಾಮದ ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷ ಎ.ಎಸ್.ಕಾಂತರಾಜು ಮನವಿ ಮಾಡಿದ್ದಾರೆ.

ಎಚ್.ವಿಶ್ವನಾಥ್‌ಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯ

ಹುಣಸೂರು, ಮೇ 23(ಕೆಕೆ)– ಶಾಸಕ ಅಡಗೂರು ಎಚ್.ವಿಶ್ವನಾಥ್ ಅವರಿಗೆ ಸಚಿವ ಸ್ಥಾನ ನೀಡುವಂತೆ ನೇರಳಕುಪ್ಪೆ ಗ್ರಾಪಂ ಮಾಜಿ ಉಪಾಧ್ಯಕ್ಷೆ ಸುಂದರಮ್ಮ ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿದ್ದ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದ ವಿರುದ್ಧ ಸಿಡಿದೆದ್ದು ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನ ಹಾಗೂ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರಲು ಪ್ರಮುಖ ಕಾರಣಕರ್ತರಾದ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್ ವಿಶ್ವನಾಥ್ ಅವರಿಗೆ ಕುರುಬ ಸಮಾಜದ ಕೆ.ಎಸ್. ಈಶ್ವರಪ್ಪ ಅವರಿಂದ ತೆರವಾಗಿರುವ ಸಚಿವ ಸ್ಥಾನ ನೀಡಬೇಕೆಂದು ಮನವಿ ಮಾಡಿದ್ದಾರೆ.

ಪತ್ನಿ ಕೊಲೆಗೈದ ಪತಿ: ವರ್ಷ ನಂತರ ಬಂಧನ

ಬೆಟ್ಟದಪುರ, ಮೇ 23(ಶಿವದೇವ್)– ಪತ್ನಿಯನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ಪತಿಯನ್ನು ವರ್ಷದ ನಂತರ ಬೆಟ್ಟದಪುರ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಕುಶಾಲನಗರ ತಾಲೂಕಿನ ಬಸವನಹಳ್ಳಿ ಹೊಸ ಬಡಾವಣೆಯ ನಿವಾಸಿ ಸುರೇಶ್(38) ಬಂಧಿತ ಆರೋಪಿ. ಈತ ಕ್ಷುಲ್ಲಕ ಕಾರಣಕ್ಕೆ ತನ್ನ ಪತ್ನಿ ಮಲ್ಲಿಗೆಯನ್ನು ಕೊಲೆ ಮಾಡಿ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಯ ಶಾನಬೋಗನಹಳ್ಳಿ ಗ್ರಾಮದ ಜಮೀನೊಂದರಲ್ಲಿ ಬಿಸಾಡಿ ತಲೆಮರೆಸಿಕೊಂಡಿದ್ದನು. ಈ ಸಂಬಂಧ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಆರೋಪಿಗಾಗಿ ಬೆಟ್ಟದಪುರ ಪೊಲೀಸರು ತೀವ್ರ ಹುಡುಕಾಟ ನಡೆಸಿ, ವರ್ಷದ ನಂತರ ಆತನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪಿರಿಯಾಪಟ್ಟಣ ಸರ್ಕಲ್ ಇನ್ಸ್‌ಪೆಕ್ಟರ್ ಪ್ರಕಾಶ್ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿದ ಬೆಟ್ಟದಪುರದ ಪಿಎಸ್‌ಐ ಪ್ರಕಾಶ್‌ಎತ್ತಿನ ಮಣಿ, ಎಎಸ್‌ಐ ಸೋಮಶೇಖರ್, ಸಿಬ್ಬಂದಿ ದಿಲೀಪ್, ಮಧು, ರಮೇಶ್, ಚಾಲಕ ಹಬೀಬುಲ್ಲಾ ಖಾನ್ ಪಾಲ್ಗೊಂಡಿದ್ದರು.

ಬಿಜೆಪಿ ಅಭ್ಯರ್ಥಿ ಗೆಲುವು ಖಚಿತ: ಶಾಸಕ ಹರ್ಷವರ್ಧನ್ ವಿಶ್ವಾಸ



ಮಲ್ಕುಂಡಿ, ಮೇ 23(ಚನ್ನಪ್ಪ)– ರಾಜ್ಯದಲ್ಲಿ ಅಭಿವೃದ್ಧಿ ಪರವಾಗಿರುವ ರಾಜ್ಯ ಸರ್ಕಾರದ ಕೈ ಬಲಪಡಿಸಲು ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲ್ಲಿಸಬೇಕು ಎಂದು ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.

ನಂಜನಗೂಡು ತಾಲೂಕಿನ ಚಂದ್ರವಾಡಿ ಹಾಗೂ ಯಾಲ್ಲಹಳ್ಳಿ ಗ್ರಾಮಗಳಿಗೆ ತೆರಳಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಪರ ಮತಯಾಚಿಸಿ ಮಾತನಾಡಿದ ಅವರು, ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದ ನಾಯಕರ ಕಿತ್ತಾಟದಿಂದ ಬೇಸತ್ತಿರುವ ವಿದ್ಯಾವಂತರು ಬಿಜೆಪಿ ಪರ ಒಲವು ತೋರುತ್ತಿದ್ದಾರೆ. ಈಗಾಗಲೇ ಪ್ರತಿ ಗ್ರಾಮದಲ್ಲಿರುವ ಪದವೀಧರ ಮತದಾರರನ್ನು ಭೇಟಿ ಮಾಡಿದ್ದೇನೆ. ಮತದಾರರ ಹೆಚ್ಚಿನ ಒಲವು ಬಿಜೆಪಿ ಮೇಲೆ ಇದೆ. ಈ ಬಾರಿ ಮೈ.ವಿ.ರವಿಶಂಕರ್ ಗೆಲುವು ಖಚಿತವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಎಸ್‌ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಚಿಕ್ಕರಂಗನಾಯಕ, ಮುಖಂಡರಾದ ಕುಂಬ್ರಳ್ಳಿ ಸುಬ್ಬಣ್ಣ, ತಾಪಂ ಮಾಜಿ ಬಿ.ಎಸ್.ಮಹದೇವಪ್ಪ, ಹೆಚ್.ಎಂ.ಕೆಂಡಗಣ್ಣಪ್ಪ, ಜೆ.ನಾಗೇಂದ್ರ, ಬಸಪ್ಪ ಸೇರಿದಂತೆ ಪ್ರಮುಖರು ಹಾಜರಿದ್ದರು.

ಹನಗೋಡಿನಲ್ಲಿ ದೊಡ್ಡಮ್ಮ ಚಿಕ್ಕಮ್ಮ ದೇವರ ಮೆರವಣಿಗೆಯನ್ನು ಮಂಗಳವಾದ್ಯದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭಕ್ತಿಭಾವದಿಂದ ನಡೆಸಲಾಯಿತು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯ ಹೆಚ್.ಪಿ. ಶಿವಣ್ಣ, ಗ್ರಾಮದ ಪ್ರಮುಖರಾದ ನಂಜಪ್ಪ, ಮರಿಯಣ್ಣ, ಪುಟ್ಟಣ್ಣಯ್ಯ, ಸ್ವಾಮಿಗೌಡ, ಗಣೇಶ್ ಸ್ವಾಮಿ ನಾಯ್ಕ ಮತ್ತಿತರರು ಹಾಜರಿದ್ದರು.



ಸರಗೂರು ಪಟ್ಟಣದ ಅಭಿವೃದ್ಧಿಗೆ ವರ್ತಕರ ಸಹಕಾರ

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಜಿ.ಎಸ್.ಕುಮಾರ್ ಮೆಚ್ಚುಗೆ



ಸರಗೂರು, ಮೇ 23(ನಾಗೇಶ್)– ವರ್ತಕರು ವ್ಯಾಪಾರಕ್ಕೆ ಸೀಮಿತವಾಗದೆ ಪಟ್ಟಣದ ಅಭಿವೃದ್ಧಿಗೂ ಕೈಜೋಡಿಸಿಕೊಂಡು ಬಂದಿರುವುದು ಹೆಮ್ಮೆಯ ಸಂಗತಿ ಎಂದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಜಿ.ಎಸ್.ಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ನಾಮಧಾರಿಗೌಡರ ಸಮುದಾಯ ಭವನದಲ್ಲಿ ನಡೆದ ಸರಗೂರು ವರ್ತಕರ ಮಂಡಳಿಯ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು 36ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ವರ್ತಕರ ಮಂಡಳಿಗೆ 3 ದಶಕಗಳ ಇತಿಹಾಸ ಇದ್ದು, 1986ರಲ್ಲಿ ಸ್ಥಾಪನೆಗೊಂಡ ವರ್ತಕರ ಸಂಘವು ಇಂದಿಗೆ 36 ವರ್ಷಗಳು ಕಳೆದಿವೆ. ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸೇರಿದಂತೆ ಹಲವು ಸಂಘ- ಸಂಸ್ಥೆಗಳ ಜೊತೆಗೂಡಿ ನಿರಂತರ ಹೋರಾಟದ ಫಲವಾಗಿ ಸರಗೂರು ತಾಲೂಕು ಘೋಷಣೆಯಾಗಿದೆ ಎಂದರು.

ಪಟ್ಟಣದ ನೂತನ ಬಸ್ ನಿಲ್ದಾಣ ನಿರ್ಮಾಣಕ್ಕೆ ಸಂಘದಿಂದ ಹೋರಾಟ ಮಾಡಲಾಗಿದೆ. ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ವರ್ತಕರ ಸಂಘದಿಂದ ದೇಣಿಗೆ ನೀಡಲಾಗಿದೆ. ಸ್ವಾಮಿ ವಿವೇಕಾನಂದ ಆಸ್ಪತ್ರೆಗೆ ವರ್ತಕರ ಸಂಘದಲ್ಲಿದ್ದ ನಿವೇಶನವನ್ನು ಉಚಿತವಾಗಿ ನೀಡಲಾಗಿದೆ. ಪಟ್ಟಣ ಪಂಚಾಯಿತಿಗೆ ಕಸ ವಿಲೇವಾರಿ ಮಾಡಲು ತಳ್ಳುವ ಗಾಡಿ ನೀಡಲಾಗಿದೆ. ತಮ್ಮ ವ್ಯಾಪಾರಗಳ ಜೊತೆಗೆ ಪಟ್ಟಣದ ಅಭಿವೃದ್ಧಿಗಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು ವರ್ತಕರ ಸಂಘ ನಿರಂತರವಾಗಿ ಮಾಡಿಕೊಂಡು ಬಂದಿದೆ ಎಂದು ತಿಳಿಸಿದರು.

ನಿರ್ಗಮಿತ ಅಧ್ಯಕ್ಷ ಎನ್.ಎಸ್.ಪ್ರತಾಪ್ ಮಾತನಾಡಿ, ಕೊರೊನಾ ಮಹಾಮಾರಿ ಇದ್ದ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಪೌರಕಾರ್ಮಿಕರು ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿದ್ದವರಿಗೆ ದಿನಸಿ ಕಿಟ್ ವಿತರಿಸಲಾಗಿದೆ. ಸಂಘದ ಅಭಿವೃದ್ಧಿಗೆ ತೊಡಕಾಗದಂತೆ ಸಂಘದ ಸರ್ವ ಸದಸ್ಯರು ಬೆಂಬಲ ನೀಡಿದ ಫಲದಿಂದ 20 ಲಕ್ಷ ರೂ. ವೆಚ್ಚದ ನೂತನ ವರ್ತಕರ ಸಂಘದ ಕಟ್ಟಡ ಉದ್ಘಾಟನೆ ಮಾಡಲಾಗಿದೆ. ಇದಕ್ಕೆ ಸ್ಪಂದಿಸಿದ ಸರ್ವಸದಸ್ಯರಿಗೆ ನನ್ನ ಅಭಿನಂದನೆ ಎಂದರು.

ಬಳಿಕ, ನೂತನ ಅಧ್ಯಕ್ಷ ಎಸ್.ಎಂ.ಶ್ರೀನಿವಾಸ್ ಅವರಿಗೆ ನಿರ್ಗಮಿತ ಅಧ್ಯಕ್ಷ ಎನ್.ಎಸ್.ಪ್ರತಾಪ್ ತಕ್ಕಡಿ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು. ಉಪಾಧ್ಯಕ್ಷರಾಗಿ ಎಸ್.ಪಿ.ಪ್ರಸಾದ್, ವಿ.ವೇಣುಗೋಪಾಲ್, ಯೋಗೇಶ್‌ಕುಮಾರ್, ಕಾರ್ಯದರ್ಶಿಯಾಗಿ ಎಸ್.ಸಿ.ವೆಂಕಟೇಶ್, ಖಜಾಂಚಿಯಾಗಿ ಕಲಾರಾಮ್, ಸಹ ಕಾರ್ಯದರ್ಶಿಯಾಗಿ ವರುಣ್ ಕುಮಾರ್ ಅಧಿಕಾರ ಸ್ವೀಕರಿಸಿದರು. ಈ ವೇಳೆ ಹಿರಿಯ ವರ್ತಕರಾದ ನವಿಲೂರು ಮಹದೇವಪ್ಪ, ಎಸ್.ಕೆ.ರಂಗಣ್ಣ, ಎಸ್.ಎಂ.ಮೃತ್ಯುಂಜಯಸ್ವಾಮಿ, ಅವರನ್ನು ವರ್ತಕರ ಸಂಘದಿಂದ ಸನ್ಮಾನಿಸಲಾಯಿತು. ನಂತರ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

> ಪಟ್ಟಣದ ಸರ್ವತೋಮುಖ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತೇನೆ. ಇದಕ್ಕೆ ಸಂಘದ ಸದಸ್ಯರ ಬೆಂಬಲ ಅತ್ಯಗತ್ಯ. ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್ ಅವರು ಪಟ್ಟಣದ ಸ್ವಚ್ಛತೆ, ಚರಂಡಿ, ನೀರು, ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು.
>
> – ಎಸ್.ಎಂ.ಶ್ರೀನಿವಾಸ್, ನೂತನ ಅಧ್ಯಕ್ಷ, ಸರಗೂರು ವರ್ತಕರ ಮಂಡಳಿ

ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಮಾಜಿ ಅಧ್ಯಕ್ಷೆ ಜ್ಯೋತಿ, ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಹಿರಿಯ ವರ್ತಕರಾದ ಬ್ರಹ್ಮದೇವಯ್ಯ, ಶ್ರೀಕಂಠಸ್ವಾಮಿ, ಎಸ್.ನಾರಾಯಣ್, ಕೆ.ಸುರೇಶ್‌ಜೈನ್, ಪದ್ಮಪ್ರಭ, ಎಸ್.ವಿ.ಮಂಜುನಾಥ್ ಜೈನ್, ಎಸ್.ವಿ.ಯೋಗೇಶ್, ಎಸ್.ವಿ.ಕೃಷ್ಣಚಾರ್, ಎಂ.ಕೆಂಡಗಣ್ಣಸ್ವಾಮಿ, ಎಸ್.ಎಸ್.ಸೋಮಪ್ರಭ, ಎಸ್.ಡಿ.ಬ್ರಹ್ಮದೇವ್, ಎಸ್.ಕೆ.ಶ್ರೀಪಾಲ್, ಸಿ.ಗೋಪಾಲಕೃಷ್ಣ, ಎಸ್.ಸಿ.ಮಂಜುನಾಥ್, ವಿನಯ್ ಸೇರಿದಂತೆ ಹೆಚ್.ಡಿ.ಕೋಟೆ, ಮಾದಾಪುರ, ಹೊಮ್ಮರಗಳ್ಳಿ, ಯರಹಳ್ಳಿ, ವರ್ತಕರ ಸಂಘದ ಅಧ್ಯಕ್ಷರು, ವಿವಿಧ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.11.15ಕ್ಕೆ, ದಿ ಬ್ಯಾಡ್ ಗಾಯ್ಸ್ (3ಡಿ)(ಇಂ): ಮ.1.45ಕ್ಕೆ, ರಾ.9.55ಕ್ಕೆ, ಕೆಜಿಎಫ್ 2 (ಕ): ಸಂ.4ಕ್ಕೆ, ಧಾಕಾಡ್(ಹಿಂ): ರಾ.7.20ಕ್ಕೆ.
ಸ್ಕ್ರೀನ್ 2	ಗರುಡ(ಕ): ಬೆ.10.20ಕ್ಕೆ, ಪ್ರಾರಂಭ (ಕ): ಮ.1.10ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.4.15ಕ್ಕೆ, ಸಕುಟುಂಬ ಸಮೇತ (ಕ): ರಾ.7.30ಕ್ಕೆ, ಜೊ & ಜೊ(ಮ): ರಾ.9.50ಕ್ಕೆ
ಸ್ಕ್ರೀನ್ 3	ಅಂಗರ್ (ಕ): ಬೆ.10.45ಕ್ಕೆ, ನೆಂಜುಕು ನೀದಿ (ತ): ಮ.1.30ಕ್ಕೆ, ಅವತಾರ ಪುರುಷ (ಕ): ಸಂ.4.15ಕ್ಕೆ, ಕೆಜಿಎಫ್ 2(ಕ): ಸಂ.6.40ಕ್ಕೆ, ಧಾಕಾಡ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಸಂ.4.35ಕ್ಕೆ, ಕೆಜಿಎಫ್ 2(ಕ): ಮ.1.10ಕ್ಕೆ, ಬೂಲ್ ಬುಲಾಯ್ಯ (ಹಿಂ): ರಾ.7ಕ್ಕೆ, ರಾ.9.50ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ದಿ ಬ್ಯಾಡ್ ಗಾಯ್ಸ್ (3ಡಿ)(ಹಿಂ): ಬೆ.11ಕ್ಕೆ, ರಾ.7.30ಕ್ಕೆ, ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಮ.1.15ಕ್ಕೆ, ಕೆಜಿಎಫ್ 2(ಕ): ಸಂ.4ಕ್ಕೆ, ಸರ್ಕಾರು ವಾರಿ ಪಾಟ (ತೆ): ರಾ.9.50ಕ್ಕೆ.
ಸ್ಕ್ರೀನ್ 2	ಬೂಲ್ ಬುಲಾಯ್ಯ 2(ಹಿಂ): ಬೆ.9.45ಕ್ಕೆ, ಮ.12.45, ಸಂ.6.35ಕ್ಕೆ, ರಾ.9.40ಕ್ಕೆ, ಧಾಕಾಡ್ (ಹಿಂ): ಮ.3.45ಕ್ಕೆ.
ಸ್ಕ್ರೀನ್ 3	ಸಾರ ವಜ್ರ (ಕ): ಬೆ.10.40ಕ್ಕೆ, ಗರುಡ (ಕ): ಮ.1.25ಕ್ಕೆ, ಪ್ರಾರಂಭ (ಕ): ಸಂ.4.25ಕ್ಕೆ, ಅವತಾರ ಪುರುಷ (ಕ): ರಾ.7.15ಕ್ಕೆ, ಧಾಕಾಡ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2(ಕ): ಬೆ.10ಕ್ಕೆ, ಸಕುಟುಂಬ ಸಮೇತ (ಕ): ಮ.1.30ಕ್ಕೆ, ನೆಂಜಕು ನೀದಿ (ತ): ಮ.3.55ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.55ಕ್ಕೆ, ಜೊ & ಜೊ (ಮ): ರಾ.9.30ಕ್ಕೆ,

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಕಟಿಂಗ್ ಶಾಪ್ (ಕ): ಬೆ.10.55ಕ್ಕೆ, ಪ್ರಾರಂಭ (ಕ): ಮ.1.25ಕ್ಕೆ, ಸಕುಟುಂಬ ಸಮೇತ (ಕ): ಸಂ.4.30ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.40ಕ್ಕೆ, ಧಾಕಾಡ್ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಕಂಡ್ಡಿಡಿ ನೋಡನ (ಕ): ಮ.1.15ಕ್ಕೆ, ಕೆಜಿಎಫ್ 2 (ಕ): ಸಂ.4.30ಕ್ಕೆ, ರಾ.7.45ಕ್ಕೆ,
ಸ್ಕ್ರೀನ್ 3	ಸರ್ಕಾರು ವಾರಿ ಪಾಟ (ತೆ): ಸಂ.6.45ಕ್ಕೆ,
ಸ್ಕ್ರೀನ್ 4	ಅಂಗರ್ (ಕ): ಬೆ.10.30ಕ್ಕೆ, ಅವತಾರ ಪುರುಷ (ಕ): ಮ.1.10ಕ್ಕೆ, ಧಾಕಾಡ್ (ಹಿಂ): ಮ.3.50ಕ್ಕೆ, ನೆಂಜಕು ನೀದಿ (ತ): ಸಂ.6.20ಕ್ಕೆ, ಡಾನ್ (ತ): ರಾ.9ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	**(ದೂ: 2521923)**
ಸರ್ಕಾರು ವಾರಿ ಪಾಠ (ತೆ)	3 ಪ್ರದರ್ಶನಗಳು
ಅಂಗಾರ್ (ಕ)	1 ಪ್ರದರ್ಶನ
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕೆಜಿಎಫ್-2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	**(ದೂ: 2520009)**
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಬೂಲ್ ಬೂಲಯ್ಯ-2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
21 ಅವರ್ಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
21 ಅವರ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನೆಂಜುಕು ನೀದಿ (ತ)	4 ಪ್ರದರ್ಶನಗಳು
ಸಂಗಂ	
ಪ್ರಾರಂಭ (ಕ)	4 ಪ್ರದರ್ಶನಗಳು
ಲಿಡೋ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಪ್ರಾರಂಭ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಪ್ರಾರಂಭ (ಕ)	4 ಪ್ರದರ್ಶನಗಳು
ಸ್ಕೈಲೈನ್	
ದಾಕದ್ (ಹಿ)	4 ಪ್ರದರ್ಶನಗಳು

ಕುಟುಂಬ ಸಮೇತ ಶ್ರೀಕಂಠೇಶ್ವರನ ದರ್ಶನ ಪಡೆದ ಯದುವೀರ್

ನಂಜನಗೂಡು, ಮೇ 23(ಸುದರ್ಶನ್)– ದಕ್ಷಿಣ ಕಾಶಿ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕುಟುಂಬ ಸಮೇತರಾಗಿ ಆಗಮಿಸಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.



ಇದೇ ಮೊದಲ ಬಾರಿಗೆ ಪತ್ನಿ ತ್ರಿಷಿಕಾ ಕುಮಾರಿ, ಪುತ್ರ ಆದ್ಯವೀರ್ ಚಾಮರಾಜ ಒಡೆಯರ್ ಜೊತೆಗೆ ಆಗಮಿಸಿ ದೇವಾಲಯದ ಗರ್ಭಗುಡಿಯಲ್ಲಿ 2 ಗಂಟೆಗಳಿಗೂ ಹೆಚ್ಚಿನ ಕಾಲ ಕುಳಿತು ಪ್ರಾರ್ಥನೆ ಸಲ್ಲಿಸಿದ ಅವರು, ದೇವರಿಗೆ ಕ್ಷೀರಾಭಿಷೇಕ ಮಾಡಿಸಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಪಾರ್ವತಿ ಗುಡಿಯಲ್ಲಿ ಕುಂಕುಮಾರ್ಚನೆ ಸೇವೆ ಸಲ್ಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರಿನ ಅರಮನೆಗೆ ಸಂಬಂಧಿಸಿದ ದೇವಾಲಯಗಳಿಗೆ ಭೇಟಿ ನೀಡುತ್ತೇನೆ. ಅಂತೆಯೇ ಇದೇ ಮೊದಲ ಬಾರಿಗೆ ಕುಟುಂಬ ಸಮೇತನಾಗಿ ಆಗಮಿಸಿ ದೇವರ ದರ್ಶನ ಪಡೆದಿದ್ದೇನೆ. ರಾಜ್ಯದಲ್ಲಿ ಉತ್ತಮ ಮಳೆ ಬೆಳೆಯಾಗಲಿ. ಜನರಿಗೆ ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಶ್ರೀಕಂಠೇಶ್ವರನಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದರು. ಇದಕ್ಕೂ ಮುನ್ನ ದೇವಾಲಯದ ಆಡಳಿತದಿಂದ ಅವರಿಗೆ ಪೂರ್ಣಕುಂಭ ಸ್ವಾಗತ ನೀಡಲಾಯಿತು. ಅಲ್ಲದೇ ಫಲ ತಾಂಬೂಲ ನೀಡಿ ಗೌರವಿಸಲಾಯಿತು. ಈ ವೇಳೆ ದೇವಾಲಯದ ಅರ್ಚಕರಾದ ನಾಗಚಂದ್ರ ದೀಕ್ಷಿತ್ ಸೇರಿದಂತೆ ಅರ್ಚಕ ವೃಂದ ಮತ್ತು ದೇವಾಲಯದ ಅಧಿಕಾರಿಗಳು ಇದ್ದರು.

ಕೃಷ್ಣನಾಯಕ ನಿಧನ



ಸುತ್ತೂರು, ಮೇ 23– ಇಲ್ಲಿಗೆ ಸಮೀಪದ ನಗರ್ಲೆ ಗ್ರಾಮದ ನಿವಾಸಿ ಹಾಗೂ ಕಾಂಗ್ರೆಸ್ ಮುಖಂಡ ಕೃಷ್ಣನಾಯಕ(60) ಸೋಮವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೇ 24ರಂದು ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅರಮನೆ ಗೈಡ್‌ಗಳಿಗೆ ತರಬೇತಿ ಕಾರ್ಯಾಗಾರ



ಮೈಸೂರು ಅರಮನೆ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಚೀನ ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಅರಮನೆ ಮಂಡಳಿ ಸಭಾಂಗಣದಲ್ಲಿ ಆರಂಭವಾದ ತರಬೇತಿ ಕಾರ್ಯಾಗಾರದಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿದರು.

ಮೈಸೂರು, ಮೇ 23(ಆರ್‌ಕೆ)- ಮೈಸೂರು ಅರಮನೆಯ ನೈಜ ಇತಿಹಾಸ ಪರಂಪರೆಯನ್ನು ಪ್ರವಾಸಿಗರಿಗೆ ತಿಳಿಸುವ ಹಿನ್ನೆಲೆಯಲ್ಲಿ ಪ್ಯಾಲೇಸ್ ಟೂರಿಸ್ಟ್ ಗೈಡ್‌ಗಳಿಗೆ ಒಂದು ವಾರದ ತರಬೇತಿ ಕಾರ್ಯಾಗಾರ ಇಂದಿನಿಂದ ಆರಂಭವಾಯಿತು.

ಮೈಸೂರು ಅರಮನೆ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಚೀನ ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಅರಮನೆ ಮಂಡಳಿ ಸಭಾಂಗಣದಲ್ಲಿ ಆರಂಭವಾದ ತರಬೇತಿ ಕಾರ್ಯಾಗಾರವನ್ನು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಸ್.ವಿದ್ಯಾಶಂಕರ್, ಪ್ರಾಚೀನ ಇತಿಹಾಸ ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ. ಶೆಲ್ವಪಿಳ್ಳೆ ಅಯ್ಯಂಗಾರ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಇತಿಹಾಸಕಾರರೂ ಆದ ಅಂಕಣಕಾರ ಡಾ. ಎಸ್.ವಿ. ರಂಗನಾಥ್, ಇತಿಹಾಸ ತಜ್ಞರಾದ ಡಾ. ಲ.ನ.ಸ್ವಾಮಿ, ಪ್ರೊ. ಎಸ್.ಎನ್.ರಂಗರಾಜು ಪಾಲ್ಗೊಂಡಿದ್ದರು.

ಮೇ 29ರವರೆಗೆ ನಡೆಯಲಿರುವ ಕಾರ್ಯಾಗಾರದಲ್ಲಿ ಮೈಸೂರು ಅರಮನೆ ಪ್ರವಾಸಿ ಮಾರ್ಗದರ್ಶಿಯಾಗಿ (**Turist Guide**) ನೋಂದಣಿಯಾಗಿರುವ 20 ಮಂದಿಗೆ ಅರಮನೆಯ ಇತಿಹಾಸ, ರಾಜ ಒಡೆಯರ್ ಅವರ ಆಳ್ವಿಕೆ, ದಳವಾಯಿಗಳು, ಹೈದರಾಲಿ, ಟಿಪ್ಪು ಸುಲ್ತಾನ್, ಆಂಗ್ಲೋ- ಮೈಸೂರು ಯುದ್ಧ, ಪ್ರವಾಸಿ ತಾಣಗಳಲ್ಲಿ ಪುರಾತನ ದೇವಾಲಯಗಳ ಕುರಿತಂತೆ ಇತಿಹಾಸದಲ್ಲಿ ದಾಖಲಾಗಿರುವ ಮಾಹಿತಿಯನ್ನು ಸಂಪನ್ಮೂಲ ವ್ಯಕ್ತಿಗಳಾಗಿರುವ ಪರಿಣಿತರು ತರಬೇತಿ ಕಾರ್ಯಾಗಾರದಲ್ಲಿ ಮನವರಿಕೆ ಮಾಡಿಕೊಡುವರು.

ಡಾ.ಶೆಲ್ವಪಿಳ್ಳೆ ಅಯ್ಯಂಗಾರ್ ಅವರು ರಾಜರು, ರಾಜ ಒಡೆಯರ್ ಆಳ್ವಿಕೆ, ಮೈಸೂರು ಅಂಬಾವಿಲಾಸ ಅರಮನೆಯ ಗೊಂಬೆ ತೊಟ್ಟಿ, ಆನೆ ಬಾಗಿಲು, ಕಲ್ಯಾಣ ಮಂಟಪ, ಚಾಮುಂಡಿತೊಟ್ಟಿ, ಕರಿಕಲ್ ತೊಟ್ಟಿ, ದರ್ಬಾರ್-ಎ- ಖಾಸ, ಟ್ರೋಫಿ ಕೊಠಡಿ, ಆಯುಧ ಶಾಲೆ, ರಾಣಿ ವಿಲಾಸ ಖಾಸಗಿ ಅರಮನೆ, ಫಿರಂಗಿಗಳ ಬಗ್ಗೆ ಉಪನ್ಯಾಸ ನೀಡಲಿದ್ದಾರೆ.

ಡಾ.ಲ.ನ.ಸ್ವಾಮಿ ಅವರು ನರಸರಾಜ ಒಡೆಯರ್, ದೊಡ್ಡ ದೇವರಾಜ ಒಡೆಯರ್, ಚಿಕ್ಕ ದೇವರಾಯ ಒಡೆಯರ್ ಕುರಿತು ವಿವರ ನೀಡಲಿದ್ದು, ಇತರ ತಜ್ಞರಾದ ಪ್ರೊ.ನಂಜರಾಜೇ ಅರಸ್, ಡಾ.ಪವಮಾನ, ಶ್ರುತಿ ಪಾರ್ವತಿ, ಡಾ. ಎನ್.ಎಸ್.ರಂಗರಾಜು, ಡಾ.ರೋಹಿತ್ ಈಶ್ವರ, ಡಾ. ರಂಗನಾಥ್, ಡಾ.ಉಷಾರಾಣಿ, ಡಾ. ಜ್ಯೋತಿ ಶಂಕರ್, ಭಾನುಪ್ರಕಾಶ್ ಆಚಾರ್ಯ, ಪ್ರೊ. ಹೆಚ್.ಆರ್. ಕುಲಕರ್ಣಿ, ಡಾ.ಷಣ್ಮುಖ ಗುಣವರ್ಮ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಗೈಡ್‌ಗಳಿಗೆ ತರಬೇತಿ ನೀಡುವರು.

ಮರದ ಅರಮನೆ, ಹೊಸ ಅರಮನೆ ನಿರ್ಮಾಣ, ಕಲೆ, ವಾಸ್ತುಶಿಲ್ಪ, ಸಂಗೀತ, ನಾಟಕ, ಗಮಕ, ಪೊಲೀಸ್ ಬ್ಯಾಂಡ್, ದಸರಾ ಹಿನ್ನೆಲೆ, ಇತಿಹಾಸ, ಅರಮನೆ ಕೋಟೆ, ದೇವಸ್ಥಾನಗಳು, ಕೆಆರ್‌ಎಸ್ ಅಣೆಕಟ್ಟೆ, ಪ್ರಾಚ್ಯವಸ್ತು ಸಂಶೋಧನಾಲಯ, ರಂಗನತಿಟ್ಟು ಪಕ್ಷಿಧಾಮ ಸೇರಿದಂತೆ ಮೈಸೂರು ಹಾಗೂ ಸುತ್ತಲಿನ ಪ್ರವಾಸಿ ತಾಣಗಳ ಬಗ್ಗೆಯೂ ಒಂದು ವಾರ ನಡೆಯಲಿರುವ ತರಬೇತಿ ಕಾರ್ಯಾಗಾರದಲ್ಲಿ ತಜ್ಞರು ತರಬೇತಿ ನೀಡುವರು.

ಮುಕ್ತ ವಿವಿ ಆಡಿಯೋ-ವಿಷುಯಲ್ ಸ್ಟುಡಿಯೋ ಮೂಲಕ ಅರಮನೆ ಮಾಹಿತಿ

ಕುಲಪತಿ ಪ್ರೊ. ಎಸ್.ವಿದ್ಯಾಸಾಗರ್

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಿಯೋ-ವಿಷುಯಲ್ ಸ್ಟುಡಿಯೋ ಮೂಲಕ ಮೈಸೂರು ಅರಮನೆಯ ಇತಿಹಾಸವನ್ನು ಪ್ರಸಾರ ಮಾಡಲು ಅವಕಾಶ ನೀಡಲಾಗುವುದು ಎಂದು ಕುಲಪತಿ ಪ್ರೊ. ಎಸ್. ವಿದ್ಯಾಸಾಗರ್ ತಿಳಿಸಿದ್ದಾರೆ.

ತಮ್ಮ ವಿಶ್ವವಿದ್ಯಾನಿಲಯದಲ್ಲಿರುವ ಅತ್ಯಾಧುನಿಕ ಆಡಿಯೋ-ವಿಷುಯಲ್ ಸ್ಟುಡಿಯೋದಿಂದ ಮೈಸೂರು ಅರಮನೆಯ ಇತಿಹಾಸ, ಹಿನ್ನೆಲೆ ಹೊಂದಿದ ಚಿತ್ರ, ದೃಶ್ಯಾವಳಿ ಹಾಗೂ ಆಡಿಯೋಗಳನ್ನು ಯುಟ್ಯೂಬ್ ಮೂಲಕ ಇಡೀ ವಿಶ್ವಕ್ಕೇ ಪ್ರಸಾರ ಮಾಡಬಹುದಾಗಿದ್ದು, ಅರಮನೆ ಮಂಡಳಿ ಬಯಸಿದಲ್ಲಿ ಅದಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದರು.

ಮೈಸೂರು ಅರಮನೆಯ ಇತಿಹಾಸವನ್ನು ತಿರುಚದೇ, ನೈಜ ಮಾಹಿತಿಯನ್ನು ಪ್ರವಾಸಿಗರಿಗೆ ತಿಳಿಸಬೇಕು, ಎಲ್ಲಾ ಮಾರ್ಗದರ್ಶಿಗಳೂ ಏಕರೂಪದ ನೈಜ ವಿವರಣೆಯನ್ನೇ ಪ್ರವಾಸಿಗರು ಬಯಸುವ ಭಾಷೆಯಲ್ಲಿ ನೀಡಬೇಕಾಗಿದ್ದು, ಯಾವ ಹಂತದಲ್ಲೂ ಗೊಂದಲಕ್ಕೆ ಅವಕಾಶವಿರಬಾರದು ಎಂದರು.

ಕಾರ್ಯಾಗಾರದ ಎಲ್ಲಾ ಗೋಷ್ಠಿಗಳಿಗೂ ತಪ್ಪದೇ ಹಾಜರಾಗಿ ಅರಮನೆ, ದೇವಾಲಯಗಳ ಪ್ರಾಚೀನ ಇತಿಹಾಸ, ಪರಂಪರೆಯ ನಿಖರ ಮಾಹಿತಿ ತಿಳಿದು ವಿಶ್ವದ ವಿವಿಧ ಭಾಗಗಳಿಂದ ಬರುವ ಪ್ರವಾಸಿಗರಿಗೆ ತಿಳಿಸುವುದು ಟೂರಿಸ್ಟ್ ಗೈಡ್‌ಗಳ ಜವಾಬ್ದಾರಿಯಾಗಿದೆ ಎಂದರು. ಕಾರ್ಯಾಗಾರದಲ್ಲಿ ಭಾಗವಹಿಸಿರುವ ಅರಮನೆ ಮಾರ್ಗದರ್ಶಿಗಳಿಗೆ ಅವರು ಇದೇ ಸಂದರ್ಭ ಮಾಹಿತಿ ಕಿಟ್‌ಗಳನ್ನು ವಿತರಿಸಿದರು.

ಪ್ರವಾಸಿಗರಿಗೆ ಅರಮನೆ ಇತಿಹಾಸ, ಪರಂಪರೆ ನೈಜ ಮಾಹಿತಿ ನೀಡಿ

ಗೈಡ್‌ಗಳಿಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಲಹೆ

ಮೈಸೂರು: ದಾಖಲೆಗಳಲ್ಲಿರುವಂತೆ ಮೈಸೂರು ಅರಮನೆಯ ಹಿನ್ನೆಲೆ, ಇತಿಹಾಸ, ಪರಂಪರೆಯ ನೈಜ ಮಾಹಿತಿಯನ್ನು ಪ್ರವಾಸಿಗರಿಗೆ ನೀಡಿ ಎಂದು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಟೂರಿಸ್ಟ್ ಗೈಡ್‌ಗಳಿಗೆ ಕಿವಿಮಾತು ಹೇಳಿದ್ದಾರೆ.

ರಾಜ್ಯದ ವಿವಿಧ ಭಾಗಗಳು, ದೇಶ-ವಿದೇಶಗಳಿಂದ ಮೈಸೂರು ಅರಮನೆ ವೀಕ್ಷಣೆ ಹಾಗೂ ಇಲ್ಲಿನ ಹಿತಕರ ವಾತಾವರಣ ಆಹ್ಲಾದಿಸಲೆಂದು ಲಕ್ಷಾಂತರ ಪ್ರವಾಸಿಗರು ಮೈಸೂರಿಗೆ ಆಗಮಿಸುತ್ತಾರೆ. ಅವರಿಗೆ ಮೈಸೂರು ಅರಮನೆಯ ನೈಜ ಮಾಹಿತಿ ನೀಡಿ, ಅವಿಸ್ಮರಣೀಯ ಅನುಭವ ಸವಿಯುವಂತೆ ಮಾಡುವ ಜವಾಬ್ದಾರಿ ನಿಮ್ಮದಾಗಿದೆ ಎಂದರು.

ದಾಖಲೆಗಳಲ್ಲಿರುವಂತೆ ಇತಿಹಾಸ ತಿಳಿಸಿ, ಅರಮನೆಯ ಪರಂಪರೆಯನ್ನು ಎತ್ತಿ ಹಿಡಿಯಿರಿ. ಇಲ್ಲಿನ ಪುರಾತನ ದೇವಾಲಯ, ವಿಗ್ರಹ, ಶಿಲ್ಪಕಲೆ, ನೃತ್ಯ, ಸಂಗೀತ ಕಲೆ ಹಾಗೂ ಇವುಗಳಿಗೆ ರಾಜ ಮಹಾರಾಜರ ಕೊಡುಗೆ, ಆದರ್ಶ, ಸಂಪ್ರದಾಯದ ಬಗ್ಗೆ ಸರಿಯಾದ ಮಾಹಿತಿ ನೀಡಿ, ಪ್ರವಾಸಿಗರಿಗೆ ತಪ್ಪು ಮಾಹಿತಿ ನೀಡಿದರೆ ನೈಜ ಚಿತ್ರಣವನ್ನು ಮರೆಮಾಚಿದಂತಾಗುತ್ತದೆ ಎಂದರು. ಮೊದಲು ನೀವು ವಾಸ್ತವ ಸಂಗತಿಗಳನ್ನು ಅರ್ಥಮಾಡಿಕೊಂಡು ಜ್ಞಾನ, ತಿಳುವಳಿಕೆ ಹೊಂದಿದಲ್ಲಿ ಮಾತ್ರ ಪ್ರವಾಸಿಗರಿಗೆ ವಸ್ತುಸ್ಥಿತಿ ಆಧಾರಿತ ಮಾಹಿತಿ ನೀಡಲು ಸಾಧ್ಯ, ಅದಕ್ಕಾಗಿಯೇ ತರಬೇತಿ ಆಯೋಜಿಸಲಾಗಿದೆ ಎಂದು ಹೇಳಿದರು.

ಸಾಮೂಹಿಕ ಯೋಗ ಪ್ರದರ್ಶನಕ್ಕೆ ಮೈಸೂರು ಆಯ್ಕೆ

ಆಯುಷ್ ಸಚಿವ ಸರ್ಬಾನಂದ್ ಸೋನೋವಾಲ್ ಅಧಿಕೃತ ಪ್ರಕಟಣೆ



ಬೆಂಗಳೂರು, ಮೇ 23- 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಸಾಮೂಹಿಕ ಯೋಗ ಪ್ರದರ್ಶನ ನಡೆಯುವ ಸ್ಥಳವಾಗಿ ಮೈಸೂರನ್ನು ಆಯ್ಕೆ ಮಾಡಲಾಗಿದೆ ಎಂದು ಆಯುಷ್ ಸಚಿವ ಸರ್ಬಾನಂದ್ ಸೋನೋವಾಲ್ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷದಲ್ಲಿ ದೇಶಾದ್ಯಂತ 75 ಪ್ರಮುಖ ಸ್ಥಳಗಳಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲು ಯೋಜಿಸಲಾಗಿದೆ ಎಂದರು.

ಈ ವರ್ಷ ಜೂನ್ 21ರಂದು ಮೈಸೂರಿನಲ್ಲಿ ಮುಖ್ಯ ಕಾರ್ಯಕ್ರಮದ ಜೊತೆಗೆ ಮತ್ತೊಂದು ಆಕರ್ಷಣೆ ಗಾರ್ಡಿಯನ್ ರಿಂಗ್ ಆಗಿದ್ದು, ಯೋಗದ ನೇರ ಪ್ರಸಾರ ಕಾರ್ಯಕ್ರಮ ದೇಶ, ವಿದೇಶಗಳಲ್ಲಿ ಪ್ರಸಾರವಾಗಲಿದೆ. ಈ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಮಧ್ಯೆ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮೈಸೂರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ. ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಗ ದಿನಾಚರಣೆಗೆ ರೇಸ್ ಕೋರ್ಸ್ ಸ್ಥಳ ಸೂಕ್ತವೆಂದು ಸಲಹೆ ಕೊಟ್ಟಿರುವುದಾಗಿ ಹೇಳಿದರು. ಅರಮನೆ ಆವರಣದಲ್ಲಿ ಕೇವಲ 15 ಸಾವಿರ ಜನರಷ್ಟೇ ಸೇರಬಹುದು. ಆದರೆ ರೇಸ್ ಕೋರ್ಸ್ ನಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ಸೇರಬಹುದು. ಈ ಬಗ್ಗೆ ಚರ್ಚೆ ಮಾಡುತ್ತಿರುವುದಾಗಿ ಅವರು ತಿಳಿಸಿದರು.





ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ




ಮೈಸೂರು, ಮೇ 23-ಮೈಸೂರಿನ ಭಾರತೀಯ ವಿದ್ಯಾಭವನ ಪ್ರೌಢ ಶಾಲೆ ವಿದ್ಯಾರ್ಥಿನಿ ಹೆಚ್.ಕೆ.ಜ್ಞಾನಶ್ರೀ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 619 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ-125, ಇಂಗ್ಲಿಷ್-100, ಹಿಂದಿ-97, ಗಣಿತ-99, ವಿಜ್ಞಾನ-99, ಸಮಾಜದಲ್ಲಿ 99 ಅಂಕ ಪಡೆದಿದ್ದಾರೆ. ಈಕೆ ಮೈಸೂರು ತಾಲೂಕು ಹಂಚ್ಯಾ ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಸಿ.ಕುಮಾರಸ್ವಾಮಿಯವರ ಪುತ್ರಿ.

ಹೋಟೆಲ್ ಮ್ಯಾನೇಜ್‌ಮೆಂಟ್ ವಿಭಾಗಗಳಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 23-ಪ್ರವಾಸೋದ್ಯಮ ಇಲಾಖೆ ಹಾಗೂ ಕೇಂದ್ರ ಪ್ರವಾಸೋದ್ಯಮ ಸಚಿವಾಲಯ ವತಿಯಿಂದ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಯೋಜನೆಯಡಿಯಲ್ಲಿ, ಹೋಟೆಲ್ ಮ್ಯಾನೇಜ್‌ಮೆಂಟ್ ವಿಭಾಗಗಳಲ್ಲಿ ಉಚಿತವಾಗಿ ಅಲ್ಪಾವಧಿ ತರಬೇತಿಗಳನ್ನು ಪ್ರಾರಂಭಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಮಾಹಿತಿಗೆ ಫುಡ್ ಕ್ರಾಫ್ಟ್ ಇನ್ಸ್ಟಿಟ್ಯೂಟ್, ಕನ್ನಡ ಕಾರಂಜಿ ಕಟ್ಟಡದ ಮೊದಲನೇ ಮಹಡಿ, ದಸರಾ ವಸ್ತು ಪ್ರದರ್ಶನ ಆವರಣ, ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು-570010. ದೂರವಾಣಿ ಸಂಖ್ಯೆ: 6362018821, 0821-2445388 ಸಂಪರ್ಕಿಸಬಹುದಾಗಿದೆ.

ಮೈಸೂರಲ್ಲಿ ಗ್ಯಾಸ್ ಪೈಪ್‌ಲೈನ್ ಕಾಮಗಾರಿಗೆ ಪಾಲಿಕೆ ಅನುಮತಿ

16.71 ಲಕ್ಷ ರೂ. ಜಿಎಸ್‌ಟಿ ಸೇರಿ 1.24 ಕೋಟಿ ಪಾವತಿಸಲು ಗ್ಯಾಸ್ ಏಜೆನ್ಸಿಗೆ ಸೂಚನೆ



ಮೈಸೂರು, ಮೇ 23(ಆರ್‌ಕೆ)- ಕೆಲ ಜನಪ್ರತಿನಿಧಿಗಳ ವಿರೋಧದ ನಡುವೆಯೂ ಮೈಸೂರು ನಗರದಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸಲು ಮಹಾನಗರ ಪಾಲಿಕೆಯು ಖಾಸಗಿ ಸಂಸ್ಥೆಗೆ ಸಮ್ಮತಿಸಿದೆ.

ಮೇ 11ರಂದು ಬೇಡಿಕೆ ಟಿಪ್ಪಣಿ ಪ್ರಕಟಿಸಿರುವ ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ (ಅಭಿವೃದ್ಧಿ)ರು 16,07,13,500 ರೂ. ಶುಲ್ಕ ಸೇರಿ ಒಟ್ಟು 1,23,84,800 ರೂ. ಹಣ ಪಾವತಿಸುವಂತೆ ಕುವೆಂಪುನಗರ 'ಎನ್' ಬ್ಲಾಕ್ ನಲ್ಲಿರುವ ಎಜಿ ಅಂಡ್ ಪಿ ಸಿಟಿ ಗ್ಯಾಸ್ ಕಂಪನಿ ಪ್ರಾದೇಶಿಕ ಮುಖ್ಯಸ್ಥರಿಗೆ ಸೂಚನೆ ನೀಡಿದ್ದಾರೆ.

43 ವಾರ್ಡ್‌ಗಳಲ್ಲಿ 5000 ಮೀ. ಉದ್ದದ ಕೇಬಲ್ ಅಳವಡಿಸಲು ಪ್ರತೀ ಮೀಟರ್‌ಗೆ 1,857 ರೂ.ನಂತೆ 92,85,000 ರೂ. ಹೆಚ್ಚುವರಿ ಶುಲ್ಕ, 5 ಲಕ್ಷ ರೂ. ಪರಿವೀಕ್ಷಣಾ ಶುಲ್ಕ, 9,28,500 ರೂ. ಭದ್ರತಾ ಠೇವಣಿ, ಜಿಎಸ್‌ಟಿ (ಶೇ. 18) 16,71,300 ರೂ. ಹಾಗೂ ಪಾಲಿಕೆಗೆ ಪಾವತಿಸಬೇಕಾದ 1,07,13,500 ರೂ. ಸೇರಿ ಒಟ್ಟು 1,23,84,800 ರೂ.ಗಳನ್ನು ಜಮಾ ಮಾಡಿದಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸಲು ಅನುಮತಿ ನೀಡಲಾಗುವುದು ಎಂದು ಅವರು ಬೇಡಿಕೆ ಟಿಪ್ಪಣಿಯಲ್ಲಿ ಗ್ಯಾಸ್ ಏಜೆನ್ಸಿಗೆ ಸೂಚನೆ ನೀಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗ್ರಾಹಕರಿಗೆ ನೈಸರ್ಗಿಕ ಅನಿಲ ಪೂರೈಸಲು ಗ್ಯಾಸ್ ಪೈಪ್‌ಲೈನ್ ಅಳವಡಿಸುವ ಸಲುವಾಗಿ ರಸ್ತೆಗಳನ್ನು ಓಪನ್ ಟ್ರೆಂಚ್ ವಿಧಾನದ ಮೂಲಕ ಕತ್ತರಿಸಲು ಅನುಮತಿ ಕೋರಿ ಮೆ॥ ಎಜಿ ಅಂಡ್ ಪಿ. ಸಿಟಿ ಗ್ಯಾಸ್ ಪ್ರೈ., ಲಿ. ಸಂಸ್ಥೆಯು 2022ರ ಮೇ 9ರಂದು ಪಾಲಿಕೆಗೆ ಮನವಿ ಸಲ್ಲಿಸಿತ್ತು.

ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಗ್ರಾಹಕರಿಗೆ ನೈಸರ್ಗಿಕ ಅನಿಲ ಸರಬರಾಜು ಮಾಡಲು ಗ್ಯಾಸ್ ಪೈಪ್‌ಲೈನ್ ಅಳವಡಿಕೆಗೆ ಸಾರ್ವಜನಿಕ ರಸ್ತೆಗಳನ್ನು ಕತ್ತರಿಸಬೇಕಾದಲ್ಲಿ ಅನುಮತಿ ಶುಲ್ಕ ಹಾಗೂ ಮೇಲ್ವಿಚಾರಣಾ ಶುಲ್ಕ ನಿಗದಿಪಡಿಸಿ ಸರ್ಕಾರ ಹೊರಡಿಸಿದ್ದ ಆದೇಶದಂತೆ ಹಣ ಜಮಾ ಮಾಡಲು ಗ್ಯಾಸ್ ಏಜೆನ್ಸಿಗೆ ಮೈಸೂರು ಮಹಾನಗರ ಪಾಲಿಕೆಯು ಲಿಖಿತ ಬೇಡಿಕೆ ಟಿಪ್ಪಣಿ ನೀಡಿದೆ. ಗ್ಯಾಸ್ ಪೈಪ್‌ಲೈನ್ ಅಳವಡಿಸುವ ಯೋಜನೆಗೆ ಕೆಲ ಜನಪ್ರತಿನಿಧಿಗಳು, ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತಾದರೂ, ಏಪ್ರಿಲ್ 29ರಂದು ಕೌನ್ಸಿಲ್ ಸಭೆಯಲ್ಲಿ ಅನುಮೋದನೆ ಆಗಿದ್ದರಿಂದ ಹಣ ಸಂದಾಯ ಮಾಡುವಂತೆ ಸೂಚಿಸಲಾಗಿದೆ.




> "ಮೈಸೂರಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸಲು ಏಪ್ರಿಲ್ 29ರಂದು ನಡೆದ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಅನುಮೋದಿಸಲಾಗಿದೆ ಎಂದು ಮೇಯರ್ ಪ್ರಕಟಿಸಿದ್ದರು. ಅದರನ್ವಯ ರಸ್ತೆ ಕತ್ತರಿಸುವ ಹಾಗೂ ಮೇಲ್ವಿಚಾರಣಾ ಶುಲ್ಕ ಪಾವತಿಸುವಂತೆ ಗ್ಯಾಸ್ ಏಜೆನ್ಸಿಗೆ ಬೇಡಿಕೆ ಟಿಪ್ಪಣಿ ನೀಡಲಾಗಿದೆ. ಡಿಡಿ ಮೂಲಕ ಹಣ ಪಾವತಿಸಿ ರಶೀದಿ ನೀಡಿದಲ್ಲಿ ಅಳವಡಿಕೆಗೆ ಗ್ಯಾಸ್ ಪೈಪ್‌ಲೈನ್ ನೀಡಲಾಗುವುದು. ಸಮಗ್ರವಾಗಿ ಚರ್ಚಿಸದೇ ಏಕಾಏಕಿ ನಿರ್ಧಾರ ಸರಿ ಇಲ್ಲ ಎಂದು ಕೆಲ ಪಾಲಿಕೆ ಸದಸ್ಯರು ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಕೌನ್ಸಿಲ್ ಸಭೆಯಲ್ಲಿ ಅನುಮೋದನೆಯಾಗಿರುವುದರಿಂದ ಅನುಮತಿ ನೀಡಬೇಕಾಗುತ್ತದೆ.
> -ಲಕ್ಷ್ಮೀಕಾಂತ ರೆಡ್ಡಿ, ಪಾಲಿಕೆ ಆಯುಕ್ತ.









ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಅಭಿನಂದನೆ



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕ ಪಡೆದ ಚಾರುಕೀರ್ತಿ, ಯಶಸ್ವಿನಿ ಅರಸ್ ಅವರನ್ನು ಮೈಸೂರು ಯುವ ಬಳಗದ ವತಿಯಿಂದ ಮೈಸೂರು ಪೇಟ ತೊಡಿಸಿ, ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮುಡಾ ಸದಸ್ಯ ನವೀನ್ ಕುಮಾರ್, ಇಳೈವಾರ್ ಸ್ವಾಮೀಜಿ, ಶ್ರೀನಿವಾಸ್, ಲಕ್ಷ್ಮಿ, ಸುದರ್ಶನ್, ವಿಘ್ನೇಶ್ವರ ಭಟ್, ಕಾಂತಿಲಾಲ್, ಪ್ರದೀಪ್ ಮಂಜುನಾಥ್ ನವೀನ್, ಸನತ್ ಉಪಸ್ಥಿತರಿದ್ದರು.

ವಿಪ್ರ ವಟುಗಳಿಗೆ ಸಾಮೂಹಿಕ ಉಪನಯನ

ಮೈಸೂರು,ಮೇ 23- ಮೈಸೂರಿನ ವಿಪ್ರ ವಟುಗಳಿಗೆ ಉಚಿತ ಉಪನಯನ (ಬ್ರಹ್ಮೋಪದೇಶ)ವನ್ನು ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮಮಂದಿರದಲ್ಲಿ ಜೂನ್ 12ರಂದು ಹಮ್ಮಿಕೊಳ್ಳಲಾಗಿದೆ. ಆಸಕ್ತರು ಮೇ 31 ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9449047608, 9481529770 ಸಂಪರ್ಕಿಸಬಹುದು.